ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಬಾಲಮುರಳಿಕೃಷ್ಣ ಇನ್ನಿಲ್ಲ



ಸಂಪುಟ 10 | ಸಂಚಿಕೆ 49 ಪುಟ 16 | ಡಿಸೆಂಬರ್ 4, 2016 | ರೂ. 10/-

web: www.janashakthi.co.in | e-mail : js_weekly@yahoo.com



ಆಪ್ತರ ಉದ್ಧಾರಕ್ಕೋ?
- ಮಾಜಿ ಗುರು ಓಝಾ

ಜಿಡಿಪಿ ಶೇ. 3 ಕಡಿತವಾಗಬಹುದು.




ತಂತ್ರಜ್ಞಾನದ ಗಿಮಿಕ್‌ಗಳು

ಮೋದಿ ಸಮೀಕ್ಷೆ ಕೇಳಿದ್ದು, ಕೇಳದ್ದು



ನವೆಂಬರ್ 28: ನೋಟು ನಿಷೇಧದ ವಿರುದ್ಧ 'ಆಕ್ರೋಶ ದಿನ'



ಜನತೆಯ ಮೇಲೆ ಯುದ್ಧ ಭ್ರಷ್ಟಾಚಾರದ ವಿರುದ್ಧ ಅಲ್ಲ

ಸಾಲ ಮನ್ನಾ, ಬರ ಪರಿಹಾರ : ಒಣ ಚರ್ಚೆ

ಬುಲೆಟ್ ರೈಲು ಗೀಳು ಬಿಡಿ, ಸುರಕ್ಷತೆಗೆ ಗಮನ ಕೊಡಿ

ನ. 18, ಜೈಲ್ ಭರೋ ಅನುಭವ

ಕಿಸಾನ್ ಸಂಘರ್ಷ ರ್ಯಾಲಿ: ಸರ್ಕಾರಕ್ಕೆ ಎಚ್ಚರಿಕೆ

ನೋಟುಗಳ ರದ್ದತಿ: ಜನಗಳ ಸಂಕಟಗಳನ್ನು ಹೆಚ್ಚಿಸುತ್ತಿರುವ ವಿರುದ್ಧ ಅಖಿಲ ಭಾರತ ಪ್ರತಿಭಟನಾ ಕಾರ್ಯಾಚರಣೆ : ಎಡಪಕ್ಷಗಳ ಕರೆ

ಜನಸಾಮಾನ್ಯರ ಅದರಲ್ಲೂ ನಮ್ಮ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ಕಷ್ಟ ಕಾರ್ಪಣ್ಯಗಳು ಹೆಚ್ಚುತ್ತಲೇ ಇವೆ. 1000ರೂಪಾಯಿ ಮತ್ತು 500 ರೂಪಾಯಿ ನೋಟುಗಳನ್ನು ರದ್ದು ಮಾಡುವ ಸರಕಾರದ ನಿರ್ಧಾರದಿಂದಾಗಿ ಈಗಾಗಲೇ 70ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ. ಇದರ ವಿರುದ್ಧ ಅಖಿಲ ಭಾರತ ಪ್ರತಿಭಟನೆಯನ್ನು ಸಂಗಟಿಸಲು ಎಡಪಕ್ಷಗಳು ನಿರ್ಧರಿಸಿವೆ.

ದುಡಿಯುವ ಜನರ ಎಲ್ಲ ವಿಭಾಗಗಳು, ಮೀನುಗಾರರು, ಕೃಷಿ ಕೂಲಿಕಾರರು, ಮನರೇಗ ಕೆಲಸಗಾರರು, ರೈತರು ಮತ್ತು ಬಹುಪಾಲು ಗ್ರಾಮೀಣ ಜನಗಳು, ಅಂದರೆ ನಗದು ವ್ಯವಹಾರಗಳ ಮೇಲೆಯೇ ಅವಲಂಬಿಸಬೇಕಾದವರು ಹೇಳಲಾರದ ಸಂಕಟಗಳಿಗೆ ಗುರಿಯಾಗಿದ್ದಾರೆ.

ಕೇಂದ್ರ ಸರಕಾರ ಸರಿಯಾಗಿ ಯೋಚಿಸದರ, ಸಿದ್ದತೆ ಮಾಡಿಕೊಳ್ಳದೆ ಈ ಕೆಲಸಕ್ಕೆ ಕೈಹಾಕಿದೆ. ಎರಡು ವಾರಗಳ ನಂತರವೂ ಬ್ಯಾಂಕುಗಳಲ್ಲಿ ಹಿಂತೆ-ಗೆದುಕೊಂಡ ನೋಟುಗಳಮೌಲ್ಯದ 10ಶೇಕಡಾದಷ್ಟು ಹೊಸ ನೋಟುಗಳೂ ತಮಗೆ ಇನ್ನೂ ತಲುಪಿಲ್ಲ ಎನ್ನುತ್ತಿವೆ. ಕೋಟ್ಯಂತರ ಜನಗಳು ತಮ್ಮ ದೈನಂದಿನ ಪ್ರಾಥಮಿಕ ವಿನಿಮಯಗಳಿಗೆ ಬೇಕಾದ ಹಣವೂ ಸಿಗದಂತಾಗಿ ಒದ್ದಾಡುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ಘೋಷಿತ ಡಿಸೆಂಬರ್30ರ ವರೆಗೆ, ಅಥವ ಪರ್ಯಾಯ ವ್ಯವಸ್ಥೆಯನ್ನು ಏರ್ಪಡಿಸುವ ವರೆಗೆ ಮತ್ತು ಅಗತ್ಯ ಪ್ರಮಾಣದಲ್ಲಿ ಹೊಸ ನೋಟುಗಳನ್ನು ಲಭ್ಯಗೊಳಿಸುವ ವರೆಗೆ 1000 ಮತ್ತು 500 ರೂಪಾಯಿ ನೋಟುಗಳನ್ನು ಎಲ್ಲ ಕಾನೂನುಬದ್ಧ, ನ್ಯಾಯಬದ್ಧ ವ್ಯವಹಾರಗಳಲ್ಲಿ ಬಳಸಲು ಅವಕಾಶ ನೀಡಬೇಕು ಎಮದು ಎಡಪಕ್ಷಗಳು ಆಗ್ರಹಿಸುತ್ತಿವೆ. ಗ್ರಾಮೀಣ ಹಣಕಾಸಿನ ಜೀವನಾಡಿಯಾದ ಸಹಕಾರಿ ಬ್ಯಾಂಕುಗಳು ಎಲ್ಲ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲು ಅಬಿಡಬೇಕು ಎಂದೂ ಅವು ಆಗ್ರಹಿಸುತ್ತಿವೆ.

ಕೇಂದ್ರ ಸರಕಾರ ಕ್ರಿಮಿನಲ್ ರೀತಿಯಲ್ಲಿ ಜನಸಾಮಾನ್ಯರ ಸಂಕಟಗಳನ್ನು ನಿರ್ಲಕ್ಷಿಸುತ್ತಿರುವುದರಿಂದ ಎಡಪಕ್ಷಗಳು ನವಂಬರ್ 24ರಿಂದ 30 ರವರೆಗೆ ಒಂದು ವಾರದ ಅಖಿಲ ಭಾರತ ಸಾಮೂಹಿಕ ಅಣಿನೆರಿಕೆಯ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿವೆ.

ರೈತರ ಎಲ್ಲ ಸಾಲಗಳನ್ನು ತಕ್ಷಣವೇ ಮನ್ನಾ ಮಾಡಬೇಕು, ಕಾರ್ಪೋರೇಟ್‌ಗಳ 11 ಲಕ್ಷ ಕೋಟಿ ರೂ.ಗಳ ಸುಸ್ತಿ ಸಾಲಗಳನ್ನು ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ವಸೂಲಿ ಮಾಡಬೇಕು, ಸಹಾರ-ಬಿರ್ಲಾ ದಾಖಲೆಗಳು ತೋರ್ಪಡಿಸಿರುವ ಅಂಶಗಳ ಬಗ್ಗೆ ತನಿಖೆ ನಡೆಸಿ ಕ್ರಿಮಿನಲ್ ಕಲಾಪಗಳನ್ನು ಆರಮಭಿಸಬೇಕು, ತೆರಿಗೆ ವಂಚನೆಯ ದೇಶಗಳೊಡನೆ ದುಪ್ಪಟ್ಟು ತೆರಿಗೆ ಒಪ್ಪಂದಗಳನ್ನೆಲ್ಲ ರದ್ದು ಮಾಡಬೇಕು, ವಿದೇಶಿ ಬ್ಯಾಂಕ್ ಖಾತೆದಾರರ ಹೆಸರುಗಳನ್ನು ಪ್ರಕಟಿಸಬೇಕು ಮತ್ತು ಅವರ ಮೇಲೆ ಕ್ರಮಗಳನ್ನು ಜರುಗಿಸಬೇಕು ಎಂಬುದು ಕಪ್ಪು ಹಣವನ್ನು ದಮನ ಮಾಡಲು ಎಡಪಕ್ಷಗಳು ಮುಂದಿಟ್ಟಿರುವ ಬೇಡಿಕೆಗಳು. ಈ ಕ್ರಮಗಳಿಲ್ಲದೆ ಕಪ್ಪು ಹಣದ ವಿರುದ್ಧದ ಸರಕಾರದ ಬಹು ಪ್ರಚಾರಿತ ಬೊಬ್ಬೆ ಟೊಳ್ಳಾಗಿ ಕಾಣುತ್ತವೆ. ಸರಕಾರ ಜೀವ ಕಳಕೊಂಡವರ ಕುಟುಂಬಗಳಿಗೆ ಮತ್ತು ಯಾರ್‍ಯಾರ ಬದುಕನ್ನು ಹಾಳುಗೆಡವಿದೆಯೋ ಅವರೆಲ್ಲರಿಗೆ ಸಾಕಷ್ಟು ಪರಿಹಾರವನ್ನು ಕೊಡಬೇಕು ಎಂದು ಎಡಪಕ್ಷಗಳು ಆಗ್ರಹಿಸುತ್ತಿವೆ.

ಸರಕಾರದ ಈ ನಿರ್ಧಾರವನ್ನು ವಿರೋಧಿಸು ವವರೆಲ್ಲರೂ ಈ ಕಾರ್ಯಾಚರಣೆಗಳಲ್ಲಿ ಸೇರಿಕೊಳ್ಳಬೇಕು ಎಂದು ಎಡಪಕ್ಷಗಳು ಮನವಿ ಮಾಡಿವೆ.

ನವಂಬರ್ 28: ನೋಟು ರದ್ದತಿ ಸಂಕಟಗಳ ವಿರುದ್ಧ 'ಅಖಿಲ ಭಾರತ ಪ್ರತಿಭಟನಾ ದಿನ':ಸಿಪಿಐ(ಎಂ)ಪೊಲಿಟ್‌ಬ್ಯುರೊ ಕರೆ

1000 ಮತ್ತು 500 ರೂಪಾಯಿ ನೋಟುಗಳ ಚಲಾವಣೆ ಹಿಂತೆಗೆದುಕೊಂಡಿರುವುದರಿಂದ ಜನಗಳ ಮೇಲೆ ಹೇರಿರುವ ಸಂಕಟಗಳ ವಿರುದ್ಧ ನವಂಬರ್ 24ರಿಂದ 30 ರ ವರೆಗೆ ಒಂದು ವಾರ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಆರು ಎಡಪಕ್ಷಗಳು ನವಂಬರ್ 22ರಂದು ನಿರ್ಧರಿಸಿದ್ದವು.

ನಂತರ ಸಂಸತ್ತಿನಲ್ಲಿನ ಪ್ರತಿಪಕ್ಷಗಳು ನವಂಬರ್ 28ನ್ನು ಅಖಿಲ ಭಾರತ ಪ್ರತಿಭಟನಾದಿನ- 'ಆಕ್ರೋಶ ದಿವಸ'-ವಾಗಿ ಆಚರಿಸಲು ಪ್ರತ್ಯೇಕವಾಗಿ ಕರೆ ನೀಡಿವೆ.

500 ಮತ್ತು 1000ದ ನೋಟುಗಳನ್ನು ಹಿಂತೆಗೆದುಕೊಂಡಿರುವುದು, ಅದರಿಂದಾಗಿ ದೇಸದಲ್ಲಿ ಉಂಟಾಗಿರುವ ಅರಾಜಕತೆ ಮತ್ತು ಅದರಿಂದಾಗಿ ನಮ್ಮ ಬಹುಪಾಲು ಜನತೆಯ, ಅದರಲ್ಲೂ ಬಡ ಮತ್ತು ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ಸಂಕಟಗಳನ್ನು ಹೆಚ್ಚುಸುತ್ತಿರುವುದರ ವಿರುದ್ಧ ನವಂಬರ್ 28ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಸಂಗಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಆಯಾಯ ರಾಜ್ಯಗಳ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ ಪ್ರತಿಭಟನೆಯ ಸ್ವರೂಪವನ್ನು -ಸಾಮೂಹಿಕ ಮತಪ್ರದರ್ಶನ, ಧರಣಿ, ಆರ್‌ಬಿಐ, ಕೇಂದ್ರ ಸರಕಾರಿ ಕಚೇರಿಗಳ ಪಿಕೆಟಿಂಗ್, ರಾಸ್ತಾ ರೋಕೋ, ರೈಲ್ ರೋಕೋ , ವಾಣಿಜ್ಯ ಅಥವ ಸಾರ್ವತ್ರಿಕ ಹರತಾಳ ಇತ್ಯಾದಿ- ನಿರ್ಧರಿಸಬೇಕು ಎಂದು ಅದು ತನ್ನ ರಾಜ್ಯಸಮಿತಿಗಳಿಗೆ ಹೇಳಿದೆ, ಇವನ್ನು ಇತರ ಎಡಪಕ್ಷಗಳು ಮತ್ತು ಮಿತ್ರಪಕ್ಷಗಳ ಜತೆ ಸಮಾಲೋಚನೆಗಳನ್ನು ನಡೆಸಿ ಮಾಡಲಾಗುವುದು.

ಈ ಕಾರ್ಯಾಚರಣೆಯ ಪ್ರಮುಖ ಬೇಡಿಕೆ ಹೊಸ ಕರೆನ್ಸಿ ನೋಟುಗಳನ್ನು ಲಭ್ಯಗೊಳಿಸಲು ಪರ್ಯಾಯ ವಯವಸ್ಥೆಯಾಗುವ ವರೆಗೆ ಅಥವ ಸರಕಾರವೇ ಹಾಕಿರುವ ಸಮಯ ಮಿತಿ ಅಂ-ದರೆ ಡಿಸೆಂಬರ್30 ರ ವರೆಗೆ 1000 ಮತ್ತು 500 ರೂಪಾಯಗಳ ನೋಟುಗಳನ್ನು ಎಲ್ಲ ಕಾನೂನಾತ್ಮಕ ವ್ಯವಹಾರಗಳು, ಪಾವತಿಗಳು ಮತ್ತು ಇತ್ಯರ್ಥಗಳಲ್ಲಿ ಬಳಸಲು ಅವಕಾಶ ನೀಡಬೇಕು ಎಂಬುದು.

ಜನಗಳ ಮೇಲೆ ಸಂಕಟಗಳನ್ನು ಹೇರಿರುವ ನೋಟು ನಿಷೇಧದ ವಿರುದ್ಧ ಸುಪ್ರಿಂ ಕೋರ್ಟ್ ಮೆಟ್ಟಿಲೇರಿದ ಸಿಪಿಐ(ಎಂ)

1000 ಮತ್ತು 500 ರೂಪಾಯಿಗಳ ನೋಟುಗಳನ್ನು ಹಿಂತೆಗೆದುಕೊಳ್ಳುವ ಕ್ರಮದಿಂದ ಜನಗಳಿಗಾಗಿರುವ ಅಪಾರ ಸಂಕಟಗಳ ಬಗ್ಗೆ ಗಮನ ಹರಿಸಲು ಮೋದಿ ಸರಕಾರ ನಿರಾಕರಿಸುತ್ತಿರುವ ಪ್ರಶ್ನೆಯನ್ನು ಸಿಪಿಐ(ಎಂ) ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಒಯ್ದಿದೆ. ಪಕ್ಷದ ಪರವಾಗಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಸರಕಾರದ ಕ್ರಮಕ್ಕೆ ಸವಾಲು ಹಾಕುವ ಅರ್ಜಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿದ್ದಾರೆ.

ಸರಕಾರದ ಈ ಕ್ರಮ ಜನ-ವಿರೋಧಿಯಾಗಿದೆ. ನ್ಯಾಯಾಲಯ ಮಧ್ಯಪ್ರವೇಶಿಸಿ ಡಿಸೆಂಬರ್ 30ರ ವರೆಗೆ ಅಥವ ಸಾಕಷ್ಟು ಪ್ರಮಾಣದಲ್ಲಿ ಹೊಸ ಕರೆನ್ಸಿ ನೋಟುಗಳನ್ನು ಲಭ್ಯಗೊಳಿಸುವ ವರೆಗೆ 500 ರೂಪಾಯಿ ಮತ್ತು 1000ರೂಪಾಯಿಗಳ ಹಳೆಯ ನೋಟುಗಳನ್ನು ಬಳಸಲು ಅವಕಾಶ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಸಮಯಬದ್ಧ ರೀತಿಯಲ್ಲಿ ಸಾಕಷ್ಟು ಕರೆನ್ಸಿ ನೋಟುಗಳನ್ನು ಪೂರೈಕೆ ಮಾಡಲು ಸರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಸರಕಾರ ತಿಳಿಸಬೇಕು ಎಂದೂ ಅರ್ಜಿಯಲ್ಲಿ ಕೇಳಲಾಗಿದೆ.

ಈ ಯೋಜನೆ ಕಪ್ಪು ಹಣವನ್ನು ದಮನ ಮಾಡುವಲ್ಲಿ ಯಾವ ನಿರೀಕ್ಷಿತ ಪರಿಣಾಮವನ್ನೂ ಬೀರಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

"2015-16ರಲ್ಲಿ ನಕಲಿ ಕರೆನ್ಸಿ ನೋಟುಗಳ ಪ್ರಮಾಣ 100ರೂ. ನೋಟುಗಳಲ್ಲಿ 0.002ಶೇ. ಇತ್ತು, 500ರೂ. ನೋಟುಗಳಲ್ಲಿ 0.009 ಶೇ. ಇತ್ತು. ಯಾವುದೇ ಒಂದು ಸಮಯದಲ್ಲಿ ಕೇವಲ 400 ಕೋಟಿ ರೂ.ಗಳಷ್ಟು ನಕಲಿ ನೋಟುಗಳು ಮಾತ್ರ ಚಲಾವಣೆಯಲ್ಲಿರುತ್ತವೆ ಎಂದು ಸರಕಾರ ಅಂದಾಜು ಮಾಡಿದೆ" ಎಂದಿರುವ ಸಿಪಿಐ(ಎಂ) ಅರ್ಜಿ ಈ ಯೋಜನೆ ಕಪ್ಪು ಹಣವನ್ನು ವಸೂಲಿ ಮಾಡುತ್ತದೆ ಎಂಬ ಸರಕಾರದ ಘೋಷಣೆಯನ್ನು ಟೀಕಿಸಿದೆ.


ಕಪ್ಪು ಹಣ ಉತ್ಪತ್ತಿಯಾಗುವುದು ಮಾರಾಟ, ರಸೀದಿಗಳು, ಖರ್ಚುಗಳು, ಉತ್ಪಾದನೆ, ಬಂಡವಾಳ ಸ್ಟಾಕಿನ ಮೌಲ್ಯ ಮುಂತಾದವುಗಳಲ್ಲಿ ನಡೆಸುವ ಕೈಚಳಕಗಳಿಂದ ಎಂದಿರುವ ಅರ್ಜಿ "ಕಪ್ಪು ಹಣ ಪ್ರಹಾರದ ಗುರಿಯಾಗಿದ್ದರೆ, ಅದಕ್ಕೆ ಬಹುಮುಖೀ ನಿಲುವು ಮತ್ತು ಪರಿಣಾಮಕಾರಿ ತೆರಿಗೆ ಆಡಳಿತ ಬೇಕಾಗುತ್ತದೆ. ಅಲ್ಲದೆ ಕಳೆದ ಐದು ವರ್ಷಗಳಲ್ಲಿ ಆದಾಯ ತೆರಿಗೆ ದಾಳಿಗಳಲ್ಲಿ ಕಂಡು ಬಂದಿರುವ ಸಂಗತಿಯೆಂದರೆ ಕಪ್ಪು ಹಣದ ಕೇವಲ 5ರಿಂದ 6ಶೇ. ಮಾತ್ರ ನಗದು ರೂಪದಲ್ಲಿರುತ್ತದೆ, ಉಳಿದದ್ದೆಲ್ಲ ರಿಯಲ್ ಎಸ್ಟೇಟ್, ಚಿನ್ನ ಮುಂತಾದವುಗಳಲ್ಲಿ ಸಂಗ್ರಹವಾಗಿರುತ್ತವೆ" ಎಂಬ ಸಂಗತಿಯತ್ತ ಅರ್ಜಿ ಗಮನ ಸೆಳೆದಿದೆ.

ದೊಡ್ಡ ಸಾಲ ಸುಸ್ತಿಗಾರರ ಬಗ್ಗೆ ಸರಕಾರದ ನಯ ನಿಲುವು ಕೂಡ ಈ ಬಗ್ಗೆ ಅದರ ಪ್ರಾಮಾಣಿಕತೆಯ ಮೇಲೆ ಪ್ರಶ್ನೆಗಳನ್ನು ಎತ್ತುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಉನ್ನತ ಮೌಲ್ಯದ ಕರೆನ್ಸಿಯನ್ನು ಕಪ್ಪು ಹಣವನ್ನು ಬಚ್ಚಿಡಲು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ಸರಕಾರ ಹೇಳಿಕೊಳ್ಳುತ್ತಿರುವುದು ಅದು 2000 ರೂಪಾಯಿಗಳ ಹೊಸ ನೋಟುಗಳನ್ನು ಹೊರಡಿಸಿರುವ ಹಿನ್ನೆಲೆಯಲ್ಲಿಯೂ ಪ್ರಶ್ನಾರ್ಹವಾಗಿದೆ.

"ಬಡವರ ಮೇಲೆ ಈ ಕ್ರಮದಿಂದಾಗಿ ಪ್ರತಿಕೂಲ ಪರಿಣಾಮ ಬಿದ್ದಿದೆ. ಏಕೆಂದರೆ ಕೇವಲ 30 ಶೇಕಡಾ ಮಂದಿಗೆ ಮಾತ್ರ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಳಸಿಕೊಳ್ಳಲು ಸಾಧ್ಯವಾಗಿದೆ. ದೇಶಾದ್ಯಂತ ಬ್ಯಾಂಕುಗಳ ಹರಡಿಕೆ ಅಸಮ ರೀತಿಯಲ್ಲಿದೆ. ಅದು ದರ್ಜೆ 1 ಮತ್ತು 2 ನಗರಗಳಲ್ಲಿ ಕೇಂದ್ರೀಕೃತವಾಗಿದೆ. ಅದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬದುಕುತ್ತಿರುವ ಜನಗಳು ಈ ಅನಾಣ್ಯೀಕರಣಕ್ಕೆ ಹೆಚ್ಚು ಬಲಿಯಾಗುವವರು" ಎಂದು ಸೀತಾರಾಮ್ ಯೆಚೂರಿ ಈ ಅರ್ಜಿಯಲ್ಲಿ ಹೇಳಿದ್ದಾರೆ.

ಮಾತೆಂದರೆ ಇದು



ನೀವು ಎಲ್ಲರನ್ನೂ
ಕೆಲಹೊತ್ತು ಮರುಳು
ಮಾಡಬಹುದು,
ಕೆಲವರನ್ನು ಯಾವಾಗಲೂ
ಮರುಳು ಮಾಡಬಹುದು,
ಆದರೆ ನೀವು ಎಲ್ಲರನ್ನೂ
ಯಾವಾಗಲೂ ಮರುಳು
ಮಾಡುವುದು ಸಾಧ್ಯವಿಲ್ಲ,

– ಅಬ್ರಹಾಂ ಲಿಂಕನ್

(ವಿ.ಸೂ. ಇದು ಮೋದಿ–ಮೋದಿ ಭಕ್ತರ ಬಗ್ಗೆ ಹೇಳಿದ್ದಲ್ಲ)

ಬುಲೆಟ್ ರೈಲುಗಳ ಗೀಳು ಬಿಟ್ಟು ರೈಲು ಸುರಕ್ಷಾ ವ್ಯವಸ್ಥೆಯನ್ನು ಉತ್ತಮಪಡಿಸಲು ಆದ್ಯತೆ ನೀಡಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ನವಂಬರ್ 20ರ ಮುಂಜಾವಿನಲ್ಲಿ ಕಾನ್ಪುರದ ಸಮೀಪ ಇರುವ ಪುಕ್ರಯಾನ್‌ನಲ್ಲಿ ಇಂದೋರ್-ಪಾಟ್ನಾ ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ ಸತ್ತಿರುವವರ ಸಂಖ್ಯೆ ಈಗ '146 ತಲುಪಿದೆ, ಗಾಯಗೊಂಡಿರುವವರ ಸಂಖ್ಯೆ ಸುಮಾರು 250.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸಾವು-ನೋವುಗಳ ಬಗ್ಗೆ ಆಘಾತ ವ್ಯಕ್ತಪಡಿಸುತ್ತ ಸತ್ತವರ ಕುಟುಂಬಗಳಿಗೆ ಆಳವಾದ ಸಂತಾಪವನ್ನು ಮತ್ತು ಗಾಯಗೊಂಡಿರುವವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದೆ.

ರೈಲು ಅಪಘಾತಗಳು ಆಘಾತ ಉಂಟು ಮಾಡುವ ರೀತಿಯಲ್ಲಿ ನಿಯಮಿತವಾಗಿ ನಡೆಯುತ್ತಿವೆ. ಆದರೂ ರೈಲ್ವೆ ಮಂತ್ರಾಲಯ ಮತ್ತು ಸರಕಾರ ನಿದ್ರಾವಸ್ಥೆಯಿಂದ ಎಚ್ಚೆತ್ತು ರೈಲ್ವೆಯ ಶೋಚನೀಯ ಪರಿಸ್ಥಿತಿ ಮತ್ತು ಅತ್ಯಂತ ಕಳಪೆ ಸುರಕ್ಷತಾ ಮಟ್ಟದ ಪ್ರಶ್ನೆಗಳನ್ನು ಎದುರಿಸುತ್ತಿಲ್ಲ. ರೈಲ್ವೆ ವಿಭಾಗದಲ್ಲಿ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಇದ-ರಿಂದಾಗಿ ಸಿಬ್ಬಂದಿ ಕೊರತೆ ಮತ್ತು ಹೆಚ್ಚಿಸಿದ ಕೆಲಸದ ಅವಧಿಯಿಂದ ಈಗಿರುವ ಸಿಬ್ಬಂದಿಯ ಮೇಲೆ ಕೆಲಸದ ಒತ್ತಡಗಳು ಹೆಚ್ಚುತ್ತಿವೆ. ರೈಲ್ವೆ ಸುರಕ್ಷಿತತೆ, ಸುರಕ್ಷಾ ಉಪಕರಣಗಳ ಮಟ್ಟ ಹೆಚ್ಚಿಸುವುದು, ಸಿಗ್ನಲ್ ಮತ್ತು ಹಳಿ ವ್ಯವಸ್ಥೆಯ ಬಗ್ಗೆ ಆದ್ಯತೆ ನೀಡುವ ಬದಲು ಸರಕಾರ ಬುಲೆಟ್ ರೈಲುಗಳನ್ನು ಆರಂಭಿಸುವುದರಲ್ಲೇ ಹೆಚ್ಚು ಆಸಕ್ತಿ ತೋರಿಸುತ್ತಿದೆ ಎಂದು ಸಿಪಿಐ(ಎಂ) ಆತಂಕ ವ್ಯಕ್ತಪಡಿಸಿದೆ.

ಈ ವಿಷಯದಲ್ಲೂ ಔಪಚಾರಿಕ ತನಿಖೆಯ ಆದೇಶ ನೀಡಲಾಗುತ್ತದೆ. ಇದೂ ಹಿಂದಿನ ತನಿಖೆಗಳಂತೆ ಅಪ್ರಕಟಿತವಾಗಿ ಉಳಿಯಬಾರದು. ಸರಕಾರ ಇಂತಹ ತನಿಖೆಗಳ ವರದಿಗಳನ್ನು ಸಾರ್ವಜನಿಕಗೊಳಿಸಬೇಕು, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಇಷ್ಟೊಂದು ಜೀವಗಳ ಬಲಿ ತೆಗೆದುಕೊಂಡ ಇಂತಹ ಒಂದು ದೊಡ್ಡ ಅಪಘಾತದ ಬಗ್ಗೆ ಪ್ರಧಾನ ಮಂತ್ರಿಗಳಾಗಲೀ, ರೈಲ್ವೆ ಮಂತ್ರಿಗಳಾಗಲೀ, ಸಾಮೂಹಿಕವಾಗಿ ಕೇಂದ್ರ ಸಂಪುಟವಾಗಲೀ ಹೊಣೆ ತಗೊಳ್ಳಲು ಹಿಂಜರಿಯುತ್ತಿರುವುದು ಅತ್ಯಂತ ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಬರ ಪರಿಹಾರ, ಸಾಲಮನ್ನಾ: ರಾಜಕೀಯ ಇಚ್ಛಾಶಕ್ತಿ ಇಲ್ಲದ ಒಣಚರ್ಚೆ

ಸಂಪಾದಕೀಯ

ಬರಪರಿಹಾರ, ಸಾಲಮನ್ನಾ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲದ ಚಳಿಗಾಲದ ಅಧಿವೇಶದಲ್ಲಿ ಚರ್ಚೆ ಆಯಿತು. ಬೇರೆ ಕೆಲಸಕ್ಕೆ ಬಾರದ ಜುಜುಬಿ ವಿಷಯಗಳ ಬಗ್ಗೆ ಕಾಲಹರಣ ಗದ್ದಲಗಳನ್ನು ಮಾಡದೆ ಈ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ಆಯಿತು ಎಂಬುದಷ್ಟೇ ಸಮಾಧಾನದ ವಿಷಯ. ಆದರೆ ಚರ್ಚೆಯ ಹೂರಣ, ಗಂಭೀರತೆ, ಪರಿಣಾಮಗಳನ್ನು ನೋಡಿದರೆ ಈ ಸಮಾಧಾನ ಕರಗಿ ಹೋಗುತ್ತದೆ. ಚರ್ಚೆಯನ್ನು ಎತ್ತಿಕೊಳ್ಳಲಾಯಿತು ಎನ್ನುವುದೂ ಭೂಮಿ–ವಸತಿ ಮತ್ತಿತರ ಗ್ರಾಮೀಣ ಬಡವರ ವಿವಿಧ ಹಕ್ಕೊತ್ತಾಯಗಳಿಗಾಗಿ ನವೆಂಬರ್ 18ರಂದು ರಾಜ್ಯಾದ್ಯಂತ ನಡೆದ ಸಮರಶೀಲ ಜೈಲುಭರೋ ಚಳುವಳಿ ಹಾಗೂ ಸದನ ನಡೆಯುತ್ತಿರುವಾಗ ನಡೆದ ಇತರ ರೈತ ಸಂಘಟನೆಗಳ ಮುತ್ತಿಗೆಗಳ ಪರಿಣಾಮವೂ ಇರಬಹುದು.

ಚರ್ಚೆ ಆರಂಭವಾಗಿದ್ದೇ ಎಚ್.ಡಿ.ಕುಮಾರಸ್ವಾಮಿ ಅವರ 'ಅಧಿಕಾರಕ್ಕೆ ಬಂದು ಕೇವಲ 24 ಗಂಟೆಯಲ್ಲಿ ರೈತರ ಸಾಲ ಮನ್ನಾ ಮಾಡದೇ ಇದ್ದರೆ ಒಂದು ಕ್ಷಣವೂ ಕುರ್ಚಿಯಲ್ಲಿ ಇರುವುದಿಲ್ಲ' ಎಂಬ ವೀರ ಘೋಷಣೆಯಿಂದ. 'ಸಾಲ ಮನ್ನಾ ಮಾಡಲು ಬೊಕ್ಕಸದಲ್ಲಿ ಹಣವಿಲ್ಲ ಎಂದು ಸಚಿವ ಸಂಪುಟ ಸಭೆಯಲ್ಲಿ ಯಡಿಯೂರಪ್ಪ ವಿರೋಧ ವ್ಯಕ್ತಪಡಿಸಿದ್ದರು. ಆದರೂ ಹಠ ಹೊತ್ತು ರೂ. 2500 ಕೋಟಿ ಮೊತ್ತದ ಸಾಲ ಮನ್ನಾ ಮಾಡಿದೆ' ಅವರ ಹೇಳಿಕೆ ಚರ್ಚೆಯನ್ನು ಪಕ್ಷಗಳ 'ಯಾರು ರೈತ–ಪರ , ಯಾರು ರೈತ–ವಿರೋಧಿ?' ಎಂಬ ಪಕ್ಷ ರಾಜಕಾರಣದ ಮೇಲಾಟ–ಪೈಪೋಟಿಯತ್ತ ತಳ್ಳಿತು.

'ರಾಜ್ಯ ಸರ್ಕಾರ ಸಾಲ ಮನ್ನಾ ಮಾಡಿದರೆ ಎಲ್ಲಾ ರೈತರಿಗೂ ಅನುಕೂಲವಾಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕ್ ಗಳು ರೈತರಿಗೆ ನೀಡಿರುವ ಅರ್ಧದಷ್ಟು ಸಾಲವನ್ನು ಕೇಂದ್ರ ಮನ್ನಾ ಮಾಡಲಿ, ಉಳಿದ ಮೊತ್ತವನ್ನು ರಾಜ್ಯ ಸರ್ಕಾರ ಭರಿಸಲಿದೆ. ಶೇ 20 ರಷ್ಟು ರೈತರು ಸಹಕಾರಿ ಬ್ಯಾಂಕ್ ಗಳಲ್ಲಿ ರೂ. 10 ಸಾವಿರ ಕೋಟಿ ಸಾಲ ಪಡೆದಿದ್ದಾರೆ. ಶೇ 80ರಷ್ಟು ರೈತರು ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ರೂ. 35 ಸಾವಿರ ಕೋಟಿ ಸಾಲ ಪಡೆದಿದ್ದಾರೆ' ಎಂಬ ಮುಖ್ಯಮಂತ್ರಿಯವರ ವಿವರಣೆಯನ್ನು ವಿರೋಧ ಪಕ್ಷಗಳು 'ಪಲಾಯನವಾದ' ಎಂದು ಜರೆದವು. ಇದಕ್ಕೆ ಪ್ರತಿಕ್ರಿಯೆಯಾಗಿ ಸಿದ್ದರಾಮಯ್ಯ, 'ಕಳೆದ ವರ್ಷ ಭೀಕರ ಬರ ಇತ್ತು. ಸಾಲ ಮನ್ನಾ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಒಂದೂವರೆ ಗಂಟೆ ಮನವರಿಕೆ ಮಾಡಿದ್ದೆ. ಈಗಲೂ ಪತ್ರ ಬರೆಯಲು ತಯಾರು. ನೀವು ಮನ್ನಾ ಮಾಡಿಸಲು ಸಿದ್ಧರಿದ್ದೀರಾ?' ಎಂದು ಪ್ರಶ್ನಿಸಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ಸಾಲಮನ್ನಾ ಮಾಡಿದ್ದೆ. ಅದಕ್ಕೆ ವ್ಯಾಟ್ ಜಾಸ್ತಿ ಮಾಡಿದ್ದೆ. ಕೇಂದ್ರದಿಂದ ನೆರವು ಕೇಳಿರಲಿಲ್ಲ. ರಾಜಕೀಯ ಬಿಟ್ಟು, ರೈತರ ಪರ ಕೆಲಸ ಮಾಡಿ' ಎಂದು ಬಿಜೆಪಿಯ ಶೆಟ್ಟರ್ ದಾಳಿಗೆ, 'ಅಧಿಕಾರದ ಕೊನೆ ದಿನಗಳಲ್ಲಿ ನೀವು ಸಾಲ ಮನ್ನಾ ಘೋಷಣೆ ಮಾಡಿದಿರಿ. ಅದರ ಹೊರೆಯನ್ನು ನಾನು ತೀರಿಸಿದ್ದೇನೆ. ಬೊಕ್ಕಸಕ್ಕೆ ರೂ. 2,500 ಕೋಟಿ ತುಂಬಿಸಿ, ಸಾಲಮನ್ನಾ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಪ್ರತಿದಾಳಿ ಮಾಡಿದರು. ಪರಿಷತ್ತಿನಲ್ಲಿ ಸಭಾನಾಯಕ ಜಿ. ಪರಮೇಶ್ವರ್ "ಕೇಂದ್ರ ಸರಕಾರ ಅರ್ಧ ಪಾಲು ಭರಿಸದ ಹೊರತು ರೈತರ ಸಾಲ ಮನ್ನಾ ಮಾಡಲು ಸಾಧ್ಯವಿಲ್ಲ. ಕೇಂದ್ರದ ನೆರವು ನಿರೀಕ್ಷಿಸಿ ಸಾಲ ಮನ್ನಾ ಮಾಡಿದ್ದ ನೆರೆಯ ಆಂಧ್ರಪ್ರದೇಶ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಹೀಗಾಗಿ, ಕೇಂದ್ರದ ತಾತ್ವಿಕ ಒಪ್ಪಿಗೆಯೂ ಸಿಗದೆ ಸರಕಾರ ಮುಂದುವರಿಯಲು ಸಾಧ್ಯವಿಲ್ಲ," ಎಂದು ಸ್ಪಷ್ಟಪಡಿಸಿದರು.

ಈ ರೀತಿ ಮೂರೂ ಪಕ್ಷಗಳ, ಕೇಂದ್ರ–ರಾಜ್ಯ ಸರಕಾರಗಳ ನಡುವೆ ಮೇಲಾಟ–ಪೈಪೋಟಿ ಆಪಾದನೆಗಳ ಕೆಸರಾಟ ನಡೆಯಿತೇ ವಿನಹ ಯಾವುದೇ ಸಕಾರಾತ್ಮಕ ಪರಿಹಾರ ಮೂಡಿಬರಲಿಲ್ಲ. ಬಿಜೆಪಿ ನಾಯಕರು ತಮ್ಮ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿ ಸಾಲಮನ್ನಾದ ಅರ್ಧ ಒದಗಿಸುವ ಪ್ರಯತ್ನ ಮಾಡುತ್ತೇವೆ ಎಂಬ ಭರವಸೆ ನೀಡಲಿಲ್ಲ. ರಾಜ್ಯ ಸರಕಾರ ತಾನು ಸಾಲಮನ್ನಾ ಮಾಡುತ್ತೇನೆ ಎಂದು ಮುಂದೆ ಬರಲೂ ಇಲ್ಲ.

ಇದೇ ರೀತಿಯ ಚರ್ಚೆ ಬರ ಪರಿಹಾರದ ಬಗ್ಗೆನೂ ನಡೆಯಿತು."ಬರ ಪರಿಸ್ಥಿತಿ ನಿರ್ವಹಿಸಲು ರಾಜ್ಯ ಸರಕಾರ ಸಮರೋಪಾದಿ ಸಿದ್ಧತೆ ಮಾಡಿಕೊಂಡಿದೆ. ಜಿಲ್ಲಾಧಿಕಾರಿಗಳಿಗೆ 232 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಬರಪೀಡಿತ ತಾಲೂಕುಗಳಿಗೆ ತಲಾ 60 ಲಕ್ಷ ರೂ. ಹಾಗೂ ಬರ ಇಲ್ಲದ ತಾಲೂಕುಗಳಿಗೆ ತಲಾ 40 ಲಕ್ಷ ರೂ. ಕುಡಿಯುವ ನೀರು ಪೂರೈಕೆ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆ. ಪ್ರಕತಿ ವಿಕೋಪ ನಿಭಾಯಿಸಲು ಕೇಂದ್ರವೂ ಸೇರಿದಂತೆ ಪ್ರತಿಪಕ್ಷಗಳು ಸರಕಾರಕ್ಕೆ ಸಹಕಾರ ನೀಡಬೇಕು," ಎಂದು ಪರಮೇಶ್ವರ್ ಮನವಿ ಮಾಡಿಕೊಂಡರು.

"ಮಳೆ ಅಭಾವದಿಂದ ರಾಜ್ಯದಲ್ಲಿ 17 ಸಾವಿರ ಕೋಟಿ ರೂ.ಮೌಲ್ಯದ ಬೆಳೆನಷ್ಟ ಸಂಭವಿಸಿದೆ. ಮಾರ್ಗಸೂಚಿಯಂತೆ ಪರಿಹಾರ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರಕಾರಕ್ಕೆ ಮನವಿ ಮಾಡಿ ಹಲವು ದಿನಗಳು ಕಳೆದಿವೆ. ಯಾವಾಗ ಹಣ ಬಿಡುಗಡೆ ಮಾಡುತ್ತದೋ ಗೊತ್ತಿಲ್ಲ. ಈ ಸ್ಥಿತಿಯಲ್ಲಿ ಕೇಂದ್ರ ಕೂಡಲೇ ರಾಜ್ಯದ ನೆರವಿಗೆ ಬರಬೇಕು. ಮಧ್ಯಂತರ ಪರಿಹಾರವನ್ನಾದರೂ ಬಿಡುಗಡೆ ಮಾಡಬೇಕು. ಈ ಸಂಬಂಧ ರಾಜ್ಯ ಬಿಜೆಪಿ ನಾಯಕರು ರಾಜ್ಯದ ಹಿತದಷ್ಟಿಯಿಂದ ಕೇಂದ್ರದ ಮೇಲೆ ಒತ್ತಡ ತರಬೇಕು," ಎಂದು ಆಗ್ರಹಿಸಿದರು.

'ಯುದ್ಧೋಪಾದಿಯಲ್ಲಿ ಪರಿಹಾರ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರ ಸುಳ್ಳು ಹೇಳಿದೆ. ಸಾಲ ಮನ್ನಾ, ಬೆಳೆ ನಷ್ಟ ಪರಿಹಾರ ರೂಪದಲ್ಲಿ ಹೆಕ್ಟೇರ್ಗೆ ರೂ.25,000 ಪರಿಹಾರ ನೀಡಬೇಕು ಹಾಗೂ ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ ಕನಿಷ್ಠ ರೂ. 5 ಕೋಟಿ ನೀಡಬೇಕು ಎಂಬ ಬೇಡಿಕೆ ಈಡೇರಿಸಿಲ್ಲ' ಎಂದು ಬಿಜೆಪಿ, ಜೆಡಿಎಸ್ ದೂರಿದವು.

ಸಾಲಮನ್ನಾಆಗಲಿ, ಬರ ಪರಿಹಾರ ಆಗಲಿ ಕಾಂಗ್ರೆಸ್ ಮತ್ತು ಬಿಜೆಪಿ ಹೇಳಿಕೆಗಳಲ್ಲಿ ಸತ್ಯಾಂಶವಿದೆ. ಆದರೆ ನಿಜವಾದ ಗೋಚರಿಸದ ಸತ್ಯ ಒಂದಿದೆ. ಇವರೆರಡೂ (ಜೆಡಿ.ಎಸ್. ಸೇರಿ ಮೂರು) ಪಕ್ಷಗಳಿಗೆ ಸಾಲಮನ್ನಾ ಅಥವಾ ಬರ ಪರಿಹಾರದ ಬಗ್ಗೆ ನಿಜವಾದ ಕಾಳಜಿ ಇಲ್ಲ. ರಾಜಕೀಯ ಇಚ್ಛಾಶಕ್ತಿ ಇಲ್ಲ. ರೈತರ, ಕೃಷಿ ಮತ್ತು ಗ್ರಾಮೀಣ ಪ್ರದೇಶದ ಬಿಕ್ಕಟ್ಟು ಪರಿಹಾರ ಇವರಿಗೆ ಬೇಕಾಗಿಲ್ಲ. ರೈತ ಮತ್ತು ಇತರ ಬಡವರು ಕೃಷಿ ಮತ್ತು ಗ್ರಾಮ ಬಿಡುವುದು ಇವರಿಗೆ ಬೇಕಾಗಿದೆ. ಭೂಮಿಯನ್ನು ರೀಯಲ್ ಎಸ್ಟೇಟ್ ದಂಧೆಗೆ ಮತ್ತು ಕಾರ್ಪೊರೇಟುಗಳಿಗೆ ಮಾರಿಕೊಳ್ಳುವುದು ಮಾತ್ರ ಅವರಿಗೆ ಬೇಕಾಗಿದೆ. ಕಾರ್ಪೊರೇಟ್ ಪರ ಕ್ರಮಗಳಿಗೆ ಅವರಿಗೆ ಖಂಡಿತ ರಾಜಕೀಯ ಇಚ್ಛಾಶಕ್ತಿ ಇದೆ. ಬಿಜೆಪಿಯ ಕೇಂದ್ರ ಸರಕಾರ ಅಧಿಕಾರಕ್ಕೆ ಬಂದ ಮೇಲೆ 112 ಸಾವಿರ ಕೋಟಿ ರೂ. ಗಳಷ್ಟು ಕಾರ್ಪೊರೇಟ್ ಲೋಕದ 'ಉದ್ದೇಶ ಪೂರ್ವಕ ಸುಸ್ತಿ ಸಾಲಗಾರ'ರ ಸಾಲ ಮನ್ನಾ ಮಾಡುವುದರಲ್ಲಿ ಭಾರೀ ಇಚ್ಛಾಶಕ್ತಿ ತೋರಿದೆ. ಇತ್ತೀಚಿನ ನೋಟು ನಿಷೇಧದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ತೀವ್ರ ಟೀಕೆ ಎದುರಿಸಿಯೂ ಮಲ್ಯ ಸೇರಿದಂತೆ 63 'ಉದ್ದೇಶ ಪೂರ್ವಕ ಸುಸ್ತಿ ಸಾಲಗಾರ'ರ ಸಾಲ ಮನ್ನಾ ಮಾಡಿದೆ. ಆದರೆ ತೀವ್ರ ಸರಣಿ ಬರಗಾಲದ ಪರಿಸ್ಥಿತಿಯಲ್ಲೂ ರೈತರ ಸಾಲಮನ್ನಾಕ್ಕೆ, ಬರಪರಿಹಾರದ ಹಣ ತುರ್ತು ಬಿಡುಗಡೆಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ. ಇದೇ ರೀತಿ ಸ್ಟೀಲ್ ಬ್ರಿಜ್ ಬಗ್ಗೆ ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಇರುವ ರಾಜಕೀಯ ಇಚ್ಛಾಶಕ್ತಿ ಸಾಲಮನ್ನಾ, ಬರ ಪರಿಹಾರದ ಬಗ್ಗೆ ಇಲ್ಲ.

ಇದಕ್ಕೆ ಪರಿಹಾರ ಒಂದೇ. ಅಖಿಲ ಭಾರತ ಕಿಸಾನ್ ಸಂಘರ್ಷ ಜಾಥಾ, ರಾಜ್ಯದ ನ. 18 ಜೈಲು ಭರೋದಂತಹ ಸಮರಶೀಲ ಚಳುವಳಿಗಳ ಮೂಲಕ ಈ ಸರಕಾರಗಳ ಮೇಲೆ ಒತ್ತಡ ತರುವುದು. ಇಲ್ಲದಿದ್ದರೆ ಇಂತಹ ಸರಕಾರಗಳನ್ನು ಕಿತ್ತೊಗೆದು ರಾಜಕೀಯ ಇಚ್ಛಾಶಕ್ತಿ ಇರುವ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಸರಕಾರಗಳನ್ನು ಅಧಿಕಾರಕ್ಕೆ ತರುವುದು.

ಸಿಪಿಐ(ಎಂ) ನಿಂದ ಪ್ರಧಾನಿ ಮೋದಿ ವಿರುದ್ಧ ಸಂಸತ್ತಿನ ಅವಹೇಳನೆಯ ನೋಟೀಸ್

ಸಿಪಿಐ(ಎಂ) ರಾಜ್ಯಸಭೆಯಲ್ಲಿ ಪ್ರಧಾನ ಮಂತ್ರಿಗಳ ವಿರುದ್ಧ ಅವರು ಸಂಸತ್ತಿನಲ್ಲಿ ಇದ್ದರೂ ಸದನದಿಂದ ದೂರ ಉಳಿದು ಅನಾಣ್ಯೀಕರಣಕ್ಕೆ ಸಂಬಂಧಪಟ್ಟ ಪ್ರಶ್ನೆಗಳ ಬಗ್ಗೆ ವಿವರಣೆ ನೀಡುತ್ತಿಲ್ಲ ಎಂದು ಒಂದು ಅವಹೇಳನಾ ನೋಟೀಸನ್ನು ನವಂಬರ್ 24ರಂದು ಕೊಟ್ಟಿದೆ.

"ನಾನು ಪ್ರದಾನ ಮಂತ್ರಿ ನರೇಂದ್ರ ಮೋದಿಯವರು ಸದನದ ಅವಹೇಳನೆ ಮಾಡಿದ್ದಾರೆ ಎಂಬ ಸೂಚನೆಯನ್ನು ನಿಯಮಗಳ ಪ್ರಕಾರ ರಾಜ್ಯಸಭೆಯ ಮಹಾಕಾರ್ಯದರ್ಶಿ ಮತ್ತು ಮೇಲ್ಮನೆಯ ಅಧ್ಯಕ್ಷರಿಗೆ ಕೊಟ್ಟಿದ್ದೇನೆ" ಎಂದು ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಹೇಳಿದ್ದಾರೆ.

"ನವಂಬರ್ 8 ಮಧ್ಯರಾತ್ರಿಯಿಂದ ಜಾರಿಗೆ ಬಂದಿರುವ ಅನಾಣ್ಯೀಕರಣ ಸಾಮಾನ್ಯ ಜನಗಳಿಗೆ ಹೇಳತೀರದ ಸಂಕಟಗಳನ್ನು ಉಂಟುಮಾಡಿದೆ" ಎಂದಿರುವ ಅವರು "ಈ ನೋಟೀಸನ್ನು ಅವರು ಕೈಗೆತ್ತಿಕೊಳ್ಳುತ್ತಾರೆ ಎಂದು ಆಶಿಸೋಣ. ಸ್ವೀಕರಿಸದಿದ್ದರೆ ಯಾವ ಶರತ್ತಿನಲ್ಲಿ ಅದನ್ನು ಸ್ವೀಕರಿಸಿಲ್ಲ ಎಂದು ಕೇಳಬಯಸುತ್ತೇನೆ" ಎಂದು ಯೆಚೂರಿಯವರು ಹೇಳಿದ್ದಾರೆ.

"ಈ ಅವಹೇಳನೆಯನ್ನು ಒಪ್ಪಲು ಸಾಧ್ಯವಿಲ್ಲ. ಪ್ರಧಾನ ಮಂತ್ರಿಗಳು ಬರುತ್ತಾರೆ ಎಂಬ ಭರವಸೆಯನ್ನು ನಮಗೆ ಕೊಡಲಾಯಿತು. ಒಂದು ವಾರ ಅವರು ಬರಲಿಲ್ಲ. ಒಂದು ವಾರದ ನಂತರ, ಇಂದು ಬಂದಿದ್ದಾರೆ. ಅವರು ಕೂತಿದ್ದರು, ನಂತರ ಎದ್ದು ಹೋದರು. ಹಿಂದಿರುಗಿ ಬಂದಿಲ್ಲ" ಎಂದ ಸೀತಾರಾಮ್ ಯೆಚೂರಿ ಈ ಹಿಂದೆ 2ಜಿ ಹಗರಣದ ಸಂದರ್ಭದಲ್ಲಿ ನಡೆದುದನ್ನು ನೆನಪಿಸಿದ್ದಾರೆ. ಆಗಿನ ಪ್ರಧಾನ ಮಂತ್ರಿ ಎರಡು ದಿನಗಳ ಕಾಲ ಸದನದಲ್ಲಿ ಕೂತಿದ್ದರು. ಚರ್ಚೆಯ ನಂತರ ಆ ವಿಷಯದ ಮೇಲೆ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಲಾಯಿತು

ಲೋಕಸಭೆಯಲ್ಲೂ ಒಂದು ಅವಹೇಳನಾ ನೋಟೀಸನ್ನು ಕೊಡುವ ಬಗ್ಗೆ ಸಿಪಿಐ(ಎಂ) ಯೋಚಿಸುತ್ತಿದೆ. "ಪ್ರಧಾನ ಮಂತ್ರಿಗಳು ಸಂಸತ್ತಿಗೆ ಉತ್ತರದಾಯಿಯಾಗಿದ್ದಾರೆ" ಎಂದು ಸಿಪಿಐ(ಎಂ) ಲೋಕಸಭಾ ಸದಸ್ಯ ಮಹಮ್ಮದ್ ಸಲಿಂ ಹೇಳಿದ್ದಾರೆ.

ನಾಳಿನ ಕಾರ್ಯಕ್ರಮಗಳು :

ನವೆಂಬರ್ 28 : ನೋಟು ನಿಷೇಧದ ಜಾರಿಯ ದುಷ್ಪರಿಣಾಮಗಳ ವಿರುದ್ಧ ಪ್ರತಿಭಟನೆ

ನವೆಂಬರ್ 26–30 : ಸಿಐಟಿಯು ಅಖಿಲ ಭಾರತ ಸಮ್ಮೇಳನ, ಪುರಿ, ಒಡಿಸ್ಸಾ

ಡಿಸೆಂಬರ್ 4 : ಕಮ್ಯೂನಿಸ್ಟರ ಮೇಲಿನ ಕೋಮುವಾದಿಗಳ ಧಾಳಿ ಖಂಡಿಸಿ ಸಿಪಿಐ(ಎಂ) ವತಿಯಿಂದ ಛಾಯಾಚಿತ್ರ ಪ್ರದರ್ಶನ, ಎನ್.ಜಿ.ಓ ಸಭಾಂಗಣ, ಬೆಂಗಳೂರು.

ಡಿಸೆಂಬರ್ 7 : ಮನೆ ಕೆಲಸಗಾರರಿಗೆ ಭವಿಷ್ಯನಿಧಿ ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಪ್ರತಿಭಟನಾ ಪ್ರದರ್ಶನ, ಕಂದಾಯ ಭವನ, ಬೆಂಗಳೂರು.

ಡಿಸೆಂಬರ್19–21: ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ (ಎಐಎಡಬ್ಲ್ಯೂಯು), 6ನೇ ಕರ್ನಾಟಕ ರಾಜ್ಯ ಸಮ್ಮೇಳನ, ಕುಂದಾಪುರ, ಉಡುಪಿ.

ಡಿಸೆಂಬರ್ 24–25 : 'ಜನನುಡಿ' – ನುಡಿಯು ಸಿರಿಯಲ್ಲ ಬದುಕು, ಸ್ಥಳ: ಶಾಂತಿಕಿರಣ, ಮಂಗಳೂರು.

ಕರಾವಳಿ ಕದನ

ವಾ.ಉ.

'ಜೈಲ್‌ಭರೋ' 86 ಮಂದಿಗೆ ಜೈಲುವಾಸ

ನಿವೇಶನ, ವಸತಿ, ಭೂಮಿಗಾಗಿ ನವೆಂಬರ್ 18ರ ಜೈಲ್‌ಭರೋ ಹೋರಾಟದಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಮುಂದೆ ಒಂದೂವರೆ ಸಾವಿರ ಮಂದಿಗೂ ಮೀರಿ ಹೋರಾಟಗಾರರು ಭಾಗವಹಿಸಿದ್ದರು. ನೂರಕ್ಕೂ ಹೆಚ್ಚು ಮಂದಿಯನ್ನು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದುದಕ್ಕಾಗಿ ಪೋಲೀಸರು ವಶಕ್ಕೆ ತೆಗೆದುಕೊಂಡರು. 86 ಮಂದಿಯನ್ನು ಬಂಧಿಸಿ ಉಳಿದವರನ್ನು ಸಾಯಂಕಾಲ ಬಿಡುಗಡೆಗೊಳಿಸಿದರು. ಬಂಧಿಸಲಾದ 86 ಮಂದಿಯನ್ನು ಮುಸ್ಸಂಜೆ ಹೊತ್ತು ನ್ಯಾಯಾಧೀಶರ ಮನೆ ಮುಂದೆ ಹಾಜರುಪಡಿಸಿದಾಗ ಯಾರೂ ಜಾಮೀನು ಪಡೆಯಲು ಮುಂದಾಗಲಿಲ್ಲ. ನ್ಯಾಯಾಧೀಶರು ಅವರನ್ನು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದರಿಂದ ಎಲ್ಲರೂ ಮಂಗಳೂರು ಜೈಲು ಸೇರಬೇಕಾಯಿತು.

ಬಂದೀಖಾನೆಯ ಹೊರಗಿದ್ದ ಸಂಗಾತಿಗಳು ಮರುದಿನ ನ್ಯಾಯವಾದಿಗಳ ಮೂಲಕ ಜಾಮೀನು ಅರ್ಜಿ ಸಲ್ಲಿಸಿದ್ದರಿಂದ ಮರುದಿನ ತಾ.19 ರಂದು ರಾತ್ರಿ 11 ಗಂಟೆಗೆ ಎಲ್ಲಾ 86 ಮಂದಿಯ ಬಿಡುಗಡೆಯಾಯಿತು. ಆ ಅಪರಾತ್ರಿಯಲ್ಲಿ ಬಂದೀಖಾನೆಯಿಂದ ಹೊರ ಬಂದಾಗ ಇನ್ನೂರಕ್ಕೂ ಹೆಚ್ಚು ಸಂಗಾತಿಗಳು ಹೂವು, ಹಾರಗಳಿಂದ ಸ್ವಾಗತಿಸಿ ಸಂಭ್ರಮದ ವಾತಾವರಣ ಸೃಷ್ಟಿಯಾಯಿತು. ಬಂಧಿತರಲ್ಲಿ 33 ಮಂದಿ ಮಹಿಳಾ ಸಂಗಾತಿಗಳಿದ್ದರು.

ಜೈಲಿನಿಂದ ಬಂದ ಸಂಗಾತಿಗಳಿಗೆ ಸನ್ಮಾನ

"ಜೈಲ್‌ಭರೋ" ಹೋರಾಟದಲ್ಲಿ ಭಾಗವಹಿಸಿ ಜೈಲಿಗೆ ಹೋಗಿಬಂದ ಚಳುವಳಿಗಾರರಿಗೆ ಸನ್ಮಾನ ಕಾರ್ಯಕ್ರಮವನ್ನು ನವೆಂಬರ್ 22ರಂದು ಕರ್ನಾಟಕ ಪ್ರಾಂತ ರೈತ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿತ್ತು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡುತ್ತಾ "ಜೈಲಿಗೆ ಹೋಗಿ ಬಂದ ಎಲ್ಲಾ ನಿವೇಶನರಹಿತರಿಗೆ ಅಭಿನಂದನೆ ಸಲ್ಲಿಸಿದರು. ಅರ್ಹ ನಿವೇಶನರಹಿತರಿಗೆ ಮನೆ ನೀಡದೆ ಅನರ್ಹರಿಗೆ ಮನೆ ನೀಡಿದಲ್ಲಿ ತೀವ್ರ ರೀತಿಯಲ್ಲಿ ಹೋರಾಟಕ್ಕೆ ಸಜ್ಜಾಗಬೇಕೆಂದು" ಕರೆ ನೀಡಿದರು. ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ನಾಯಕರುಗಳಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ಮುಂತಾದವರು ಭಾಗವಹಿಸಿದರು. ಪ್ರಾಸ್ತವಿಕವಾಗಿ ಮಾತನಾಡಿದ ನಿವೇಶನರಹಿತರ ಪ್ರಧಾನ ಕಾರ್ಯದರ್ಶಿ ಸಂತೋಷ್ ಶಕ್ತಿನಗರ ಹೋರಾಟಕ್ಕೆ ಬೆಂಬಲ ನೀಡಿದ ಎಲ್ಲಾ ಸಂಘಟನೆಗಳಿಗೆ ಅಭಿನಂದಿಸಿದರು. ಕೊನೆಯಲ್ಲಿ ಅಧ್ಯಕ್ಷರಾದ ಪ್ರೇಮನಾಥ್ ಜಲ್ಲಿಗುಡ್ಡೆ ಮುಂದಿನ ಯೋಜನೆಗಳ ಬಗ್ಗೆ ವಿವರಿಸುತ್ತಾ ಎಲ್ಲರಿಗೂ ವಂದಿಸಿದರು.



ಸಿಐಟಿಯು ರಾಷ್ಟ್ರ ಸಮ್ಮೇಳನಕ್ಕೆ ದ.ಕ ಜಿಲ್ಲೆಯ ಪ್ರತಿನಿಧಿಗಳಿಗೆ ಬೀಳ್ಕೊಡುಗೆ



ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು)ನ 15ನೇ ರಾಷ್ಟ್ರ ಸಮ್ಮೇಳನ 2016 ನವೆಂಬರ್ 26 ರಿಂದ 30ರವರೆಗೆ ಒರಿಸ್ಸಾದ ಪುರಿಯಲ್ಲಿ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ವರ್ಗವನ್ನು ಪ್ರತಿನಿಧಿಸಿ 14 ಜನ ಸಂಗಾತಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ನವೆಂಬರ್ 23ರಂದು ಮಂಗಳೂರು ನಗರದ ಸೆಂಟ್ರಲ್ ರೈಲ್ವೇ ನಿಲ್ದಾಣದಲ್ಲಿ ಪ್ರತಿನಿಧಿ ಸಂಗಾತಿಗಳನ್ನು ಸಿಐಟಿಯು ಮಂಗಳೂರು ನಗರ ಸಮಿತಿ ವತಿಯಿಂದ ಬೀಳ್ಕೊಡಲಾಯಿತು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ಜಿಲ್ಲಾ ಅಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಬೀಡಿ ಸಂಘಟನೆ ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತಿ ಬಿ. ಶೆಟ್ಟಿ, ರಮಣಿ ಮೂಡಬಿದ್ರಿ, ವಸಂತಿ ಕುಪ್ಪೆಪದವು, ರಾಧ ಮೂಡಬಿದ್ರಿ, ರಾಮಣ್ಣ ವಿಟ್ಲ, ಬಾಬು ಪಿಲಾರ್, ರೋಹಿಣಿ ಬೆಳ್ತಂಗಡಿ, ಕಟ್ಟಡ ಕಾರ್ಮಿಕ ಸಂಘಟನೆಯಿಂದ ಸಂತೋಷ್ ಶಕ್ತಿನಗರ, ವಿದ್ಯುತ್ ಗುತ್ತಿಗೆದಾರ ಸಂಘದಿಂದ ಶಿವಕುಮಾರ್ ಬೆಳ್ತಂಗಡಿ ಪ್ರತಿನಿಧಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಬೀಳ್ಕೊಡುಗೆ ಸಂದರ್ಭದಲ್ಲಿ ಸಿಐಟಿಯು ಮಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಮುಖಂಡರಾದ ಸಂತೋಷ್ ಆರ್. ಎಸ್, ಉಮಾಶಂಕರ್, ನಾಗೇಶ್ ಕೋಟ್ಯಾನ್, ನೌಶಾದ್ ಮುಂತಾದವರಿದ್ದರು.

ಭೂರಹಿತರಿಗೆ ಕನಿಷ್ಠ 5 ಎಕ್ರೆ ಭೂಮಿ ಹಂಚಿ ಪ್ರಜಾಪ್ರಭುತ್ವ ಸಾಕಾರಗೊಳಿಸಲೇಬೇಕು

ನೈಜ ಪ್ರಜಾಪ್ರಭುತ್ವ ಜಾರಿಗೆ ಬರಲು ಭೂಮಾಲಕ ಪದ್ಧತಿಯನ್ನು ನಾಶ ಮಾಡಿ ಎಲ್ಲರಿಗೂ ಭೂಮಿ ಹಂಚಿಕೆ ಮಾಡಬೇಕು ಎಂದು ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಮುಖಂಡ ನ್ಯಾಯವಾದಿ ಬಿ.ಎಂ.ಭಟ್ ಹೇಳಿದರು.

ಅವರು ನವೆಂಬರ್ 21ರಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಬೆಳ್ತಂಗಡಿ ತಾಲೂಕು ಕಚೇರಿ ಎದುರು ನಡೆದ ಭೂಮಿ ಹಕ್ಕಿಗಾಗಿ ರೈತರ, ಆದಿವಾಸಿಗಳ, ದಲಿತರ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತಾಡುತ್ತಿದ್ದರು. "ಕಮ್ಯೂನಿಷ್ಟರು ಮತ್ತು ಡಾ. ಅಂಬೇಡ್ಕರ್ ಅವರು ಸ್ವಾತಂತ್ರ ಪೂರ್ವದಿಂದಲೇ ಭೂಮಿ ಮರು ಹಂಚಿಕೆ ಆಗಬೇಕು ಇಲ್ಲವೇ ರಾಷ್ಟ್ರೀಕರಣ ಮಾಡಿ ರೈತರ ಮೂಲಕ ಸಹಕಾರಿ ಕೃಷಿ ಮಾಡಬೇಕು ಎಂದು ಹೇಳುತ್ತಾ ಬಂದಿದ್ದರು. ಮಹಿಳೆಯರಿಗೆ ಭೂಮಿ ಹಕ್ಕು ನೀಡಲು ಲೋಕಸಭೆಯಲ್ಲಿ ವಿರೋಧ ಬಂದಾಗ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದ ಅಂಬೇಡ್ಕರ್ ಅವರ ಹೆಸರು ಹೇಳಲು ಯೋಗ್ಯರಲ್ಲದವರು ದೇಶವಾಳುತ್ತಿದ್ದಾರೆ.

ಜನರಿಗೆ ಭೂಮಿ ಹಕ್ಕು ನೀಡಲಾಗಿಲ್ಲ ಎಂದು ಯಾವ ಶಾಸಕ ಎಂಪಿಯೂ ಇಲ್ಲಿ ರಾಜೀನಾಮೆ ನೀಡಲಿಲ್ಲ. ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಎಡರಂಗ ಸರಕಾರ ಅಧಿಕಾರಕ್ಕೆ ಬಂದು ಭೂಮಿ ಹಂಚಿಕೆ ಮಾಡಿದ್ದು ಬಿಟ್ಟರೆ ಉಳಿದ ಯಾವ ಪಕ್ಷಗಳೂ ಜನರಿಗೆ ಭೂಮಿ ಹಂಚುವ ಕೆಲಸ ಮಾಡಿಲ್ಲ. ಭಾರತೀಯರಿಗೆಲ್ಲ ಸಮಾನ ಭೂಮಿ ಹಂಚಿಕೆ ಮಾಡಿ ಪ್ರಜಾಪ್ರಭುತ್ವಕ್ಕೆ ಮಾನ್ಯತೆ ನೀಡುವುದೇ ನಿಜವಾದ ದೇಶಪ್ರೇಮ ಎಂದರು.

ಎಲ್ಲರಿಗೂ ಹಕ್ಕುಪತ್ರ ಪ್ರತಿ ಕುಟುಂಬಕ್ಕೂ ಕನಿಷ್ಠ 5 ಎಕ್ರೇ ಭೂಮಿ ಒದಗಿಸಿ ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸುವ ತನಕ ನಮ್ಮ ಹೋರಾಟ ನಿಲ್ಲದು ಎಂದ ಅವರು ಜನವರಿ 26 ರ ಒಳಗೆ ಎಲ್ಲಾ ಅರ್ಜಿದಾರರಿಗೆ ಹಕ್ಕುಪತ್ರ ನೀಡದಿದ್ದರೆ ತಾಲೂಕು ಕಚೇರಿ ಎದುರು ಪ್ರಜಾಪ್ರಭುತ್ವ ದಿನಾಚರಣೆಯನ್ನು ಪ್ರಜಾಪ್ರಭುತ್ವಕ್ಕೆ ಅರ್ಥಕೊಡದವರಿಂದ ಆಚರಿಸಲು ಬಿಡದೆ ರೈತರೇ ಆಚರಣೆ ಮಾಡಲಿದ್ದಾರೆ ಎಂದವರು ಎಚ್ಚರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಶ್ಯಾಮರಾಜ್ ಪಟ್ರಮೆ ಮಾತಾಡಿ "ಕಪ್ಪುಹಣ ಕುಳಗಳಿಗೆ 7 ಲಕ್ಷ ಕೋಟಿ ಸಾಲ ಮನ್ನಾ ಮಾಡುವ ನರೇಂದ್ರ ಮೋದಿ ಸರಕಾರ ಬಡ ದುಡಿಯುವ ಜನರನ್ನು ಬ್ಯಾಂಕ್ ಮುಂದೆ ಸಾಲು ನಿಲ್ಲಿಸಿ ಆನಂದ ಪಡುತ್ತಿದೆ" ಎಂದರು.

ಆದಿವಾಸಿಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ವಿಠಲಮಲೆಕುಡಿಯ ಅವರು ಮಾತಾಡುತ್ತಾ "ಶತಶತಮಾನಗಳಿಂದ ವಾಸ ಇರುವ ಆದಿವಾಸಿಗಳಿಗೆ ಭೂಮಿಯ ಹಕ್ಕುಪತ್ರ ನೀಡಲಾಗದ ಸರಕಾರ ಆದಿವಾಸಿಗಳ ಮೇಲೆ ಕೇಸು ಹಾಕಿ ಹಿಂಸಿಸುತ್ತಿದೆ ಎಂದು ಟೀಕಿಸಿದರು.

ಮೊದಲಿಗೆ ಕ್ರಾಂತಿಗೀತೆ, ಘೋಷಣೆಗಳ ಮೂಲಕ ಪ್ರಾರಂಭವಾದ ಹೋರಾಟ ತಹಶಿಲ್ದಾರ್ ಮೂಲಕ ಸರಕಾರಕ್ಕೆ ಮನವಿ ನೀಡಿ ನಿಲ್ಲಿಸಲಾಯಿತು. ಧರಣಿ ಮುಂಚಿತವಾಗಿ ತಾಲ್ಲೂಕಿನ ಹಲವು ಕಡೆ ಪ್ರಚಾರ ಸಭೆಗಳನ್ನು ನಡೆಸಲಾಗಿದೆ. ಹೋರಾಟದಲ್ಲಿ ಸಿಪಿಐ(ಎಂ) ತಾಲೂಕು ಸಮಿತಿ ಸದಸ್ಯರಾದ ನಾರಾಯಣ ಕೈಕಂಬ, ಲೋಕೇಶ್ ಕುದ್ಯಾಡಿ, ಶ್ರೀಮತಿ ನೆಬಿಸಾ, ಜಯರಾಮ ಮಯ್ಯ, ಸಂಜೀವ ನಾಯ್ಕ, ಡೊಂಬಯ ಗೌಡ, ಮೊದಲಾದವರು ಉಪಸ್ಥಿತರಿದ್ದರು. ಅದೇರೀತಿ ರೈತ ಮುಖಂಡರುಗಳಾದ ನೀಲೇಶ್ ಪೆರಿಂಜೆ, ಮಹಮ್ಮದ್ ಅನಸ್, ರಾಮಚಂದ್ರ, ಆದಿವಾಸಿ ನಾಯಕರುಗಳಾದ ಸದಾಶಿವ ಮಲೆಕುಡಿಯ, ಚನಿಯಪ್ಪ ಮಲೆಕುಡಿಯ, ಜಯಾನಂದ ಮಲೆಕುಡಿಯ, ಡಿ.ವೈ.ಎಫ್.ಐ. ಮುಖಂಡರುಗಳಾದ ಧನಂಜಯ ಗೌಡ, ಲಾರೆನ್ಸ್, ವಸಂತ ಟೈಲರ್, ಯುವರಾಜ, ಕುಸುಮಾವತಿ, ಕಾರ್ಮಿಕ ಮುಖಂಡರುಗಳಾದ ಜಯಶ್ರೀ, ಇಂದಿರಾ, ಪುಷ್ಪಾ, ರೇಖಾ, ವೀನಸಾ, ದಲಿತ ಹಕ್ಕು ಮುಖಂಡರುಗಳಾದ ಬಾಬು ಕೊಯ್ಯೂರು, ಈಶ್ವರಿ ಪುತ್ತೂರು, ಮಹಿಳಾ ಸಂಘದ ಕಿರಣಪ್ರಭಾ, ಕುಮಾರಿ ಮೊದಲಾದವರು ಹೋರಾಟದ ನೇತೃತ್ವ ವಹಿಸಿದ್ದರು.



ಮಧ್ಯಮ ಪಂಥ ಯಾವುದು? ನೋಟು ನಿಷೇಧದ ಕಾರಣವಾಗಿ ಸತ್ತ ಎಪ್ಪತ್ತು ಜನರ ಕಾರಣದಿಂದ ಸಂಕಟಪಡುತ್ತಿರುವ ಕುಟುಂಬಗಳ, ಇತರರೆಲ್ಲರ ನೂರೆಂಟು ಸಂಕಟಗಳ ಪರವಾಗಿರುವುದು, ಅವುಗಳಿಗೆ ಕಾರಣವಾದ ನೋಟು ನಿಷೇಧದ ವಿರುದ್ಧ ಇರುವುದು ಎಡಪಂಥ, ಸತ್ತ ಮತ್ತು ಸಂಕಟಪಡುತ್ತಿರುವ ಕೋಟ್ಯಾಂತರ ಜನರ ಬಗ್ಗೆ ಕಾಳಜಿ ಇಲ್ಲದೆ ಅದನ್ನು ಸಮರ್ಥಿಸಿಕೊಳ್ಳುವುದು ಬಲ ಪಂಥ ಇವುಗಳಲ್ಲಿ ಮಧ್ಯಮ ಪಂಥ ಯಾವುದು? ದೊಡ್ಡ ಪ್ರಮಾಣದ ಶುಲ್ಕ, ಡೊನೇಷನ್, ಕ್ಯಾಪಿಟೇಷನ್ ವಸೂಲಿ ಮಾಡಿ ದುರ್ಲಾಭ ಮಾಡಿಕೊಳ್ಳುವ, ಈ ಹಣ ತೆರಲಾಗದವರಿಗೆ ಉತ್ತಮ ಶಿಕ್ಷಣ ವಂಚನೆಯಾಗುವುದರ ವಿರುದ್ಧ ಸೆಣಸುವುದು ಎಡಪಂಥ, ಈ ದುರ್ಲಾಭಕೋರರ ಪರವಾಗಿರುವುದು ಅವರ ಔತಣ, ಕವರ್ ಗಳನ್ನು ಸ್ವೀಕರಿಸಲು ಸಂಕೋಚಪಡದಿರುವುದು ಬಲ ಪಂಥ. ಬಲಪಂಥೀಯರ ಹಾವಳಿ ದಿನನಿತ್ಯ ಜನರನ್ನು ಕೊಲ್ಲುತ್ತಿರುವಾಗ ಎಡಪಂಥೀಯರ ಬಗ್ಗೆ ಬಲಪಂಥೀಯರು ಸೃಷ್ಟಿಸಿದ ಸುಳ್ಳು ಆರೋಪಗಳನ್ನು ಪುನರುಚ್ಚರಿಸುವುದು ಬಲಪಂಥ. ಇದರಲ್ಲಿ ಮಧ್ಯಮ ಪಂಥ ಯಾವುದು?

ಜಿ.ಎನ್. ನಾಗರಾಜ್

(ನುಡಿಸಿರಿಯಲ್ಲಿ ಸುಮಿತ್ರಾಬಾಯಿ ಮತ್ತು ಗಿರಡ್ಡಿ ಗೋವಿಂದರಾಜ ಅವರ ಮಧ್ಯಮ ಪಂಥದ ಬಗೆಗಿನ ಮಾತುಗಳಿಗೆ ಪ್ರತಿಕ್ರಿಯಿಸುತ್ತಾ)

ವೈಫಲ್ಯವನ್ನು ಮುಚ್ಚಿ ಹಾಕಲು ನೋಟು ರದ್ಧತಿ: ವಸಂತ ಆಚಾರಿ ಟೀಕೆ

ಕಳೆದ ಚುನಾವಣೆಯ ಸಂದರ್ಭದಲ್ಲಿರುವ ದೇಶದಲ್ಲಿರುವ ಕಪ್ಪುಹಣವನ್ನು ಎಲ್ಲ ಹೊರತೆಗೆಯುತ್ತೇವೆ, ವಿದೇಶಿ ಬ್ಯಾಂಕುಗಳಲ್ಲಿ ಜಮೆಯಾಗಿರುವ ಕಪ್ಪುಹಣವನ್ನು ಹೊರತರುತ್ತೇವೆ, ನಾಗರಿಕರ ಬ್ಯಾಂಕ್ ಖಾತೆಗಳಿಗೆ ತಲಾ 15 ಲಕ್ಷ ರೂ. ಜಮೆ ಮಾಡುವುದಾಗಿ ಹೇಳಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ, ತಾನು ನೀಡಿದ ಭರವಸೆ ಈಡೇರಿಸುವಲ್ಲಿ ವಿಫಲವಾಗಿದೆ. ವಿದೇಶಿ ಕಪ್ಪುಹಣ ಹಿಡಿಯಷ್ಟೂ ತರಲಾಗಲಿಲ್ಲ. ದೇಶದ ಆರ್ಥಿಕ ವ್ಯವಸ್ಥೆಯನ್ನು ಉತ್ತಮಗೊಳಿಸಲಾಗಲಿಲ್ಲ. ಕಾರ್ಮಿಕರು ಇವರ ನೀತಿಗಳನ್ನು ಖಂಡಿಸುತ್ತಿದ್ದಾರೆ. ನರೇಂದ್ರ ಮೋದಿಯವರು ತಮ್ಮ ವೈಫಲ್ಯವನ್ನು ಮುಚ್ಚಿ ಹಾಕಲು ತಾವು ದೇಶದ ಒಳಗಿನ ಕಪ್ಪುಹಣವನ್ನು ಹೊರ ತರುವುದಾಗಿ ಹೇಳಿ, ನವೆಂಬರ್ 8ರಂದು ಏಕಾಏಕಿ ರೂ. 500/– ಹಾಗೂ ರೂ. 1000/– ರೂಪಾಯಿಗಳನ್ನು ಅಮಾನ್ಯಗೊಳಿಸಿದ್ದಾರೆ ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ ಟೀಕಿಸಿದರು.

ಅವರು ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ಜಿಲ್ಲಾಧಿಕಾರಿ ಕಛೇರಿಯೆದುರು ನವೆಂಬರ್ 22ರಂದು ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನೋಟು ಅಮಾನ್ಯಗೊಳಿಸಿದ್ದರಿಂದ ಮನೆ ವಾರ್ತೆ ನಡೆಸುವವರು ಕೃಷಿಕರು, ಕೂಲಿಕಾರರು, ಬೀಡಿ ಕಟ್ಟುವವರು, ಸಣ್ಣ ವ್ಯವಹಾರದವರು, ಹಣ ಚಲಾವಣೆಯಿಲ್ಲದೆ ಅತಂತ್ರರಾಗಿದ್ದಾರೆ. "ಬಡಜನರು ನಿದ್ರಿಸುತ್ತಿದ್ದಾರೆ. ಶ್ರೀಮಂತರು ನಿದ್ರೆಗೆಡುವಂತಾಗಿದೆ" ಎಂದು ನರೇಂದ್ರ ಮೋದಿ ತಮ್ಮ ಕೃತ್ಯವನ್ನು ತಾವೇ ಶ್ಲಾಘಿಸುತ್ತಿದ್ದಾರೆ. ಆದರೆ ಶ್ರೀಮಂತರು ಯಾರು ಇವತ್ತು ಬ್ಯಾಂಕುಗಳ ಮುಂದೆ ಚಿಲ್ಲರೆ ರೂಪಾಯಿಗಳಿಗಾಗಿ ಸಾಲು ಗಟ್ಟು ನಿಲ್ಲುತ್ತಿಲ್ಲವೆಂದು ತಿಳಿಸಿದರು.



ನೋಟು ರದ್ದತಿ ವಿಚಾರ ಚುನಾವಣೆ ಘೋಷಣೆಯಲ್ಲೂ ಹೇಳಲಿಲ್ಲ. ಮಂತ್ರಿ ಮಂಡಲದಲ್ಲೂ ಚರ್ಚಿಸಲಿಲ್ಲ. ಪಾರ್ಲಿಮೆಂಟಿನಲ್ಲೂ ಮಂಡಿಸದೆ ಏಕಾಏಕಿ ಘೋಷಿಸಿ ಮೋದಿಯವರು ಸರ್ವಾಧಿಕಾರಿ ವರ್ತನೆ ಪ್ರದರ್ಶಿಸುತ್ತಿದ್ದಾರೆ.

ನವೆಂಬರ್ 8ರ ನೋಟು ರದ್ದತಿ ಘೋಷಣೆಯನ್ನು ಅವರು ತಮ್ಮ ಆಪ್ತರಾದ ಬಿಜೆಪಿ ಪಕ್ಷದವರಿಗೆ, ಉದ್ಯಮಿಗಳಿಗೆ ಗುಟ್ಟಾಗಿ ತಿಳಿಸಿದ್ದು ಸೃಷ್ಠಿ. ಉದ್ಯಮಿಗಳಿಗೆ ಸೌಲಭ್ಯ, ಬಡವರಿಗೆ ಅಲೆದಾಟವೆಂಬಂತಾಗಿದೆ ಎಂದು ವಸಂತ ಆಚಾರಿ ಟೀಕಿಸಿದರು.

ಸಹಕಾರಿ ಸಂಘಗಳು ರೈತರಿಗೆ ಬೇಕಾದ ಆರ್ಥಿಕ ಸಂಸ್ಥೆ ಗಳಾಗಿದ್ದು ಅವುಗಳಿಗೆ ನೋಟು ರದ್ದತಿ ಯ ಮೂಲಕ ನಗದು ಒದಗಿಸದೆ ರೈತರ ನ್ನು ಬಳಸಲಾಗಿದೆ. ಕೆಲವರು ಸಾಮಾನ್ಯರಲ್ಲ. ಭ್ರಷ್ಟಾಚಾರದ ಹಣ ಇದೆ ನಿಜ. ಆದರೆ ದೊಡ್ಡ ಮೊತ್ತದ ಅಕ್ರಮ ಹಣ ಜಮೆಯಾಗಿರುವುದು ಕಾರ್ಪೋರೇಟರ್ ಸಂಸ್ಥೆಗಳಲ್ಲಿ. ಆ ಸಂಸ್ಥೆಗಳೇ ನರೇಂದ್ರ ಮೋದಿಯನ್ನು ಅಧಿಕಾರಕ್ಕೆ ತಂದಿದೆ. ಜನಸಾಮಾನ್ಯರಿಗೆ ಚಲಾವಣೆಗೆ ಬದಲಿ ನೋಟು ಒದಗಿಸುವವರೆಗೆ ಹಳೆಯ ನೋಟುಗಳ ಚಲಾವಣೆಗೆ ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿದರು.

ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ, ಪ್ರಾಸ್ತವಿಕ ಭಾಷಣ ಮಾಡಿದರು. ಜಿಲ್ಲಾ ಉಪಾಧ್ಯಕ್ಷ ಸದಾಶಿವದಾಸ್ ವಂದಿಸಿದರು. ಜಿಲ್ಲೆಯ ಸಿಐಟಿಯು ಮುಖಂಡರಾದ ಯು. ಬಿ. ಲೋಕಯ್ಯ, ರಾಮಣ್ಣ ವಿಟ್ಲ, ಜಯಂತಿ ಬಿ. ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸಂತೋಷ್ ಶಕ್ತಿನಗರ, ಸಂತೋಷ್ ಆರ್. ಎಸ್. ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಪ್ಪು ಹಣದ ವಿರುದ್ಧ ಬಿಗಿ ಕ್ರಮಕ್ಕಾಗಿ, ಗರಿಷ್ಠ ಮುಖಬೆಲೆಯ ನೋಟುಗಳ ಅನಾಣ್ಯೀಕರಣದಿಂದ ಉಂಟಾಗಿರುವ ಕಾರ್ಮಿಕರು ಮತ್ತು ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರಕ್ಕೆ ಒತ್ತಾಯಿಸಿ ಜೆಸಿಟಿಯು ನೇತೃತ್ವದಲ್ಲಿ ಬೆಂಗಳೂರಿನ ಟೌನ್ ಹಾಲ್ ಮುಂದೆ ಪ್ರತಿಭಟನೆಯಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಮೀನಾಕ್ಷಿಸುಂದರಂ ಮಾತನಾಡಿದರು.





ಕಲಬುರಗಿಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಪ್ರತಿಭಟನೆ



ಬಾಲಮುರಳಿ ಕೃಷ್ಣ ಇನ್ನಿಲ್ಲ

ಡಾ. ಬಾಲಮುರಳಿ ಕೃಷ್ಣ, ಕರ್ನಾಟಕ ಶೈಲಿಯ ಸಂಗೀತಗಾರರಲ್ಲಿ ಒಬ್ಬ ಅದ್ವಿತೀಯರು. ವಾಗ್ಗೇಯಕಾರರಾಗಿಯೂ ಅವರು ಹಲವಾರು ಕೃತಿ ರಚನೆ ಮಾಡಿದ್ದಾರೆ. ತೆಲುಗು, ತಮಿಳು, ಕನ್ನಡವಲ್ಲದೆ, ಹಲವಾರು ಭಾಷೆಗಳಲ್ಲಿ ಅವರು ಸಂಗೀತ ಕಚೇರಿಗಳನ್ನು ಕೊಟ್ಟಿದ್ದಾರೆ..

ಬಾಲಮುರಳಿಕೃಷ್ಣ, ಅವರು ರಾಗ, ತಾಳ, ಗಾನ, ಪಲ್ಲವಿಯ ಹೊಸ ಪ್ರಯೋಗಗಳ ಹರಿಕಾರ. ತೆಲುಗು, ಕನ್ನಡ, ತಮಿಳು, ಮಲೆಯಾಳಂ ಚಲನ–ಚಿತ್ರಗಳಲ್ಲಿ ಹಾಡಿ, ಕಂಠದಾನ ಮಾಡಿದ್ದಾರೆ. ಅವರು 18 ಸಾವಿರಕ್ಕೂ ಹೆಚ್ಚು ಸಂಗೀತ ಕಛೇರಿಗಳು, 250 ಕ್ಕಿಂತಲೂ ಹೆಚ್ಚು, 'ಮ್ಯೂಸಿಕ್ ಕ್ಯಾಸೆಟ್,' ಗಳನ್ನು ಬಿಡುಗಡೆ ಮಾಡಿದ್ದಾರೆ.

ಕನ್ನಡ ಚಿತ್ರಗಳಾದ, ಸಂಧ್ಯಾರಾಗ, ಹಂಸಗೀತೆ, ಸುಬ್ಬಾಶಾಸ್ತ್ರಿ, ಗಾನಯೋಗಿ ರಾಮಣ್ಣ, ಶ್ರೀ ಪುರಂದರದಾಸರು, ಅಮ್ಮ, ಚಿನ್ನಾರಿ ಮುತ್ತಣ್ಣ, ಮುತ್ತಿನಹಾರ –ಹೀಗೆ ಹಲವಾರು ಹಾಡುಗಳು, ಕೀರ್ತನೆಗಳು, ದೇವರನಾಮಗಳನ್ನು ಹಾಡಿದ್ದಾರೆ. ಅವರು 1938 ರಲ್ಲಿ ನಡೆದ, "ಸದ್ಗುರು ಆರಾಧನಾ ಮಹೋತ್ಸವ," ದಲ್ಲಿ ತಮ್ಮ ಚೊಚ್ಚಲ ಸಂಗೀತ ಕಛೇರಿ ಕೊಟ್ಟರು. ಆಗ ಅವರಿಗೆ ಕೇವಲ 8 ವರ್ಷ ವಯಸ್ಸು.

ಬಾಲಮುರಳಿಕೃಷ್ಣ ಅವರು ಈ ಮೊದಲು ಪ್ರಚಲಿತವಿಲ್ಲದ ಹಲವು ಹೊಸ–ರಾಗಗಳ ಸಂಯೋಜನೆ ಮಾಡಿದ್ದಾರೆ ; ಐದು ಸ್ವರಗಳಿಲ್ಲದೇ ರಾಗಗಳು ರಂಜಿಸುವುದಿಲ್ಲವೆಂಬ ಸಂಪ್ರದಾಯವಿತ್ತು, ಆದರೆ, ಅದನ್ನೂ ಮೀರಿ, ನಾಲ್ಕು ಹಾಗೂ ಮೂರು ಸ್ವರಗಳ ರಾಗಗಳನ್ನು ಬಾಲ ಮುರಳಿ ಅವರು ಕಲ್ಪಿಸಿದ್ದಾರೆ. ಅವರಿಗೆ ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳು ಬಂದಿವೆ. ಇವಲ್ಲದೆ "ಹಂಸಗೀತೆ," ಕನ್ನಡ ಚಲನ ಚಿತ್ರಕ್ಕೆ, ಅತ್ಯುತ್ತಮ ಹಿನ್ನೆಲೆಗಾಯಕ ಪ್ರಶಸ್ತಿ,, "ಮಧ್ವಾಚಾರ್ಯ," ಚಿತ್ರಕ್ಕೆ 'ಉತ್ತಮ ಸಂಗೀತ ನಿರ್ದೇಶನಕ್ಕೆ ಪ್ರಶಸ್ತಿ', ಕಾಳಿದಾಸ ಸಮ್ಮಾನ್ ಪ್ರಶಸ್ತಿಗಳು ಬಂದಿವೆ.

ಕುಂದಾಪುರ : ಕಟ್ಟಡ ಕಾರ್ಮಿಕರ 10ನೇ ಮಹಾಸಭೆ

ನೋಟು ಅಲ್ಲ, ನೀತಿ ಬದಲಾಗಲಿ–ಮಹಾಂತೇಶ್

ಕಪ್ಪು ಹಣದ ಧನಿಕರನ್ನು ನಿಯಂತ್ರಣ ಮಾಡಬೇಕಾದರೆ ಸರಕಾರ ಆರ್ಥಿಕ ನೀತಿಗಳನ್ನು ಬದಲಾಯಿಸಬೇಕೆ ಹೊರತು ನೋಟುಗಳನ್ನಲ್ಲ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಕೆ. ಹೇಳಿದರು.

ನವೆಂಬರ್ 13ರಂದು ಉಡುಪಿ ಜಿಲ್ಲೆ ಕುಂದಾಪುರದ ಹಂಚು ಕಾರ್ಮಿಕ ಭವನದಲ್ಲಿ ತಾಲೂಕು ಮಟ್ಟದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಆಶ್ರಯದಲ್ಲಿ ಡಾ|| ಬಾಬಾಸಾಹೇಬರ 125ನೇ ವರ್ಷಾಚರಣೆ, ಮತ್ತು ಸಮಾಜವಾದಿ ಕ್ರಾಂತಿ ಶತಮಾನೋತ್ಸವದ ಅಂಗವಾಗಿ ನಡೆದ 10ನೇ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ನೋಟು ನಿಷೇಧದಿಂದಾಗಿ ದೇಶದಲ್ಲಿ ಇದುವರೆಗೆ 5 ಕೋಟಿ ಜನ ಬಡವರು ಬೀದಿಗೆ ಬಿದ್ದರೆ, 34 ಜನ ಪ್ರಾಣ ಕಳೆದುಕೊಂಡಿದ್ದಾರೆ. ಶ್ರೀಮಂತರು ಡೆಬಿಟ್, ಕ್ರೆಡಿಟ್ ಕಾರ್ಡ್ ಬಳಸಿ ಆಹಾರ ಖರೀದಿಸುತ್ತಿದ್ದರೆ, ಬಡವರು, ಕಾರ್ಮಿಕರು ಆಹಾರ ವಸ್ತುಗಳನ್ನು ಖರೀದಿಸಲು ದಿನವಿಡೀ ಕೆಲಸಗಳನ್ನು ತೊರೆದು ಅಲೆದಾಡುವಂತಾಗಿದೆ ಎಂದರು.

ದೇಶದಲ್ಲಿ ನೋಟಿನ ಮೇಲೆ ನಿಷೇಧ ಹೇರಿದ್ದು ಇದೇ ಪ್ರಥಮವೇನಲ್ಲ. ನಿಷೇಧಿಸುವಾಗ ಸರಕಾರ ಪೂರ್ವ ಸಿದ್ಧತೆ ಮಾಡದೇ ಇರುವುದರಿಂದ ಜನರು ಪರಿತಪಿಸುವಂತಾಗಿದೆ ಎಂದು ದೂರಿದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 5 ಸಾವಿರ ಕೋಟಿ ಜಮೆಯಾಗಿದೆ. ಕಾರ್ಮಿಕ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿ ನೇಮಿಸಿಕೊಳ್ಳದೇ ಕಾರ್ಮಿಕರ ಸವಲತ್ತುಗಳು ವಿಳಂಭ ಮಾಡಲಾಗುತ್ತಿದೆ. ಕಾರ್ಮಿಕರನ್ನು ಕಡೆಗಣಿಸುತ್ತಿರುವ ಕ್ರಮ ಖಂಡನೀಯ ಎಂದು ಹೇಳಿದ ಅವರು ಮಂಡಳಿ ಕಾರ್ಮಿಕರ ಹೆಸರಲ್ಲಿ ಭೂಮಿ ಖರೀದಿ, ಕಲ್ಯಾಣ ಮಂಟಪಕ್ಕೆ ಅನಗತ್ಯ ಖರ್ಚುಗಳನ್ನು ಮಾಡಲು ಹೊರಟಿದೆ. ಮಂಡಳಿ ಸಂಗ್ರಹಿಸುತ್ತಿರುವ ಸೆಸ್‌ನ್ನು ರದ್ದು ಮಾಡುವ ನಿರ್ಧಾರಕ್ಕೆ ಸರ್ಕಾರ ಕ್ರಮವಹಿಸುತ್ತಿರುವುದರಿಂದ ಸವಲತ್ತುಗಳು ಗಣನೀಯವಾಗಿ ಇಳಿಕೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಿಐಟಿಯು ತಾಲೂಕು ಅಧ್ಯಕ್ಷರಾದ ಹೆಚ್. ನರಸಿಂಹ ಬಾಲಕೃಷ್ಣ ಶೆಟ್ಟಿ, ವೆಂಕಟೇಶ ಕೋಣಿ, ನಾಗರತ್ನ ನಾಡ, ಶೀಲಾವತಿ, ಮಹಾಬಲ ವಡೇರ ಹೋಬಳಿ ಮಾತನಾಡಿದರು.

ಸಂಘದ ಅಧ್ಯಕ್ಷರಾದ ಯು. ದಾಸಭಂಡಾರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಸುರೇಶ್‌ಕಲ್ಲಾಗರ ವಾರ್ಷಿಕ ವರದಿ, ಲೆಕ್ಕಪತ್ರ ಮಂಡಿಸಿದರು. ತಾಲೂಕಿನ 76 ಘಟಕಗಳಿಂದ 375 ಕಾರ್ಮಿಕರು ತಮ್ಮ ಘಟಕಗಳಿಂದ ಪ್ರತಿನಿಧಿಗಳಾಗಿ ಆಗಮಿಸಿ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮಹಾಸಭೆಯಲ್ಲಿ ಬಾಕಿ ಇರುವ ಅರ್ಜಿಗಳ ಶೀಘ್ರ ವಿಲೇವಾರಿಗಾಗಿ ಮರಳು ಸಮಸ್ಯೆ ಶಾಶ್ವತ ಪರಿಹಾರಕ್ಕಾಗಿ ನಿವೇಶನ ಮತ್ತು ವಸತಿಗಾಗಿ ಜೈಲ್‌ಭರೋ ಯಶಸ್ವಿಗೊಳಿಸಲು, ಕುಂದಾಪುರ ನಗರದಲ್ಲಿ ಯಕ್ಷಗಾನ ಕಲೆಗೆ ಅನುಮತಿ ನಿರಾಕರಣೆ ವಿರುದ್ಧ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಶ್ರದ್ಧಾಂಜಲಿ ಠರಾವು ಗಣೇಶಮೊಗವೀರ ಮಂಡಿಸಿದರು. ಸ್ವಾಗತ ಸಂತೋಷಹೆಮ್ಮಾಡಿ ಧನ್ಯವಾದ ವಿಜೇಂದ್ರ ಕೋಣಿ ನೆರವೇರಿಸಿದರು.

ಮಹಾಸಭೆಯು 17 ಜನರನ್ನೊಳಗೊಂಡ ನೂತನ ತಾಲೂಕು ಸಮಿತಿ ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಯು. ದಾಸಭಂಡಾರಿ, ಉಪಾಧ್ಯಕ್ಷರಾಗಿ ರಾಜೀವಪಡುಕೋಣೆ, ರಾಮಚಂದ್ರನಾವುಡ, ಶ್ರೀನಿವಾಸಪೂಜಾರಿ, ಜನಾರ್ಧನಆಚಾರ್, ಅಲೆಗ್ಸಾಂಡರ್, ಚಿಕ್ಕಯ್ಯಮೊಗವೀರ, ಗಣೇಶತೊಂಡೆಮಕ್ಕಿ, ಪ್ರಧಾನ ಕಾರ್ಯದರ್ಶಿಯಾಗಿ – ಸುರೇಶ್‌ಕಲ್ಲಾಗರ, ಕಾರ್ಯದರ್ಶಿಗಳಾಗಿ –ಗಣೇಶಮೊಗವೀರ, ಸತೀಶ್‌ತೆಕ್ಕಟ್ಟೆ, ವಿಜೇಂದ್ರ–ಕೋಣಿ, ಶ್ರೀಧರಉಪ್ಪುಂದ, ಅರುಣ್‌ಕುಮಾರ್, ರಮೇಶ್‌ಪೂಜಾರಿ, ಕೋಶಾಧಿಕಾರಿ – ಜಗದೀಶ್ ಆಚಾರ್‌ರೊಳಗೊಂಡ 157 ತಾಲೂಕು ಸಮಿತಿ ರಚನೆಗೊಂಡಿತು.

–ಸುರೇಶ್ ಕಲ್ಲಾಗರ್

ಕೇಳಿಸಿದ್ದು

ನಿಮ್ಮ ಬಳಿ ಕಪ್ಪು ಹಣ ಇದೆಯೇ? ಹೆದರಬೇಕಿಲ್ಲ, ನಿಮ್ಮೊಂದಿಗೆ ಪ್ರಧಾನಿಯಿದ್ದಾರೆ ಮಾತ್ರವಲ್ಲ ಹರ್ಯಾಣದ ಮುಖ್ಯಮಂತ್ರಿಗಳೂ ನಿಮ್ಮೊಂದಿಗಿದ್ದಾರೆ.
ಮನೀಷ್ ಗ್ರೋವರ್ – ಹರ್ಯಾಣದ ಸಚಿವ
(ಸಾಮಾಜಿಕ ತಾಣದಲ್ಲಿ ವೈರಲ್ ಆಗಿ ಹರಡುತ್ತಿರುವ ಭಾಷಣದ ವೀಡಿಯೋದಲ್ಲಿ)
ಸತ್ಯ ಹೇಳುವ ಬಿಜೆಪಿ ಶಾಸಕರೂ ಇದ್ದಾರೆ. ಹುಷಾರ್!



ಭೂಮಿ ಹಾಗೂ ಹಿತ್ತಲು ಸಹಿತ ವಸತಿ ಹಕ್ಕಿಗಾಗಿ ಯಶಸ್ವಿ ಹೋರಾಟ :

ಯು. ಬಸವರಾಜ

ಭೂಮಿ ಹಾಗೂ ನಿವೇಶನ ಹೋರಾಟ ಸಮಿತಿ–ಕರ್ನಾಟಕವು ಭೂಮಿ ಹಾಗೂ ಹಿತ್ತಲು ಸಹಿತ ವಸತಿ ಹಕ್ಕಿಗಾಗಿ ಕರೆ ನೀಡಲಾದ ನವೆಂಬರ್ 18, 2016ರ ರಾಜ್ಯದ ಎಲ್ಲಾ ತಾಲೂಕಾ ಕೇಂದ್ರಗಳಲ್ಲಿನ ಬೃಹತ್ ಪ್ರತಿಭಟನಾ ಪ್ರದರ್ಶನ, ಜಿಲ್ಲಾ ಹಾಗೂ ತಾಲೂಕಾ ಕಛೇರಿಗಳ ಮುತ್ತಿಗೆ ಮತ್ತು ಜೈಲ್ ಭರೋ ಚಳುವಳಿಯ ಕರೆಗೆ ರಾಜ್ಯದ ಜನತೆ ಸೂಕ್ತವಾಗಿ ಸ್ಪಂದಿಸಿದೆ. ಸುಮಾರು 20ಕ್ಕೂ ಅಧಿಕ ಸಂಘಟನೆಗಳು ಈ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ಕಳೆದ ಎರಡು ತಿಂಗಳಿಂದ ಸಿಧ್ಧಗೊಂಡ ಈ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಲಕ್ಷಾಂತರ ಕುಟುಂಬಗಳು ತಮ್ಮನ್ನು ತೊಡಗಿಸಿಕೊಂಡಿದ್ದವು. ಈ ಚಳುವಳಿಗಾಗಿ ಹೋರಾಟ ಸಮಿತಿ ಮತ್ತು ವಿವಿಧ ಸಂಘಗಳು ಚಳುವಳಿಯನ್ನು ಮತ್ತಷ್ಟು ವಿಶಾಲವಾಗಿ ಜನರ ಬಳಿ ಕೊಂಡೊಯ್ಯಲು ಸುಮಾರು 2.5 ಲಕ್ಷದಷ್ಟು ಕರಪತ್ರಗಳನ್ನು ಮತ್ತು 25 ಸಾವಿರ ಪೋಸ್ಟರ್ ಮುದ್ರಿಸಿ ಅಂಟಿಸಿವೆ ಮತ್ತು ವಿತರಿಸಿವೆ. ನವೆಂಬರ್–18ರ ಪೂರ್ವದಲ್ಲಿ ಜಿಲ್ಲಾವಾರು ಜಂಟಿ ಸಭೆಗಳು/ಸಮಾವೇಶಗಳು ಮತ್ತು ತಾಲೂಕಾವಾರು ಜಂಟಿ ಸಭೆಗಳು ಮತ್ತು ಸಮಾವೇಶಗಳನ್ನು ಸಂಘಟಿಸಿವೆ. ಮಾತ್ರವಲ್ಲಾ, ರಾಜ್ಯದೆಲ್ಲೆಡೆ ವಸತಿ ಹೀನರು, ಭೂಹೀನರು, ಸರಕಾರಿ ಹಾಗೂ ಅರಣ್ಯ ಭೂಮಿ ಸಾಗುವಳಿ ನಿರತರ ನಡುವೆ ವ್ಯಾಪಕವಾಗಿ ಪ್ರಚಾರವನ್ನು ಕೈಗೊಂಡಿವೆ. ಈ ಚಳುವಳಿಗೆ ಜನತೆ ಬರದಂತೆ ತಡೆಯಲು ವಿರೋಧಿಗಳು ಯತ್ನಿಸಿದಾಗಲೂ ಮತ್ತು ವ್ಯತಿರಿಕ್ತವಾದ ವಾತಾವರಣವಿದ್ದಾಗಲೂ, ರಾಜ್ಯದಲ್ಲಿ ಒಟ್ಟು 27 ಜಿಲ್ಲಾ ಕೇಂದ್ರಗಳಲ್ಲಿ ಮತ್ತು 56 ತಾಲೂಕಾ ಕೇಂದ್ರಗಳಲ್ಲಿ ಸುಮಾರು 100ಕ್ಕೂ ಅಧಿಕ ತಾಲೂಕಗಳ ಸುಮಾರು 40 ಸಾವಿರ ಫಲಾನುಭವಿಗಳು ನೇರವಾಗಿ ಪ್ರತಿಭಟನಾ ಮೆರವಣಿಗೆ ಮತ್ತು ತಾಲೂಕಾ/ಜಿಲ್ಲಾ ಕಛೇರಿಗಳ ಮುತ್ತಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ವಿಶೇಷ. ಇವರು ಸರಕಾರದ ಕೆಲಸ ಕಾರ್ಯಗಳನ್ನು ಗಂಟೆಗಟ್ಟಲೇ ತಡೆದಿದ್ದಾರೆ. ಪೋಲೀಸ್ ಬ್ಯಾರಿಕೇಡ್‌ಗಳನ್ನು ತಳ್ಳಿ ನುಗ್ಗಿದ್ದಾರೆ. ಮಳವಳ್ಳಿಯಲ್ಲಿ ಪೋಲೀಸರು ನಮ್ಮ ಸಂಗಾತಿಯನ್ನು ಲಾಟಿಯಿಂದ ಹೊಡೆದಿದ್ದಾರೆ. ಮಾತ್ರವಲ್ಲಾ, ಬೂಟುಗಾಲಿನಿಂದ ಒದೆದು ತುಳಿದಾಡಿ ಬೆದರಿಸುವ ಪ್ರಯತ್ನ ಮಾಡಿದ್ದಾರೆ ಮತ್ತು ಇದನ್ನು ತಡೆಯಲು ರಾಜ್ಯದ ಆಡಳಿತ ಮತ್ತು ಪೋಲೀಸ್ ಇಲಾಖೆ ಏನೆಲ್ಲಾ ಬಂದೋಬಸ್ತ ವ್ಯವಸ್ಥೆ ಮಾಡಿದ್ದರೂ ಅದು ಮುತ್ತಿಗೆ ಯಶಸ್ವಿಯಾಗಿ ನಡೆದಿದೆ.

ಜೈಲು ತುಂಬಲು ರಾಜ್ಯದಲ್ಲಿ ಸುಮಾರು 10,000 ಸಂಖ್ಯೆಯಲ್ಲಿ ಜನತೆ ಸಜ್ಜಾಗಿಯೇ ಬಂದಿದ್ದರು ಮತ್ತು ಮುತ್ತಿಗೆ ಕಾರ್ಯಕ್ರಮದಲ್ಲಿ ಬಂದಿಸಲ್ಪಟ್ಟವರ ಸಂಖ್ಯೆಯು ಸುಮಾರು 12,000 ದಷ್ಟಾಗಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜೈಲಿಗೆ ನಡೆಯಲು ಸಿದ್ದವಾದವರನ್ನು ಜೈಲಿಗೆ ಕಳುಹಿಸಲು ಜೈಲುಗಳಲ್ಲಿ ಸ್ಥಳಾಭಾವವಿರುವುದರಿಂದ ಮತ್ತು ಹಾಗೆ ಈ ಜೈಲು ತುಂಬುವ ಚಳುವಳಿ ಯಶಸ್ವಿಯಾದಲ್ಲಿ ಅದು ಬೆಳಗಾವಿ ವಿಧಾನ ಸಭಾ ಅಧಿವೇಶನದಲ್ಲಿ ಚರ್ಚೆಗೆ ಬರಬಹುದೆಂಬ ಭೀತಿಯಿಂದ ಸರಕಾರ ಹಿಂದೇಟು ಹಾಕಬೇಕಾಗಿ ಬಂದಿದೆ. ಮತ್ತು ಈ ಚಳುವಳಿಯನ್ನು ಆ ಮಟ್ಟಿಗೆ ವಿಫಲಗೊಳಿಸುವ ದುರುದ್ದೇಶವನ್ನು ಸರಕಾರ ಹೊಂದಿತ್ತು. ಆದ್ದರಿಂದಲೇ, ಎಲ್ಲಾ ಜಿಲ್ಲಾ ಪೋಲೀಸ್ ಕಛೇರಿಗಳಿಗೆ ಬಂದಿಸಿದವರನ್ನು ಕರ್ನಾಟಕ ಪೋಲೀಸ್ ಕಾಯ್ದೆ 71 ಕಲಂನಂತೆ ಬಂಧಿಸಿ, ಬಿಡುಗಡೆ ಮಾಡಲು ಆದೇಶಿಸಿದೆ. ಬಂಧಿಸಲ್ಪಟ್ಟು ವಾಪಾಸು ಹೋಗಲು ನಿರಾಕರಿಸಿ ಒತ್ತಡ ಹೇರಿದವರ ಕುರಿತು ಮೇಲಿನಿಂದ ಕೆಳಗೆ ಪೋಲೀಸ್ ಇಲಾಖೆಯಲ್ಲಿ ಚರ್ಚೆ ನಡೆದಿದೆ. ಹೀಗಾಗಿ ಹಲವೆಡೆ ಅವರನ್ನು ಸಂಜೆ 6–7 ಗಂಟೆಯವರೆಗೆ ಹಿಡಿದಿಟ್ಟುಕೊಂಡು ಮೇಲಾದಿಕಾರಿಗಳ ಆದೇಶಕ್ಕಾಗಿ ಕಾದು ನಂತರ ಜೈಲಿಗೆ ಕಳುಹಿಸಲಾಗದೆಂದು ತಿಳಿಸಲಾಗಿದೆ.

ಶಿರುಗುಪ್ಪಾ ಪಟ್ಟಣದಲ್ಲಿ ಕೆಲವರನ್ನು ಮಾತ್ರವೇ ಕಳುಹಿಸುವುದಾಗಿ 21 ಜನರ ಹೆಸರು ಪಡೆದು ಬಂಧಿಸಿದ ನೂರಾರು ಜನರನ್ನು ವಾಪಾಸು ಕಳುಹಿಸಿ, ನಂತರ ಜೈಲಿಗೆ ಕಳುಹಿಸಲಾಗುವುದೆನ್ನುವ ಆ 21 ಜನರಿಗೆ, ನೀವೂ ಇಲ್ಲಿ ಎಷ್ಟು ಹೊತ್ತಾದರೂ ಕೂಡಿರಿ, ನಮಗೆ ಮೇಲಿಂದ ಆದೇಶವಿದೆ. ನಿಮ್ಮನ್ನು ಜೈಲಿಗೆ ಕಳುಹಿಸಲಾಗದೆಂದು ಒಬ್ಬ ಮಹಿಳಾ ಪೋಲೀಸ ಸಿಬ್ಬಂಧಿಯನ್ನು ಬಿಟ್ಟು ಎಲ್ಲಾ ಪೋಲೀಸ್ ಸಿಬ್ಬಂಧಿ ಠಾಣೆಯಿಂದ ಹೊರ ನಡೆದ ಘಟನೆ ಬೆಳಕಿಗೆ ಬಂದಿದೆ. ಕುರುಗೋಡು ಪೋಲೀಸ್ ಅಧಿಕಾರಿಗಳು 300ಕ್ಕೂ ಜನರನ್ನು ಬಂಧಿಸಿ ಠಾಣೆಗೆ ಕರೆದೊಯ್ದು ಎಲ್ಲರಿಗೆ ಊಟ ಕೊಡಿಸಿ, ಯಾರದೇ ಹೆಸರನ್ನು ದಾಖಲಿಸಿಕೊಳ್ಳದೇ ಮಧ್ಯಾಹ್ನ 03 ಗಂ–ಟೆಗೆ ನಿಮ್ಮನ್ನೆಲ್ಲಾ ಬಿಡುಗಡೆ ಮಾಡಲಾಗಿದೆಯೆಂದು ಘೋಷಿಸಿದ್ದಾರೆ. ನಮ್ಮ ಮುಖಂಡರು ಮರಳಿ ಹೋಗಿ ತಾಲೂಕ ಕಛೇರಿ ಮುತ್ತಿಗೆ ಹಾಕುವುದಾಗಿ ಹೇಳಿದರೇ, ಮರಳಿ ಬಂದು ಬಂದಿಸುವುದಾಗಿ ಹೇಳಿದ ಅಧಿಕಾರಿಗಳು, ನೀವೆಷ್ಟು ಭಾರಿ ಹೋಗಿ ಮುತ್ತಿಗೆ ಹಾಕಿದರೂ ಕೂಡಲೇ ಬಂದಿಸುವೆವೆ ಹೊರತು, ನಿಮ್ಮ ಮೇಲೆ ಕೇಸು ದಾಖಲಿಸುವುದಿಲ್ಲ ಮತ್ತು ಜೈಲಿಗೂ ಕಳುಹಿಸುದಿಲ್ಲವೆಂದಿದ್ದಾರೆ. 06 ಗಂಟೆಯವರೆಗೂ ಠಾಣೆಯಲ್ಲಿ ಠಿಕಾಣಿ ಹೂಡಿದರೂ, ಅದೇ ಮಾತನ್ನು ಹೇಳಿ ವಾಪಾಸು ಕಳುಹಿಸಿದ್ದಾರೆ.

ಹಗರಿಬೊಮ್ಮನಹಳ್ಳಿಯಲ್ಲಿ ಸುಮಾರು 71 ಜನ ದೇವದಾಸಿ ಮಹಿಳೆಯರನ್ನು ಬಂಧಿಸಿ ಊರಾಚೆ 10 ಕಿಮೀ ದೂರದಲ್ಲಿರುವ ಪ್ರವಾಸಿ ಮಂದಿರದಲ್ಲಿ ಕೂಡಿ ಹಾಕಿ ಊಟ ನೀಡಿದ್ದಾರೆ. ಜೈಲಿಗೆ ಕಳುಹಿಸುವಂತೆ ಒತ್ತಾಯ ಗಂಭೀರವಾಗಿ ಮಾಡಿದಾಗಲೂ, ಬೇಕಾದರೇ ನೀವು ಇಲ್ಲಿಯೇ ಇರಿ, ನಿಮಗೆ ರಾತ್ರಿ ಊಟ ನೀಡುವುದಾಗಿ ತಿಳಿಸಿದ್ದಲ್ಲದೇ, ಜೈಲಿಗೆ ಕಳುಹಿಸಲಾಗದೆಂದು ಹೇಳಿದವರು, ಸಂಜೆ 6.30 ರವರೆಗೆ ಅಲ್ಲಿಯೇ ಕೂಡಿಟ್ಟು ಬಿಟ್ಟು ಬಿಟ್ಟಿದ್ದಾರೆ.

ಇಂತಹದ್ದೇ, ಬಹುತೇಕ ಬೇರ, ಬೇರ, ಜಲ್ಲೆಗಳಲ್ಲಿ ಬಂದನಕ್ಕೊಳಗಾದವರ ಪರಿಸ್ಥಿತಿಯಾಗಿದೆ. ಇನ್ನೂ ಮಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಂಧಿಸಿದ್ದರೂ, ಜೈಲಿನಲ್ಲಿನ ಸ್ಥಳಾವಕಾಶ ನೋಡಿ–ಕೊಂಡು ಕೇವಲ 85 ಜನರನ್ನಷ್ಟೇ ಜೈಲಿಗೆ ಕಳುಹಿಸಿದ್ದಾರೆ. ಅದೇ ರೀತಿ, ಬಾಗೇಪಲ್ಲಿಯಲ್ಲಿ 500 ಜನರನ್ನು ಬಂಧಿಸಿದ್ದರೂ ಜೈಲಿಗೆ ಹೋಗುವವರ ಸಂಖ್ಯೆಯನ್ನು ಕಡಿಮೆ ಮಾಡದೇ ಜೈಲಿಗೆ ಕಳುಹಿಸಲಾಗದೆಂದು ಚೌಕಾಸಿ ನಡೆಸಿ, ಕೇವಲ 63 ಜನರನ್ನು ಮಾತ್ರ ಜೈಲಿಗೆ ಕಳುಹಿಸಿದ್ದಾರೆ. ರಾಜ್ಯದಲ್ಲಿ ಬಾಗೇಪಲ್ಲಿ, ಮಂಗಳೂರು, ಮಳವಳ್ಳಿಗಳಲ್ಲಿ ಮಾತ್ರ ಪೋಲಿಸ್ ಮೊಕದ್ದಮೆ ಹೂಡಿದ್ದಾರೆ.

ಒಟ್ಟಾರೇ, ಸರಕಾರದ ಮೇಲೆ ಗಂಭೀರವಾದ ಒತ್ತಡವಿದ್ದರೂ, ಉದ್ದೇಶ ಪೂರ್ವಕವಾಗಿ ಜೈಲಿಗೆ ಕಳುಹಿಸದಂತೆ ಕ್ರಮವಹಿಸಿದೆ. ಇದೆಲ್ಲವೂ ಚಳುವಳಿ ಯಶಸ್ವಿಯಾದುದನ್ನು ತಿಳಿಸುತ್ತದೆ.

ಜನಗಳ ಒತ್ತಡಕ್ಕೆ ಮಣಿಯುತ್ತಿರುವ ಸರಕಾರ – ಭೂ ಚಳುವಳಿಗೆ ದೊರೆತ ಜಯ

ರಾಜ್ಯದ ಜನತೆ, ಭೂಮಿ ಹಾಗೂ ಹಿತ್ತಲು ಸಹಿತ ವಸತಿ ಹಕ್ಕಿಗಾಗಿ ನಿರಂತರವಾಗಿ ನಡೆಸುತ್ತಿರುವ ಚಳುವಳಿಗೆ ಮಣಿದು, ಜೈಲ್ ಭರೋ ಚಳುವಳಿಯ ಗಂಭಿರ ಸಿದ್ದತೆಯನ್ನು ಗಮನಿಸಿ, ರಾಜ್ಯದ ಗೋಮಾಳ ಜಮೀನನ್ನು ವಿತರಿಸಲು ಅನುಕೂಲವಾಗುವಂತೆ ಅಗತ್ಯ ಕಾನೂನು ತಿದ್ದುಪಡಿಗೆ ಕ್ರಮವಹಿಸಲಾಗುತ್ತಿದೆಯೆಂದು ಹೇಳಿತ್ತು. ಇದೀಗ ಈ ಹಿಂದೆ ವಿವಿಧ ಹೆಸರಿನ ಸರಕಾರಿ ಜಮೀನುಗಳ ಹಕ್ಕುಪತ್ರಕ್ಕಾಗಿ ಸಲ್ಲಿಸಲಾಗಿದ್ದ ಅರ್ಜಿ ತಿರಸ್ಕೃತಗೊಂಡವರು ಪುನ: ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವದೆಂದು ಸಚಿವ ಕಾಗೋಡು ತಿಮ್ಮಪ್ಪನವರು ಹೇಳಿಕೆ ನೀಡಿರುವುದು, ಈ ಎಲ್ಲವೂ, ಭೂ ಚಳುವಳಿಯಲ್ಲಿ ತೊಡಗಿದ ಜನತೆಯ ಹೋರಾಟಕ್ಕೆ ಸಂದ ಜಯವಾಗಿದೆ. ನಿಧಾನವಾಗಿಯಾದರೂ ಇಂತಹ ಕ್ರಮದೆಡೆಗೆ ಸರಕಾರ ಸಾಗಿರುವುದನ್ನು ಭೂಮಿ ಹಾಗೂ ನಿವೇಶನ ಹಕ್ಕು ಹೋರಾಟ ಸಮಿತಿ ಸ್ವಾಗತಿಸಿದೆ.

ಆದಾಗಲೂ, ಭೂಕಂದಾಯ ಕಾಯ್ದೆಯ ಇತರ ಅಂಶಗಳಿಗೆ ತಿದ್ದುಪಡಿ ಮಾಡಿ ಹಕ್ಕುಪತ್ರಗಳನ್ನು ಖಚಿತಪಡಿಸುವ ಮತ್ತು ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಗೆ ಅಗತ್ಯ ತಿದ್ದುಪಡಿ ತರುವಂತೆ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ರಾಜ್ಯ ಸರಕಾರ ಮಾಡಬೇಕಾಗಿದೆ. ಅದೇ ರೀತಿ, ರಾಜ್ಯದಾದ್ಯಂತ ವಸತಿ ಹೀನರಿಗೆ ಹಿತ್ತಲು ಸಹಿತ ಉಚಿತ ಮನೆ ಮತ್ತು ಹಿತ್ತಲಿನಲ್ಲಿ ಬದುಕು ಕಟ್ಟಿ ಕೊಡಲು ಅಗತ್ಯ ನೆರವನ್ನು ನೀಡುವ ಕುರಿತು ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಜನತೆಯ ಪ್ರಶ್ನೆಗಳ ಕುರಿತು ಉದಾಸೀನತೆಯನ್ನು ಕೈ ಬಿಡುವಂತೆ ಭೂಮಿ ಹಾಗೂ ನಿವೇಶನ ಹೋರಾಟ ಸಮಿತಿ–ಕರ್ನಾಟಕ ಪುನಃ ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ❑

ಧನ್ಯವಾದಗಳು/ ಅಭಿನಂದನೆಗಳು :

ನವೆಂಬರ್– 18ರ ತಾಲೂಕಾ ಕೇಂದ್ರಗಳಲ್ಲಿನ ಪ್ರತಿಭಟನಾ ಮೆರವಣಿಗೆ, ತಾಲೂಕ/ ಜಿಲ್ಲಾ ಕಛೇರಿ ಮುತ್ತಿಗೆ ಮತ್ತು ಜೈಲ್‌ಭರೋ ಚಳುವಳಿ ಯಶಸ್ವಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೆ ಧನ್ಯವಾದಗಳನ್ನು ಮತ್ತು ಜೈಲ್ ಭರೋದಲ್ಲಿ ತೊಡಗಲು ಸಕಲ ಸಿದ್ದತೆಗಳೊಂದಿಗೆ ಮುಂದಾಗಿದ್ದ ಅದೇ ರೀತಿ, ಜೈಲಿಗೆ ಹೋಗಿಬಂದ ಮತ್ತು ಈ ಚಳುವಳಿಯಲ್ಲಿ ಭಾಗಿಯಾದ ಎಲ್ಲರನ್ನು ಭೂಮಿ ಹಾಗೂ ನಿವೇಶನ ಹೋರಾಟ ಸಮಿತಿ– ಕರ್ನಾಟಕ, ತನ್ನ ಹೃದಯ ಪೂರ್ವಕ ಅಭಿನಂದನೆಗಳನ್ನು ತಿಳಿಸಿದೆ.

ಪೋಲೀಸ್ ದುಂಡಾವರ್ತನೆ ಖಂಡನೆ :

ಮಳವಳ್ಳಿ ತಾಲೂಕಾ ಕಛೇರಿಯ ಮುಂದುಗಡೆ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಸಂಯಮದಿಂದ ವರ್ತಿಸಿ ನಿಭಾಯಿಸಬೇಕಿದ್ದ ಅಲ್ಲಿನ ಪೋಲೀಸ್ ಅಧಿಕಾರಿಗಳು ಮತ್ತು ಪೋಲೀಸರು ಕನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಪಧಾದಿಕಾರಿಗಳಾದ ಕಾಂ. ಹನುಮೆಗೌಡರ ಮೇಲೆ ಲಾಠಿಯಿಂದ ತಲೆಗೆ, ಮೈಕೈಗೆ ಹೊಡೆದು, ಕೆಳಗೆಡೆ ಹಾಕಿ ಬೂಟುಗಾಲಿನಿಂದ ಒದೆದು ತುಳಿದಾಡಿ ಅವರು ಆಸ್ಪತ್ರೆಗ ದಾಖಲಾಗುವಂತಹ ಪರಿಸ್ಥಿತಿಯನ್ನು ನಿರ್ಮಿಸಿದ ಪೋಲೀಸರ ದೌರ್ಜನ್ಯವನ್ನು ಭೂಮಿ ಹಾಗೂ ನಿವೇಶನ ಹೋರಾಟ ಸಮಿತಿಯು ಬಲವಾಗಿ ಖಂಡಿಸಿದೆ ಮತ್ತು ತಕ್ಷಣವೇ ಜಿಲ್ಲಾಡಳಿತ ಹಾಗೂ ಸರಕಾರ ಕೂಡಲೇ ದೌರ್ಜನ್ಯದಲ್ಲಿ ತೊಡಗಿದ, ಕಾನೂನನ್ನು ಕೈಗೆತ್ತಿಕೊಂಡ ಪೋಲೀಸ್ ಅಧಿಕಾರಿಗಳು ಮತ್ತು ಪೋಲೀಸರನ್ನು ಅಮಾನತುಗೊಳಿಸಿ ಕಾನೂನಿನ ಕ್ರಮಕೈಗೊಳ್ಳಲು ಒತ್ತಾಯಿಸಿದೆ.





ಜನತೆಯ ಮೇಲೆ 'ನಗದು ಸಮರ' !

ನವೆಂಬರ್ 22ರ ವರೆಗಿನ ವರದಿಗಳಂತೆ ನೋಟು ರದ್ದತಿ ಕ್ರಮದಿಂದಾಗಿ ದೇಶದ ವಿವಿಧ ಭಾಗಗಳಲ್ಲಿ 75ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಸರದಿ ಸಾಲುಗಳಲ್ಲಿ ನಿಂತು ಪ್ರಾಣ ಕಳೆದುಕೊಂಡ ಜನರಿಗಾಗಿ ವಿಷಾದವಾಗಲೀ ಒಂದು ಸಂತಾಪದ ನುಡಿಯಾಗಲೀ ಪ್ರಧಾನ ಮಂತ್ರಿಗಳ 'ದಿಟ್ಟ ಕ್ರಮ'ವನ್ನು ಹಾಡಿ ಹೊಗಳಿದ ಬಿಜೆಪಿ ಸಂಸದೀಯ ಪಕ್ಷದ ಗೊತ್ತುವಳಿಯಲ್ಲಿ ಇಲ್ಲ. ಪ್ರಧಾನಿ ಮತ್ತು ಆಳುವ ಪಕ್ಷದವರು ಅಧಿಕಾರದ ಅಮಲಿನಲ್ಲಿ ತೇಲುತ್ತಾ ಜನರ ಸಂಕಷ್ಟಗಳಿಗೆ ಕುರುಡಾಗಿದ್ದಾರೆ. ಈ ಅಮಾನವೀಯ ಮೋದಿ ಸರಕಾರಕ್ಕೆ ತಕ್ಕ ಉತ್ತರ ನೀಡಲು ಒಂದು ಪ್ರಬಲವಾದ ಪ್ರತಿಭಟನೆ ನಡೆಸಬೇಕಾಗಿದೆ.



ಪ್ರಕಾಶ್ ಕಾರಟ್

ಪ್ರಧಾನಿ ನರೇಂದ್ರ ಮೋದಿ ಭಾರತದ ಜನರ ಮೇಲೆ ಸಾರಿರುವ 'ನಗದು ಸಮರ' ಜನತೆಯನ್ನು ಭಾರೀ ಸಂಕಷ್ಟಕ್ಕೆ ನೂಕಿದೆ. ರೂ. 1000 ಮತ್ತು ರೂ. 500 ರ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆದಿದ್ದರಿಂದ ಉಂಟಾದ ಸಮಸ್ಯೆಗಳ ಪರಿಣಾಮವಾಗಿ ದೇಶದಾದ್ಯಂತ ಪುರುಷರು, ಮಹಿಳೆಯರು ಮತ್ತು ಮಕ್ಕಳ ಸಹಿತ ಅನೇಕ ಜನರು ಪ್ರಾಣ ಕಳೆದುಕೊಂಡಿದ್ದಾರೆ. ನವೆಂಬರ್ 22ರ ವರೆಗಿನ ವರದಿಗಳಂತೆ ದೇಶದ ವಿವಿಧ ಭಾಗಗಳಲ್ಲಿ 75ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಹಾಗೂ ಈ ಸಂಖ್ಯೆ ಏರುತ್ತಲೇ ಇದೆ.

ತಮ್ಮದೇ ಹಣವನ್ನು ಪಡೆಯಲು ಬ್ಯಾಂಕ್‌ಗಳು ಹಾಗೂ ಎಟಿಎಂಗಳ ಹೊರಗೆ ಉದ್ದನೆಯ ಸರದಿ ಸಾಲಿನಲ್ಲಿ ನಿಂತಿದ್ದ ಕೆಲವರು ಮೃತಪಟ್ಟಿದ್ದಾರೆ. ಇನ್ನು ಕೆಲವರು ತಮ್ಮ ಮಗಳ ಮದುವೆಯ ಖರ್ಚನ್ನು ಭರಿಸಲು ಸಾಧ್ಯವಾಗದೆಯೋ ಇನ್ನು ಕೆಲವರು ತಮ್ಮ ಮಕ್ಕಳ ಶಾಲಾ-ಕಾಲೇಜ್ ಶುಲ್ಕವನ್ನು ಕಟ್ಟಲಾಗದೆಯೋ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಉತ್ತರ ಪ್ರದೇಶದ ಬಂಡಾ ಜಿಲ್ಲೆಯ 18 ವರ್ಷ ಪ್ರಾಯದ ಬಿಎಸ್ಸಿ ವಿದ್ಯಾರ್ಥಿನಿಯ ತಂದೆ ತನ್ನ ಮಗಳ ಪರೀಕ್ಷಾ ಶುಲ್ಕ ಪಾವತಿಸಲಾಗದೆ ನೇಣು ಬಿಗಿದು-ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಒಂದು ಉದಾಹರಣೆಯಾಗಿದೆ. ಇಂಥ ದುರಂತಮಯ ಹಾಗೂ ಹೃದಯವಿದ್ರಾವಕ ಪ್ರಕರಣಗಳು ವರದಿಯಾಗುತ್ತಲೇ ಇವೆ.

ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ಸಿಗದೆ ಸಾವನ್ನಪ್ಪಿದ ಮನಕಲಕುವ ಪ್ರಕರಣ ನಂದಿನಿ ನಮತಾ ಅವರದ್ದಾಗಿದೆ. ಜಾರ್ಖಂಡ್‌ನ ಘಟ್‌ಸಾಲಾದಲ್ಲಿ ಸಿಪಿಐ (ಎಂ) ಜಿಲ್ಲಾ ಸಮಿತಿ ಸದಸ್ಯರ 12 ವರ್ಷದ ಪುತ್ರಿಯ ದುರಂತ ಸಾವು ಜನವಿರೋಧಿ ಅನಾಣ್ಯೀಕರಣ ಯೋಜನೆಯು ತಂದೊಡ್ಡಿರುವ ಸಂಕಷ್ಟಗಳಿಗೆ ಒಂದು ಮಾದರಿ ಉದಾಹರಣೆಯಾಗಿದೆ. ತೀವ್ರ ಜ್ವರದಿಂದ ಬಳಲುತ್ತಿದ್ದ ಬಾಲಕಿ ನಂದಿನಿಯನ್ನು ಜಮ್ಷೆಡ್‌ಪುರದ ಆಸ್ಪತ್ರೆಗೆ ದಾಖಲಿಸಲು ಸಾಧ್ಯವಾಗಲಿಲ್ಲ. ತಂದೆಯ ಬಳಿಯಿದ್ದ ರೂ. 500ರ ನೋಟನ್ನು ಪಾವತಿಸಿ ಸಾರಿಗೆ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗದಿರುವುದೇ ಇದಕ್ಕೆ ಕಾರಣ. ಕಣ್ಣೆದುರೇ ಪುಟ್ಟ ಕಂದಮ್ಮ ಸಾವಿಗೀಡಾಗುವುದನ್ನು ಕುಟುಂಬ ಸದಸ್ಯರು ಸಂಕಟ, ಅಸಹಾಯಕತೆಯಿಂದ ನೋಡಬೇಕಾಯಿತು.



ಹತಾಶೆ, ನೋವು ಹಾಗೂ ದುರಂತದ ಈ ವೈಯಕ್ತಿಕ ಪ್ರಕರಣಗಳು ತಮ್ಮ ಜೀವನೋಪಾಯ, ಸಣ್ಣ ಪುಟ್ಟ ಉಳಿತಾಯಗಳನ್ನು ಕಳೆದುಕೊಂಡು ಹಾಗೂ ಹಸಿವಿನಿಂದ ಕಂಗೆಟ್ಟಿರುವ ದುಡಿಯುವ ಜನಸಮುದಾಯವನ್ನು ಕಾಡುತ್ತಿರುವ ಒಟ್ಟಾರೆ ಬಿಕ್ಕಟ್ಟಿನ ಭಾಗವಾಗಿವೆ.

ತಮ್ಮ ನಿಯಂತ್ರಣದಲ್ಲಿಲ್ಲದ ಒಂದು ವಿಕೋಪದ ಅಪರಿಮಿತ ಪರಿಣಾಮಗಳನ್ನು ಅನುಭವಿಸುತ್ತಿರುವವರು ತನ್ನ ದಿಟ್ಟ ಕ್ರಮಗಳಿಂದಾಗಿ ಸಂತೋಷ ಪಡುತ್ತಿರುವ ಹಾಗೂ ರಾತ್ರಿ ನಿಶ್ಚಿಂತೆಯಿಂದ ನಿದ್ರಿಸುತ್ತಿರುವ ಜನರಿವರು ಎಂದು ಮೋದಿ ಬಡಾಯಿ ಕೊಚ್ಚಿಕೊಳ್ಳುತ್ತಿರುವ ಈ ಸಾಮಾನ್ಯ ಜನರೇ ಆಗಿದ್ದಾರೆ.

ಬ್ಯಾಂಕ್‌ಗಳ ಹೊರಗೆ ಸಾಲುಗಟ್ಟಿ ನಿಂತಿರುವ "ಸಾಮಾನ್ಯ ಜನರು ಮತ್ತು ಇತರ ಪ್ರಾಮಾಣಿಕ ಜನರು" "ಇತ್ತೀಚಿನ ವರ್ಷಗಳಲ್ಲೇ ನಮ್ಮ ದೇಶದಲ್ಲಿ ಆದ ಬೃಹತ್ ವಿದ್ಯಮಾನಕ್ಕೆ ಸಾಕ್ಷಿ" ಎಂದು ಬಿಜೆಪಿ ಸಂಸದೀಯ ಪಕ್ಷದ ಸಭೆ ಅಂಗೀಕರಿಸಿದ ಗೊತ್ತುವಳಿ ವರ್ಣಿಸಿದೆ. ಸರದಿ ಸಾಲುಗಳಲ್ಲಿ ನಿಂತು ಪ್ರಾಣ ಕಳೆದುಕೊಂಡ ಜನರಿಗಾಗಿ ವಿಷಾದವಾಗಲೀ ಒಂದು ಸಂತಾಪದ ನುಡಿಯಾಗಲೀ ಈ ಗೊತ್ತುವಳಿಯಲ್ಲಿ ಇಲ್ಲ. ಪ್ರಧಾನಿ ಮತ್ತು ಆಳುವ ಪಕ್ಷದವರು ಅಧಿಕಾರದ ಅಮಲಿನಲ್ಲಿ ತೇಲುತ್ತಾ ಜನರ ಸಂಕಷ್ಟಗಳಿಗೆ ಕುರುಡಾಗಿದ್ದಾರೆ.

ಜನತೆಯ ಮೇಲಿನ ಈ ನಿರ್ದಯ ದಾಳಿಯ ವಿರುದ್ಧ ನವೆಂಬರ್ 24ರಿಂದ 30ರವರೆಗೆ ಪ್ರತಿಭಟನಾ ಸಪ್ತಾಹ ಆಚರಿಸಲು ಎಡಪಕ್ಷಗಳು ಕರೆ ನೀಡಿವೆ. ನವೆಂಬರ್ 28 ರಂದು 'ಆಕ್ರೋಶ ದಿನ' ಆಚರಿಸಲು ಎಲ್ಲ ಪ್ರತಿಪಕ್ಷಗಳು ಕರೆ ನೀಡಿವೆ. ಅಮಾನವೀಯ ಮೋದಿ ಸರಕಾರಕ್ಕೆ ತಕ್ಕ ಉತ್ತರ ನೀಡಲು ಒಂದು ಪ್ರಬಲವಾದ ಪ್ರತಿಭಟನೆ ನಡೆಸಬೇಕಾಗಿದೆ.

ಸುರೇಶ ಪ್ರಭು ಅವರ ಆಡಳಿತದಲ್ಲಿ ರೈಲ್ವೆಯು ಒಂದು ದ್ವಂದ್ವ, ಬೇರ್ಪಡಿಸಿದ ಸಾರಿಗೆ ವ್ಯವಸ್ಥೆ ಆಗಿದೆ. ಹೊಸ ವಿನ್ಯಾಸದ ಬೋಗಿಗಳೊಂದಿಗೆ ಹಾಗೂ ಶ್ರೀಮಂತ ವರ್ಗಕ್ಕೆಂದೇ ಇರುವ ದುಬಾರಿ ಪ್ರಯಾಣ ದರದ ಅತಿ ವೇಗದ ರೈಲುಗಳು ಒಂದು ವಿಭಾಗ. ಈ ವಿಭಾಗವನ್ನು ಕ್ರಮೇಣ ಖಾಸಗೀಕರಿಸಲಾಗುತ್ತದೆ. ಹಳೆಯ ಮಾದರಿಯ ಬೋಗಿಗಳೊಂದಿಗೆ, ತೀರಾ ಕಳಪೆ ಮಟ್ಟದ ಸೇವೆ ಹಾಗೂ ನಿರ್ವಹಣೆಯ ಮತ್ತು ಸಾಮಾನ್ಯವಾಗಿ ತಡವಾಗಿ ಸಂಚರಿಸುವ ಪ್ಯಾಸೆಂಜರ್ ರೈಲುಗಳದ್ದು ಇನ್ನೊಂದು ವಿಭಾಗ. ಈಗಿನ ಭದ್ರತಾ ಮಾನದಂಡಗಳನ್ನು ನೋಡಿದರೆ, ಈ ಎರಡೂ ವಿಭಾಗಗಳಲ್ಲಿ ಅಪಘಾತಗಳು ಕಟ್ಟಿಟ್ಟ ಬುತ್ತಿ. ಪುಖ್ರಾಯನ್ ರೈಲ್ವೆ ಅಪಘಾತಕ್ಕೆ ತಪ್ಪಿತಸ್ಥರನ್ನು ಗುರುತಿಸಬೇಕೆಂದರೆ, ಸರಕಾರದ ಮತ್ತು ರೈಲ್ವೆ ಮಂಡಳಿಯ ನೇತಾರರತ್ತ ಬೆಟ್ಟು ಹೋಗುತ್ತದೆ. ಕೆಲವು ಗ್ಯಾಂಗ್‌ಮನ್ ಅಥವಾ ನಿರ್ವಹಣಾ ಸಿಬ್ಬಂದಿಯ ವಿರುದ್ಧ ಅಲ್ಲ.

ಸುರಕ್ಷಿತ ರೈಲು ಪ್ರಯಾಣ ಆದ್ಯತೆಯಾಗಬೇಕು, ಆಡಂಬರದ ಬುಲೆಟ್ ಟ್ರೇನ್‌ಗಳಲ್ಲ

ಕಾನ್ಪುರ ಸಮೀಪದ ಪುಖ್ರಾಯನ್‌ನಲ್ಲಿ ನಡೆದ ಇಂದೋರ್-ಪಾಟ್ನಾ ಎಕ್ಸ್‌ಪ್ರೆಸ್ ರೈಲ್ವೆ ಅಪಘಾತ ಅಪಾರ ಜೀವಗಳನ್ನು ಬಲಿತೆಗೆದುಕೊಂಡಿದೆ. 146 ಜನರು ಮೃತರಾಗಿದ್ದು 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಆ ಪೈಕಿ ಕೆಲವರು ಜೀವನ ಪರ್ಯಂತ ಕೈ-ಕಾಲು ಕಳೆದುಕೊಂಡು ಬದುಕಬೇಕಾಗಿದೆ. ಭಾರತೀಯ ರೈಲ್ವೆಯಲ್ಲಿ ಇಂಥ ಅಪಘಾತಗಳು ಅಪರೂಪವೇನೂ ಅಲ್ಲ, ಆಘಾತಕಾರಿಯೆನ್ನುವ ಮಟ್ಟಿಗೆ ಅಪಘಾತಗಳು ಹೆಚ್ಚುತ್ತಿವೆ. ಈ ವರ್ಷವೇ ಇದುವರೆಗೆ 80 ದೊಡ್ಡ ರೈಲು ಅಪಘಾತಗಳು ನಡೆದಿವೆ, ಕಳೆದ ವರ್ಷ ನಡೆದಿದ್ದು 69 ಅಪಘಾತಗಳು. ಪ್ರತಿ ವರ್ಷ ಸಾವಿರಾರು ಸಣ್ಣ ಅಪಘಾತಗಳು ನಡೆಯುತ್ತವೆ.

'ತಪ್ಪಿತಸ್ಥರ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ರೈಲ್ವೆ ಸಚಿವ ಸುರೇಶ್ ಪ್ರಭು ಆಶ್ವಾಸನೆ ನೀಡಿದ್ದಾರೆ. ಆದರೆ ತಪ್ಪಿತಸ್ಥರು ಯಾರು?. ರೈಲ್ವೆಯ ವಿವಿಧ ಭದ್ರತಾ ವಿಭಾಗಗಳಲ್ಲಿ 1.27 ಲಕ್ಷ ಹುದ್ದೆಗಳು ಖಾಲಿಯಿವೆ. ರೈಲ್ವೆಯಲ್ಲಿ ಭದ್ರತೆಯನ್ನು ಖಾತರಿಪಡಿಸುವುದಕ್ಕೆ ತೆಗೆದಿರಿಸುವ ಮೊತ್ತದಲ್ಲಿ ನಿರಂತರ ಕುಸಿತವಾಗುತ್ತಿದ್ದು ಈ ವಿಚಾರದಲ್ಲಿ ಸರಕಾರದ ಬದ್ಧತೆ ಏನೆಂಬುದು ಇದರಿಂದ ತಿಳಿಯುತ್ತದೆ. ರೈಲ್ವೆ ಬಜೆಟ್‌ನಲ್ಲಿನ 'ಸವಕಳಿ ಮೀಸಲು ನಿಧಿ'(ಡೆಪ್ರಿಸಿಯೇಷನ್ ರಿಸರ್ವ್ ಫಂಡ್)ಗೆ ಬಳಸಿಕೊಳ್ಳಲು ನಿಗದಿಸಿದ ಮೊತ್ತ ಹಾಗೂ ಅದರ ವೆಚ್ಚವೇ ಈ ಕುಸಿತಕ್ಕೆ ಸಾಕ್ಷಿಯಾದ ದಾಖಲೆಯಾಗಿದೆ. 2015-16ನೇ ರೈಲ್ವೆ ಬಜೆಟ್‌ನಲ್ಲಿ ಈ ನಿಧಿಯ ಅನ್ವಯ 7900 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ಪ್ರಕಾರ ನಿಜವಾಗಿ ನಿಗದಿಪಡಿಸಿದ್ದು 5500 ಕೋಟಿ ರೂಪಾಯಿ. 2016-17ರ ರೈಲ್ವೆ ಬಜೆಟ್‌ನಲ್ಲಿ ಇದಕ್ಕೆ ನಿಗದಿಪಡಿಸಿದ್ದು ಕೇವಲ 3200 ಕೋಟಿ ರೂಪಾಯಿ. 2008-09ರಲ್ಲಿ ಈ ಮೊತ್ತ 6000 ಕೋಟಿ ರೂಪಾಯಿ ಆಗಿತ್ತು.

ಅರ್ಧದಷ್ಟು ರೈಲು ಅಪಘಾತಗಳು ಹಳಿ ತಪ್ಪುವ ಮೂಲಕ ನಡೆಯುತ್ತವೆ. ಹಳಿಗಳ ನಿರ್ವಹಣೆಯನ್ನು ಮತ್ತು ಹಳಿಗಳ ಸಾಮಯಿಕ ನವೀಕರಣವನ್ನು ಎಷ್ಟು ನಿರ್ಲಕ್ಷಿಸಲಾಗಿದೆ ಎನ್ನುವುದನ್ನು ಇದು ತೋರಿಸುತ್ತದೆ. ರೈಲು ಬೋಗಿಗಳು ಹಳಿ ತಪ್ಪಿದಾಗ ಬಳಕೆಯಲ್ಲಿರುವ ಇಂಟಿಗ್ರಲ್ ಕೋಚ್ ಫ್ಯಾಕ್ಟರಿ (ಐಸಿಎಫ್) ತಯಾರಿಸಿದ ಬೋಗಿಗಳು ಒಂದರೊಳಗೊಂದು ಸೇರಿಕೊಳ್ಳುತ್ತವೆ. ಸಾವು-ನೋವಿಗೆ ಇದುವೇ ಮುಖ್ಯ ಕಾರಣ. ಹೊಸ ವಿನ್ಯಾಸದ ಎಲ್‌ಎಚ್‌ಬಿ ಬೋಗಿಗಳು ಪ್ರಮುಖವಾಗಿ ರಾಜಧಾನಿ ಎಕ್ಸ್‌ಪ್ರೆಸ್ ಮತ್ತು ಶತಾಬ್ದಿಯಂಥ ಶ್ರೀಮಂತರ ಅನುಕೂಲಕ್ಕಾಗಿರುವ ರೈಲುಗಳಲ್ಲಿ ಮಾತ್ರ ಇರುತ್ತವೆ. ಹಳೆಯ ವಿನ್ಯಾಸದ 40,000 ಬೋಗಿಗಳು ಇಂದು ಬಳಕೆಯಲ್ಲಿವೆ. ಆದರೆ ಸದ್ಯೋಭವಿಷ್ಯದಲ್ಲಿ ಅವುಗಳನ್ನು ಬದಲಾಯಿಸುವ ಯೋಚನೆ ರೈಲ್ವೆ ಖಾತೆಗಾಗಲೀ ರೈಲ್ವೆ ಮಂಡಳಿಗಾಗಲೀ ಇಲ್ಲ. ರೈಲ್ವೆ ಸುರಕ್ಷತೆ ಕುರಿತ ಅನಿಲ್ ಕಾಕೋಡ್ಕರ್ ಸಮಿತಿಯು ಎಲ್‌ಚ್‌ಬಿ ಕೋಚ್ ನಿರ್ಮಾಣವನ್ನು ಐದು ವರ್ಷಗಳಲ್ಲಿ ಪೂರ್ಣಗೊಳಿಸಲು 10,000 ಕೋಟಿ ರೂಪಾಯಿಗಳನ್ನು ನಿಗದಿಪಡಿಸಬೇಕು ಎಂದು 2012ರಲ್ಲಿ ಶಿಫಾರಸು ಮಾಡಿತ್ತು. ಆದ-ರೆ ಸರಕಾರ ಅದನ್ನು ಮಾಡಿಲ್ಲ. ಪ್ರಸಕ್ತ, 2016-17ರಲ್ಲಿ ಕೇವಲ 1253 ಎಲ್‌ಎಚ್‌ಬಿ ಬೋಗಿಗಳನ್ನು ನಿರ್ಮಿಸಲಾಗುತ್ತದೆ. ಈ ಪ್ರಮಾಣದಲ್ಲಿ ಹೋದರೆ ಐಸಿಎಫ್ ಕೋಚ್‌ಗಳ ಸ್ಥಾನದಲ್ಲಿ ಎಲ್‌ಎಚ್‌ಬಿ ಕೋಚ್‌ಗಳನ್ನು ಸಂಪೂರ್ಣವಾಗಿ ತರಲು 30 ವರ್ಷಗಳೇ ಬೇಕಾಗುತ್ತವೆ.

ರೈಲ್ವೆಯಲ್ಲಿ ಮೂಲಭೂತ ಸುರಕ್ಷತಾ ಅವಶ್ಯಕತೆಗಳ ಆದ್ಯತೆಯನ್ನು ನಿರ್ಲಕ್ಷಿಸುವಲ್ಲಿ ಮೋದಿ ಸರಕಾರ ತಪ್ಪಿತಸ್ಥವಾಗಿರುವುದು ಸ್ಪಷ್ಟವಾಗಿದೆ. ಅತಿವೇಗದ ಬುಲೆಟ್ ಟ್ರೇನ್‌ಗಳನ್ನು ಪಡೆಯುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಆದ್ಯತೆಯನ್ನು ನೀಡಿದ್ದಾರೆ. ಜಪಾನ್ ಸಹಯೋಗದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಅಹಮದಾಬಾದ್- ಮುಂಬಯಿ ಬುಲೆಟ್ ಟ್ರೇನ್‌ಗಳ ಯೋಜನೆಗೆ ತಗಲುವ ವೆಚ್ಚ 98,000 ಕೋಟಿ ರೂಪಾಯಿ ಎಂದು ನಿರೀಕ್ಷಿಸಲಾಗಿದೆ. ಇಷ್ಟೊಂದು ಭಾರೀ ವೆಚ್ಚದ ಯೋಜನೆಗೆ ಹಣ ಒದಗಿಸಲಾಗುತ್ತಿದ್ದು ಐಸಿಎಫ್‌ಗಳ ಬದಲಿಗೆ ಎಲ್‌ಎಚ್‌ಎಫ್ ತಯಾರಿಸುವುದಕ್ಕೆ ಅದೇ ಆದ್ಯತೆ, ಮಹತ್ವ ಸಿಗುತ್ತಿಲ್ಲ.

ಸುರೇಶ ಪ್ರಭು ಅವರ ಆಡಳಿತದಲ್ಲಿ ರೈಲ್ವೆಯು ಒಂದು ದ್ವಂದ್ವ, ಬೇರ್ಪಡಿಸಿದ ಸಾರಿಗೆ ವ್ಯವಸ್ಥೆ ಆಗಿದೆ. ಹೊಸ ವಿನ್ಯಾಸದ ಬೋಗಿಗಳೊಂದಿಗೆ ಹಾಗೂ ಶ್ರೀಮಂತ ವರ್ಗಕ್ಕೆಂದೇ ಇರುವ ದುಬಾರಿ ಪ್ರಯಾಣ ದರದ ಅತಿ ವೇಗದ ರೈಲುಗಳು ಒಂದು ವಿಭಾಗ. ಈ ವಿಭಾಗವನ್ನು ಕ್ರಮೇಣ ಖಾಸಗೀಕರಿಸಲಾಗುತ್ತದೆ. ಹಳೆಯ ಮಾದರಿಯ ಬೋಗಿಗಳೊಂದಿಗೆ, ತೀರಾ ಕಳಪೆ ಮಟ್ಟದ ಸೇವೆ ಹಾಗೂ ನಿರ್ವಹಣೆಯ ಮತ್ತು ಸಾಮಾನ್ಯವಾಗಿ ತಡವಾಗಿ ಸಂಚರಿಸುವ ಪ್ಯಾಸೆಂಜರ್ ರೈಲುಗಳದ್ದು ಇನ್ನೊಂದು ವಿಭಾಗ. ಈಗಿನ ಭದ್ರತಾ ಮಾನದಂಡಗಳನ್ನು ನೋಡಿದ-ರೆ, ಈ ಎರಡೂ ವಿಭಾಗಗಳಲ್ಲಿ ಅಪಘಾತಗಳು ಕಟ್ಟಿಟ್ಟ ಬುತ್ತಿ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಆದ್ದರಿಂದ ಪುಖ್ರಾಯನ್ ರೈಲ್ವೆ ಅಪಘಾತಕ್ಕೆ ತಪ್ಪಿತಸ್ಥರನ್ನು ಗುರುತಿಸಬೇಕೆಂದರೆ, ಸರಕಾರದ ಮತ್ತು ರೈಲ್ವೆ ಮಂಡಳಿಯ ನೇತಾರರತ್ತ ಬೆಟ್ಟು ಹೋಗುತ್ತದೆ. ಕೆಲವು ಗ್ಯಾಂಗ್‌ಮನ್ ಅಥವಾ ನಿರ್ವಹಣಾ ಸಿಬ್ಬಂದಿಯ ವಿರುದ್ಧ ಅಲ್ಲ. ಸುರಕ್ಷತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದಕ್ಕೆ ಯಾರನ್ನಾದರೂ ಹೊಣೆ ಮಾಡಬೇಕೆಂದರೆ ಅದು ರೈಲ್ವೆ ಸಚಿವರನ್ನೇ ಹೊರತು ಬೇರಾರನ್ನೂ ಅಲ್ಲ.

ಇದೀಗ ಪ್ರತ್ಯೇಕ ರೈಲ್ವೆ ಬಜೆಟ್ ವ್ಯವಸ್ಥೆಯನ್ನು ತೆಗೆದುಹಾಕಲಾಗಿದೆ. ರೈಲ್ವೆಗೆ ಕೂಡ ಸಾಮಾನ್ಯ ಬಜೆಟ್‌ನಲ್ಲೇ ಹಣಕಾಸು ನಿಗದಿಪಡಿಸಬೇಕಾಗುತ್ತದೆ. ಮೋದಿ ಸರಕಾರ ಈಗ ಯಾವುದೇ ನೆವ ಹೇಳುವಂತಿಲ್ಲ. ಅದು ತನ್ನ ಆದ್ಯತೆಗಳನ್ನು ಮರುಹೊಂದಾಣಿಕೆ ಮಾಡಬೇಕು- ಭಾರತೀಯ ರೈಲ್ವೆಯು ಜನರ ಪ್ರಯಾಣ-ಕ್ಕೆ ಸುರಕ್ಷಿತವಾಗಿರುವಂತೆ ಖಾತರಿಪಡಿಸುವುದೇ ಆ ಆದ್ಯತೆ. ಈ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಂಡರೂ ಅದು ಕರ್ತವ್ಯಲೋಪವಾಗುತ್ತದೆ.

ಅನು: ವಿಶ್ವ


500/1000 ನೋಟು ನಿಷೇಧದ ನಿರ್ಧಾರ ಮೋದಿ ಹೇಳುವಷ್ಟು ಗುಟ್ಟಾಗಿ ಇರಲಿಲ್ಲ ಎಂಬ ಅನುಮಾನ ಗಟ್ಟಿ ಮಾಡುವ ಹಲವು ಬೆಳವಣಿಗೆಗಳು ಜರುಗುತ್ತಿವೆ. ಮೋದಿ–ಶಾ ಜೋಡಿಗೆ ಆಪ್ತರಾಗಿದ್ದ ಉದ್ಯಮಿಗಳು, ರಾಜಕಾರಣಿಗಳು, ಇತರ ಗಣ್ಯರಿಗೆ ಈ ಸುದ್ದಿ ಮೊದಲೇ ತಿಳಿದಿತ್ತು ಎಂಬ ಅನುಮಾನ ದಟ್ಟವಾಗಿದೆ. ಇದಕ್ಕೆ ಪೂರಕವಾಗಿ ಬಂದಿರುವ ಮಹತ್ವದ ದಾಖಲೆ ಎಂದರೆ, ಗುಜರಾತ್ ರಾಜ್ಯದ ಮಾಜಿ ಬಿಜೆಪಿ ಶಾಸಕ ಹಾಗೂ ಪ್ರಧಾನಿ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಒಂದೊಮ್ಮೆ ಅವರ ಆಪ್ತರಾಗಿದ್ದ ಯತಿನ್ ಓಝಾ ಅವರು ಪ್ರಧಾನಿಗೆ ಬರೆದ ಬಹಿರಂಗ ಪತ್ರ.

ಈ ಪತ್ರ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಿಜೆಪಿ ಅಧ್ಯಕ್ಷ ಅಮಿತ್ ಶಾ ಅವರ ರಾಜಕೀಯ ಗುರುವೆಂದೇ ಯತಿನ್ ಓಝಾ ಹಿಂದೆಲ್ಲಾ ಗುರುತಿಸಲ್ಪಡುತ್ತಿದ್ದರು. ಅವರು ಜುಲೈ 2016 ರಲ್ಲಿ ಆಮ್ ಆದ್ಮಿ ಪಕ್ಷ ಸೇರಿದ್ದರು. ಈ ಪತ್ರದ ಅಸ್ತಿತ್ವದ ಬಗ್ಗೆ ಯತೀನ್ ಓಝಾ ಸ್ವತಃ ಬಹಿರಂಗವಾಗಿ ಏನೂ ಹೇಳಿಲ್ಲ. ಅದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿ ಓಡಾಡುತ್ತಿದ್ದರೂ, ಅದನ್ನು ನಿರಾಕರಿಸಿಯೂ ಇಲ್ಲ. ಧೃಢೀಕರಿಸಿಯೂ ಇಲ್ಲ. ಅದೇ ರೀತಿ ಪತ್ರದಲ್ಲಿ ತೀವ್ರ ಆಪಾದನೆಗೆ ಗುರಿಯಾಗಿರುವ ಮೋದಿ–ಶಾ ಜೋಡಿ ಸಹ ಪತ್ರದ ಆಪಾದನೆಗಳನ್ನು ನಿರಾಕರಿಸಿಲ್ಲ. ಆಪಾದನೆಗಳು ಸುಳ್ಳು ಎಂದು ಸವಾಲು ಹಾಕುವ ಗೋಜಿಗೆ ಹೋಗಿಲ್ಲ. ಮಾನನಷ್ಟ ಮೊಕದ್ದಮೆ ಹಾಕಿಲ್ಲ.

ಯತಿನ್ ಓಝಾ ಅವರು ಪ್ರಧಾನಿ ನರೇಂದ್ರ ಮೋದಿಗೆ ಬರೆದ ಬಹಿರಂಗ ಪತ್ರದ ಕನ್ನಡಾನುವಾದ ಇಲ್ಲಿದೆ ಓದಿ ;

ಮೋದಿಗೆ ಮಾಜಿ ಗುರು ಯತೀನ್ ಓಝಾ ಬಹಿರಂಗ ಪತ್ರ

‘ನೋಟು ರದ್ದತಿ ದೇಶದ ಹಿತಾಸಕ್ತಿಗೋ, ಆಪ್ತರ ಉದ್ಧಾರಕ್ಕೋ?’



ಪ್ರೀತಿಯ ನರೇಂದ್ರ ಭಾಯಿ,

ಈ ಪತ್ರ ನಿಮ್ಮನ್ನು ತಲುಪಿದಾಗ ನೀವು ಆರೋಗ್ಯವಂತರಾಗಿಯೂ ಸಂತಸದಿಂದಲೂ ಇರುತ್ತೀರೆಂದು ನಂಬುತ್ತೇನೆ.

ನವೆಂಬರ್ 8, 2016 ರಂದು ನೋಟು ರದ್ದತಿ ಬಗ್ಗೆ ನಿಮ್ಮ ಭಾಷಣ ಆಲಿಸಿದ ನಂತರ ನನಗೆ ತುಂಬಾ ಸಂತೋಷವಾಗಿತ್ತು ಹಾಗೂ ಒಳಗಿಂದೊಳಗೇ ನಿಮ್ಮ ಈ ನಿರ್ಭೀತ ಹಾಗೂ ಐತಿಹಾಸಿಕ ಕ್ರಮಕ್ಕಾಗಿ ನಿಮಗೆ ಅಭಿನಂದನೆ ಸಲ್ಲಿಸಿದೆ. ಆದರೆ ದುರುದೃಷ್ಟವೋ ಎಂಬಂತೆ ಆ ಸಂತಸ ಬಹಳ ಕಾಲ ಬಾಳಲಿಲ್ಲ. ನವೆಂಬರ್ 9 ರ ಬೆಳಿಗ್ಗೆ ತುಂಬಾ ಹತ್ತಿರದವರೊಬ್ಬರು ನನಗೆ ನೀಡಿದ ಮಾಹಿತಿಯಂತೆ, ನಿನ್ನೆ, ಅಂದರೆ ನವೆಂಬರ್ 8 ರ ಅಹರಾಹ್ನ 12 ಗಂಟೆಯ ಹೊತ್ತಿಗೆ ಅಹ್ಮದಾಬಾದಿನ ಪ್ರಮುಖ ಕೈಗಾರಿಕೋದ್ಯಮಿಯೊಬ್ಬರ ಪತ್ನಿ ಖ್ಯಾತ ಚಿನ್ನಾಭರಣದ ಅಂಗಡಿಯೊಂದಕ್ಕೆ ಆಗಮಿಸಿ ಮುಂಚಿತವಾಗಿ ಆರ್ಡರ್ ನೀಡಿದಾನುಸಾರ 20 ಕೋಟಿ ರೂ. ಮೌಲ್ಯದ ಚಿನ್ನಾಭರಣ ಖರೀದಿಸಿದ್ದರು. ಚಿನ್ನಾಭರಣ ತಯಾರಾಗಿತ್ತು ಹಾಗೂ ಅದನ್ನು ಪ್ಯಾಕ್ ಕೂಡ ಮಾಡಲಾಗಿತ್ತು. ಚಿನ್ನ ಹಾಗೂ ಹಣವನ್ನು ಅದಲು ಬದಲು ಮಾಡಲು ಕೇವಲ ಎರಡು ನಿಮಿಷ ತೆಗೆದುಕೊಂಡಿತು. ನನಗೆ ಹತ್ತಿರದವರೊಬ್ಬರು ಆ ಸಂದರ್ಭ ಆ ಅಂಗಡಿಯಲ್ಲಿದ್ದು ಆಕೆ ಮೊದಲೇ ಆರ್ಡರ್ ಕೊಡಲಾಗಿದ್ದ 5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಖರೀದಿಸಲು ಆಗಮಿಸಿದ್ದರು. ಆಕೆ ಒಬ್ಬರು ಪ್ರಮುಖ ಹಾಗೂ ಗೌರವಾನ್ವಿತ ವೈದ್ಯೆಯಾಗಿದ್ದಾರೆ.

ನಿಮ್ಮೊಂದಿಗೆ ನಿಕಟವಾಗಿ ಕೆಲಸ ಮಾಡಿದ ಅನುಭವಿರುವ ನನಗೆ ಆಗ ನೋಟು ರದ್ದತಿಯ ವಿಚಾರ ಅದನ್ನು ಘೋಷಣೆ ಮಾಡುವ ಮುನ್ನವೇ ಈ ದೇಶದಲ್ಲಿರುವ ಶೇ.50 ರಷ್ಟು ಕಪ್ಪು ಹಣವನ್ನು ನಿಯಂತ್ರಿಸುವ ನಿಮ್ಮ ಆತ್ಮೀಯ ಕೈಗಾರಿಕೋದ್ಯಮಿಗಳಿಗೆ ಮಾಹಿತಿ ನೀಡಲಾಗಿತ್ತು ಎಂದು ತಿಳಿದು ಬಂದಿತ್ತು. ಈ ಬಗ್ಗೆ ಇಡೀ ದಿನ ಯೋಚಿಸಿ ಈ ಬಗ್ಗೆ ಮಾಹಿತಿ ಕಲೆ ಹಾಕಿದಾಗ ಆಶ್ಚರ್ಯವಾಗಿತ್ತು. ನೀವು ಇಂತಹ ಜನಪ್ರಿಯತೆ ಗಿಟ್ಟಿಸುವ ಕ್ರಮಕ್ಕೆ ಕೈಹಾಕಿ ದೇಶದ ಜನರನ್ನು ಮೂರ್ಖರನ್ನಾಗಿಸಿದ್ದೀರಿ.

ಗುಜರಾತ್ ರಾಜ್ಯದ ಎಲ್ಲಾ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಬಿಜೆಪಿಯ ಜನರ ನಿಯಂತ್ರಣದಲ್ಲಿರುವುದರಿಂದ ಈ ಬ್ಯಾಂಕ್‌ಗಳು 8–11–2016 ರ ರಾತ್ರು 9 ಗಂಟೆಯಿಂದ 9–11–2016 ರಂದು ಬೆಳಿಗ್ಗೆ 5 ಗಂಟೆಯ ತನಕ 500 ಹಾಗೂ 1000 ರೂ. ಮುಖಬೆಲೆಯ ನೋಟುಗಳನ್ನು ಸಣ್ಣ ಮೌಲ್ಯದ ಸಮಾನ ಮೌಲ್ಯದ ನೋಟುಗಳಿಗೆ ವಿನಿಮಯ ಮಾಡಿವೆ.

ವಾಸ್ತವವಾಗಿ ನಿಮ್ಮ ಮೇಲಿನ ಕ್ರಮ ನಿಮ್ಮ ಹತ್ತಿರದವರನ್ನು ಹಾಗೂ ಪ್ರೀತಿಪಾತ್ರರನ್ನು, ನಿಮ್ಮ ಪಕ್ಷವನ್ನು ಹಾಗೂ ನಿಮ್ಮ ಪಕ್ಷದ ಸದಸ್ಯರನ್ನು ದೇಶದ ಹಿತಾಸಕ್ತಿಯನ್ನು ಬಲಿಗೊಟ್ಟು ಉದ್ಧಾರ ಮಾಡುವುದಾಗಿದೆ. ಶ್ರೀ ಅಮಿತ್ ಶಾ ಅವರ ಎಲ್ಲಾ ಆಪ್ತರು ನವೆಂಬರ್ 8 ರಿಂದ ಇಲ್ಲಿಯ ತನಕ ಹಣ ವಿನಿಮಯ ದಂಧೆಯಲ್ಲಿ ತೊಡಗಿದ್ದಾರೆಂಬುದನ್ನು ಸ್ಪಷ್ಟವಾಗಿ ತಿಳಿಸುವ ವೀಡಿಯೋ ರೆಕಾರ್ಡಿಂಗ್ ನನ್ನ ಬಳಿ ಇದೆ. ಅವರೆಲ್ಲರ ಕಛೇರಿ ಹಾಗೂ ನಿವಾಸಗಳ ಹೊರಗೆ ದೊಡ್ಡ ಸರತಿ ಸಾಲಿದ್ದು ಅಲ್ಲಿ ಕಪ್ಪು ಹಣವನ್ನು ಶೇ. 37 ರಷ್ಟು ವಿನಾಯಿತಿ ದರದಲ್ಲಿ ಬಿಳಿಯಾಗಿಸಲಾಗುತ್ತದೆ. ಅಲ್ಲಿಗೆ ಒಬ್ಬರು ಯಾವುದೇ ಗುರುತು ಪತ್ರ ಇಲ್ಲದೆ ಕನಿಷ್ಟ ಒಂದು ಕೋಟಿ ರೂಪಾಯಿ ಹಿಡಿದುಕೊಂಡು ಹೋದರೆ ಅಲ್ಲಿ ಅದನ್ನು ಉದ್ಯೋಗಿಗಳು ಎಣಿಸಿ ನಂತರ ರೂ. 63 ಲಕ್ಷ ರೂ. ಮೌಲ್ಯದ ನೋಟುಗಳಿರುವ ಚೀಲಗಳನ್ನು ಅವರಿಗೆ ನೀಡಲಾಗುತ್ತಿದೆ. ಆ ವಿಡಿಯೋವನ್ನು ನಾನು ಸುಲಭವಾಗಿ ಬಹಿರಂಗಪಡಿಸಬಹುದಾಗಿತ್ತು. ಆದರೆ ನನಗೆ ನಿಮ್ಮ ಬಗ್ಗೆ ಗೊತ್ತಿದೆ. ನೀವು ಆ ಸರತಿಯಲ್ಲಿ ನಿಂತಿದ್ದವರನ್ನು ಶಿಕ್ಷಿಸಬಹುದೇ ವಿನಃ ಅಮಿತ್ ಶಾ ಅವರಿಗೆ ಹತ್ತಿರದವರಾಗಿರುವ ಹಾಗೂ ಈ ಹಣ ವಿನಿಮಯ ದಂಧೆಯಲ್ಲಿ ತೊಡಗಿರುವವರನ್ನು ನೀವು ಶಿಕ್ಷಿಸಲಿಕ್ಕಿಲ್ಲ. ಆದರೆ ಆ ವೀಡಿಯೊವನ್ನು ನಾನು ಇಬ್ಬರು ಮೂವರು ಹಿರಿಯ ಪತ್ರಕರ್ತರಿಗೆ ತೋರಿಸುತ್ತೇನೆ ಹಾಗೂ ನಂತರ ನಿಮಗೆ ಮಾಹಿತಿ ನೀಡುತ್ತೇನೆ. ನೀವು ಪತ್ರಕರ್ತರಿಂದ ನನ್ನ ಹೇಳಿಕೆಯಲ್ಲಿನ

ಪುಟ 10 ಕ್ಕೆ

‘ಭ್ರಷ್ಟಾಚಾರದ ವಿರುದ್ಧ ಯುದ್ಧ’ ಎಂದು ಬಿಂಬಿಸಲು ತಂತ್ರಜ್ಞಾನ ಗಿಮಿಕ್‌ಗಳು



ನಿಜವಾಗಿಯೂ ‘ಜನತೆಯ ವಿರುದ್ಧ ಯುದ್ಧ’ವಾಗಿ ಪರಿಣಮಿಸಿರುವ 500/1000 ನೋಟು ನಿಷೇಧವನ್ನು, ‘ಭ್ರಷ್ಟಾಚಾರದ ವಿರುದ್ಧ ಯುದ್ಧ’ ಎಂದು ಬಿಂಬಿಸಲು ಮೋದಿ ಗ್ಯಾಂಗು ಎಂದಿನಂತೆ ತಂತ್ರಜ್ಞಾನ ಗಿಮಿಕ್‌ಗಳ, ಅವುಗಳ ಬಗೆಗ ಹಸಿಸುಳ್ಳುಗಳ ವದಂತಿಗಳ ಮೊರೆ ಹೋಯಿತು. ಅವುಗಳಲ್ಲಿ ಮುಖ್ಯವಾದದ್ದು ಎರಡು. ಒಂದು ಖೋಟಾ ಮಾಡಲು ಸಾಧ್ಯವಾಗದ ‘ಭಯಂಕರ ತಂತ್ರಜ್ಞಾನ’ ಹೊಸ ಎರಡು ಸಾವಿರ ನೋಟಿನಲ್ಲಿ ಇದೆ ಎಂಬುದು. ಎರಡನೆಯದು ಹೊಸ ಎರಡು ಸಾವಿರ ನೋಟು ಖೋಟಾ ಹೌದೋ ಅಲ್ಲ ಅಂತ ಒಂದು **App**(ಆಪ್) ಹಾಕಿಕೊಂಡು ಸ್ಮಾರ್ಟ್ ಫೋನ್ ಕ್ಯಾಮೆರಾದ ಎದುರು ಬಿಟ್ಟರೆ ಗೊತ್ತಾಗಿ ಬಿಡುತ್ತದೆ ಅಂತ. ಮೊದಲನೆಯ ಗಿಮಿಕ್ ನೋಟು ರದ್ದತಿ ಆದ ದಿನವೇ ಆರಂಭವಾಯಿತು. ಎರಡನೆಯದು ಇದು ‘ಜನತೆಯ ವಿರುದ್ಧ ಯುದ್ಧ’ ಎಂದು ಬಹಳ ಜನಕ್ಕೆ ಅರ್ಥವಾಗಲು ಆರಂಭವಾದಾಗ ಹರಿಯ ಬಿಡಲಾಯಿತು.

ಮೊದಲನೆಯ ಗಿಮಿಕನ್ನು ಗೌರಿ ಲಂಕೇಶ್ ವರ್ಣಿಸಿದ್ದು ಹೀಗೆ “ಹೊಸದಾಗಿ ಬಿಡುಗಡೆ ಮಾಡುವ ಎರಡು ಸಾವಿರ ರೂಪಾಯಿ ನೋಟುಗಳಲ್ಲಿ ನ್ಯಾನೋ ಚಿಪ್ ಇರುತ್ತದೆ. ಈ ಚಿಪ್ ಮೂಲಕ ಯಾರು ಎಲ್ಲಿ ಎಷ್ಟು ಹಣ ವೆಚ್ಚ ಮಾಡಿದರು ಎಂದು ಟ್ರ್ಯಾಕ್ ಮಾಡಲಾಗುವುದು. ಅಷ್ಟೇ ಅಲ್ಲ, ಇನ್ನು ಮುಂದೆ ಯಾರಾದರೂ ಅಕ್ರಮವಾಗಿ ಈ ಎರಡು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿಟ್ಟರೆ ಅದನ್ನು ಸ್ಯಾಟಲೈಟ್ ಮೂಲಕ ಪತ್ತೆಹಚ್ಚಿ. ಆದಾಯ ತೆರಿಗೆ ಇಲಾಖೆಯವರು ದಾಳಿ ಮಾಡುತ್ತಾರೆ. ಹಣವನ್ನು ಭೂಮಿಯನ್ನು 120 ಮೀಟರ್ ಅಡಿ ಹೂತಿಟ್ಟರೂ ನ್ಯಾನೋ ಚಿಪ್‌ನಿಂದಾಗಿ ಅದನ್ನು ಪತ್ತೆ ಹಚ್ಚಬಹುದು” ಎಂಬ ಅತಿರಂಜನೆಯ ಸುದ್ಧಿ. ಹಿಂದಿಯ ಜೀಟಿವಿ ಮತ್ತು ಕನ್ನಡದ ಒಂದು ಸುದ್ಧಿ ಚಾನಲ್ ಈ ಕಪೋಲಕಲ್ಪಿತ ಸುದ್ದಿಯನ್ನು ಎಷ್ಟು ಉತ್ಸಾಹದಿಂದ ಪ್ರಚಾರ ಮಾಡಿದವೆಂದರೆ, ಸುದ್ಧಿ ನಿರೂಪಕ ಸಂತೋಷದಿಂದ ಪೇಜಾವರ ಶ್ರೀಗಳಂತೆ ತನ್ನ ಕುರ್ಚಿಯಲ್ಲೇ ಪುಟಿದೇಳುತ್ತಿದ್ದ! ಅವನ ಜೊತೆ ಪ್ರತಿನಿತ್ಯ ತಾಳ ಹಾಕುವ ಸುದ್ದಿ ನಿರೂಪಕಿಯಂತೂ “ಎರಡು ಸಾವಿರ ರೂಪಾಯಿ ನೋಟ್‌ನಲ್ಲಿ ನ್ಯಾನೋ ಚಿಪ್ ಇರುವುದರಿಂದಲೇ ಅದರ ಮೇಲೆ ಮಂಗಳಯಾನದ ಚಿತ್ರವನ್ನು ಮುದ್ರಿಸಲಾಗಿದೆ” ಎಂದು ಘೋಷಿಸಿದಳು!!”.


ಸಾಮಾಜಿಕ ಮಾಧ್ಯಮಗಳಲ್ಲಿ ಇದು ಬೇಗ ಹರಡಿ ಎಲ್ಲರೂ ಅದರ ಬಗ್ಗೆ ಮಾತನಾಡುವವರೇ. ಬಯೊಕಾನ್ ಒಡತಿ ಕಿರಣ್ ಶಾ ಸಹ ಅದರ ಬಗ್ಗೆ ಹೊಗಳಿದ್ದೇ ಹೊಗಳಿದ್ದು! ಮಾರನೇಯ ದಿನ ರಿಸರ್ವ ಬ್ಯಾಂಕ್ ಡೆಪ್ಯುಟಿ ಗವರ್ನರ್ ಅಧಿಕೃತವಾಗಿ ಅದನ್ನು ನಿರಾಕರಿಸುವರೆಗೆ ಅದು ಜೋರಾಗಿ ಹರಡಿತು. ಅವರು ಇಂತಹ ತಂತ್ರಜ್ಞಾನ ಇಲ್ಲ ಮಾತ್ರವಲ್ಲ, ನೋಟಿನ ವಿನ್ಯಾಸದಲ್ಲಿ (ಚಿಪ್ ಇಲ್ಲದೆ ಪ್ರಿಂಟಿನಲ್ಲೇ ಸಾಧ್ಯವಾಗುವಂತಹ) ಯಾವುದೇ ಹೊಸ ಭದ್ರತಾ ಕ್ರಮಗಳು ಇಲ್ಲ ಎಂದು ದೃಢೀಕರಿಸಿದರು. ಅದಕ್ಕೆ ಬೇಕಾದಷ್ಟು ಸಮಯ ಇರಲಿಲ್ಲ ಎಂದೂ ಹೇಳಿದರು. ಆದರೆ ಈಗಲೂ ಅದನ್ನು ನಂಬುವವರು ಪ್ರಸಾರ ಮಾಡುವವರು (ಮಾಧ್ಯಮಗಳು ಸೇರಿದಂತೆ) ಸಿಗುತ್ತಾರೆ. ಆರ್.ಎಸ್.ಎಸ್.(ರಾಷ್ಟ್ರದ ತುಂಬಾ ಸುಳ್ಳು ಹರಡುವ) ಪ್ರಚಾರ ಯಂತ್ರ ಅಷ್ಟು ಗಟ್ಟಿಯಾಗಿದೆ. ಈಗ ‘ಮುಖ್ಯವಾಹಿನಿಯ ಮಾಧ್ಯಮ’ಗಳೂ ಅವರ ಈ ‘ರಾಷ್ಟ್ರೀಯ ಸೇವೆ’ಯಲ್ಲಿ ಕೈಜೋಡಿಸುತ್ತಿವೆ. ತಂತ್ರಜ್ಞಾನ ಮತ್ತು ತಾರ್ಕಿಕ ಚಿಂತನೆಯ ಪ್ರಾಥಮಿಕ ‘ಸಾಕ್ಷರತೆ’ ನಮ್ಮ ಜನತೆಯಲ್ಲಿ ಅಷ್ಟು ದುರ್ಬಲವಾಗಿದೆ ಕೂಡಾ.

ಎರಡನೆಯದು ಅರ್ಧ ಸುಳ್ಳು ಅಥವಾ ಅರ್ಧ ಸತ್ಯ. ‘ಮೋದಿ ಕೀ ನೋಟ್’ ಎಂಬ ಹೊಸ App(ಆಪ್) ಹಾಕಿಕೊಂಡು ಸ್ಮಾರ್ಟ್ ಫೋನ್ ಕ್ಯಾಮೆರಾದ ಎದುರು ಎರಡು ಸಾವಿರ ನೋಟು ಇಟ್ಟರೆ ಮೋದಿ, ‘ಭ್ರಷ್ಟಾಚಾರದ ವಿರುದ್ಧ ಯುದ್ಧ’ ಭಾಷಣದ ವಿಡಿಯೋ ಬರುತ್ತದೆ. ಅದು ಖೋಟಾ ನೋಟು ಆಗಿದ್ದರೆ ಬರುವುದಿಲ್ಲ. ಇದರಲ್ಲಿ ಮೊದಲ ಭಾಗ ನಿಜ. ಎರಡನೇ ಭಾಗ ಸುಳ್ಳು ಆಗಿತ್ತು. ಎರಡು ಸಾವಿರ ನೋಟಿನ ಕ್ಸೆರಾಕ್ಸ್ ತೆಗೆದು ಕ್ಯಾಮೆರಾ ಹಿಡಿದರೂ ಮೋದಿ ಫೋನಿನಲ್ಲಿ ಪ್ರತ್ಯಕ್ಷರಾಗುತ್ತಿದ್ದರು. ಅದೂ ಸರಿಯೇ! ಮೋದಿ ಎಲ್ಲರ ನಾಯಕ ತಾನೆ? ಸಾಚಾ ನೋಟಿನವರು ಇರಲಿ ಖೋಟಾ ನೋಟಿನವರು ಇರಲಿ, ಎಲ್ಲರಿಗೂ ಅವರು ಪ್ರಧಾನಿ ತಾನೆ? ಇದು ಸಾಲದೆಂಬಂತೆ ಕೇರಳದಲ್ಲಿ ಇಂತಹುದೇ ಒಂದು App(ಆಪ್) ಬಿಡುಗಡೆ ಆಗಿ ನೂರು ರೂಪಾಯಿ ನೋಟು ಹಿಡಿದರೆ ಪಿಣರಾಯಿ ವಿಜಯನ್ ಪ್ರತ್ಯಕ್ಷರಾಗಿ ಮೋದಿಯ ಕ್ರಮ ‘ಭ್ರಷ್ಟಾಚಾರದ ವಿರುದ್ಧ ಯುದ್ಧ’ ಅಲ್ಲ. ‘ಜನತೆಯ ವಿರುದ್ಧ ಯುದ್ಧ’ ಎಂದು ವಿವರಿಸುತ್ತಿದ್ದರು. ಆದರೂ ಇದು ಮೋದಿ ಮ್ಯಾಜಿಕ್ ಎಂದು ಇನ್ನೂ ನಂಬುವವರು ಇದ್ದಾರೆ. ಸುಳ್ಳು ಹರಡುವಷ್ಟು ವೇಗವಾಗಿ ಸತ್ಯ ಹರಡುವುದಿಲ್ಲವಲ್ಲ! ಈ ತಂತ್ರಜ್ಞಾನ ಭಾರಿ ಹೊಸದೇನೂ ಅಲ್ಲ. ಈಗಾಗಲೇ ದಿನಪತ್ರಿಕೆಗಳು ಅದನ್ನು ಬಳಸುತ್ತವೆ. ಆಯಾ ದಿನಪತ್ರಿಕೆಗಳ ಆಪ್ ಇದ್ದರೆ ಅಥವಾ ನೆಟ್ ಇದ್ದರೆ ಪತ್ರಿಕೆಯಲ್ಲಿ ಬಂದ ಸುದ್ದಿ, ಲೇಖನದಲ್ಲಿ ಇರುವ ಒಂದು ಡಿಸೈನ್ ಪ್ಯಾಟರ್ನ್ (ಬಾರ್ ಕೋಡಿನಂತೆ ಕಾಣುವ) ಮುಂದೆ ಸ್ಮಾರ್ಟ್ ಫೋನ್ ಕ್ಯಾಮೆರಾ ಹಿಡಿದರೆ ಸಂಬಂಧ ಪಟ್ಟ ಅಡಿಯೋ/ವಿಡಿಯೋ ಫೊನಿನಲ್ಲಿ ತೆರೆದುಕೊಳ್ಳುತ್ತದೆ. ❑

ನೋಟು ರದ್ದತಿ–ಮಾಜಿ ರಿಝರ್ವ್ ಬ್ಯಾಂಕ್ ಮುಖ್ಯಸ್ಥರುಗಳು ಕಂಡಂತೆ

“ಕರೆನ್ಸಿ ನೋಟು ಕಪ್ಪಾಗಿರುವುದಿಲ್ಲ, ಅದನ್ನು ಕಪ್ಪಾಗಿಸುವ ಪ್ರಕ್ರಿಯೆಯನ್ನು ತಡೆಯುತ್ತಿಲ್ಲ”

ನಿವೃತ್ತ ರಿಝರ್ವ್ ಬ್ಯಾಂಕ್ ಉಪ ಗವರ್ನರ್ ಕೆ.ಸಿ. ಚಕ್ರಬರ್ತಿ ನೋಟು ನಿಷೇಧದ ಕ್ರಮವನ್ನು ಬಲವಾಗಿ ವಿರೋಧಿಸುವವರಲ್ಲಿ ಪ್ರಮುಖರು. ಅವರು ಇದು ಮುಂದಿನ ಆರು ತಿಂಗಳ ಕಾಲ ಸಂಪೂರ್ಣ ಅವ್ಯವಸ್ಥೆಯುಂಟು ಮಾಡುತ್ತದೆ ಎಂದಿದ್ದಾರೆ. ಇಂತಹ ಕ್ರಮದ ಅಗತ್ಯವಿರಲಿಲ್ಲ. ಈ ಹಿಂದೆ 2009ರಲ್ಲಿ ಯುಪಿಎ ಸರಕಾರ ಇಂತಹ ಯೋಚನೆಯನ್ನು ಮುಂದಿಟ್ಟಾಗ ರಿಝರ್ವ್ ಬ್ಯಾಂಕ್ ಬೇಡವೆಂದಿತ್ತು ಎಂದು ಅವರು ತಿಳಿಸಿದ್ದಾರೆ.



ಚಲಾವಣೆಯಲ್ಲಿ 17ಲಕ್ಷ ಕೋಟಿ ರೂ.ಗಳ ಕರೆನ್ಸಿ ಇದೆ. ಇದು ಕಪ್ಪು ಹಣವಲ್ಲ. ಅದು ತೆರಿಗೆ ತೆರದವರ ಕೈಗೆ ಹೋದಾಗ ಮಾತ್ರ ಕಪ್ಪಾಗುತ್ತದೆ, ತೆರಿಗೆ ತೆರುವಾತನ ಕೈಗೆ ಹೋದಾಗ ಬಿಳಿಯಾಗುತ್ತದೆ ಎನ್ನುತ್ತಾರೆ ಅವರು.

ನಾವು ನೋಟುಗಳನ್ನು ಕೊಲ್ಲುತ್ತಿದ್ದೇವೆ, ತೆರಿಗೆ ತೆರದವರನ್ನು ಹಿಡಿಯುತ್ತಿಲ್ಲ. ಅದಕ್ಕೆ ಆದಾಯ ತೆರಿಗೆ ಇಲಾಖೆ ಇದೆ, ಆದರೆ ಅವರು ತಮ್ಮ ಕರ್ತವ್ಯ ಮಾಡುತ್ತಿಲ್ಲ. ಯಾರಾರ ಬಳಿ ಕಪ್ಪುಹಣ ಇದೆ ಎಂದು ಅವರಿಗೆ ತಿಳಿದಿಲ್ಲ ಎನ್ನುತ್ತೀರಾ ಎಂದು ಮಾರ್ಮಿಕವಾಗಿ ಕೇಳುತ್ತಾರೆ ಚಕ್ರವರ್ತಿಯವರು.

ಹೌದು, ಬಡವರು ನಗದು ಸಂಗ್ರಹಿಸಿಡುತ್ತಾರೆ, ಆದರೆ ತೆರಿಗೆ ತೆರದ ಶ್ರೀಮಂತರೇನೂ ತಮ್ಮ ಕಪ್ಪು ಹಣವನ್ನು ದಿಂಬಿನ ಅಡಿಯಲ್ಲಿ ಬಚ್ಚಿಟ್ಟಿರುವುದಿಲ್ಲ. ಅವರು ಬಹಳ ವೇಗವಾಗಿ ಅದು ಚಲಿಸುತ್ತಿರುವಂತೆ ಮಾಡುತ್ತಾರೆ, ಏಕೆಂದರೆ ಅದಕ್ಕೆ ಬೇಕಾದ ಸೋರಿಕೆಯ ತೂತುಗಳಿವೆ ಎನ್ನುವ ನಿವೃತ್ತ ಆರ್‌ಬಿಐ ಉಪಗವರ್ನರ್ ಈ ಕ್ರಮ ಹಣ ಕಪ್ಪಾಗುವ ಪ್ರಕ್ರಿಯೆಯನ್ನು ಎದುರಿಸುವುದಿಲ್ಲ. ನಾವು ತೆರಿಗೆ ತೆರದವರನ್ನು ಗುರುತಿಸುತ್ತಿಲ್ಲ ಎಂದು ಟೀಕಿಸುತ್ತಾರೆ.

ನೋಟುಗಳ ನಿಷೇಧದಿಂದ ಖರ್ಚುಗಳನ್ನು ಹೆಚ್ಚಿಸಲಾಗುತ್ತಿದೆ ಮತ್ತು ಜತೆಗೆ ಜನಸಾಮಾನ್ಯರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಅವರು ಬಲವಾಗಿ ಟೀಕಿಸುತ್ತಾರೆ.

ಅತ್ತ ‘ಕಾರ್ಯಶೀಲವಲ್ಲದ ಆಸ್ತಿ’ ಅರ್ಥಾತ್ ಎನ್‌ಪಿಎ ಅಂದರೆ ಬ್ಯಾಂಕ್ ಸುಸ್ತಿ ಸಾಲಗಳ ಸ್ಥಿತಿಯಂತೂ ಬಹಳ ಕೆಟ್ಟದಾಗಿದೆ ಎನ್ನುತ್ತಾರೆ ಅವರು. ಅವನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಬೇಕಾಗಿದೆ. ಯಾವ ಉದ್ಯಮಿಯೂ ತನ್ನ ಸ್ವಂತ ಹಣದಿಂದ ವ್ಯವಹಾರ ನಡೆಸುವುದಿಲ್ಲ. **ಕಾರ್ಪೊರೇಟ್‌ಗಳ ಸಾಲಬಾಕಿಗಳ ಕಾಯಿಲೆಗೆ ಒಂದು ಶಸ್ತ್ರಚಿಕಿತ್ಸೆಯೇ ಬೇಕು, ಆದರೆ ನಾವು ಸಣ್ಣ ಡೋಸುಗಳಲ್ಲಿ ಟಾನಿಕ್ ಕುಡಿಸುತ್ತಿದ್ದೇವಷ್ಟೇ ಎನ್ನುವ ಚಕ್ರವರ್ತಿ ಈ ಬ್ಯಾಂಕ್ ರೈಟ್–ಆಫ್ ಎನ್ನುವುದು ಈ ಶತಮಾನದ ಒಂದು ದೊಡ್ಡ ಹಗರಣ** ಎಂದೇ ವರ್ಣಿಸುತ್ತಾರೆ.

ರೈಟ್–ಆಫ್ ಅಂದರೆ ಸಾಲ ಮನ್ನಾ ಅಲ್ಲ, ಅದನ್ನು ‘ತಾಂತ್ರಿಕ’ವಾಗಿ ಬ್ಯಾಂಕಿನ ಲೆಕ್ಕಾಚಾರದಿಂದ ತೆಗೆಯಲಾಗುತ್ತದೆಯಷ್ಟೇ ಎಂಬ ಹಣಕಾಸು ಮಂತ್ರಿಗಳ ‘ಸ್ಪಷ್ಟೀಕರಣ’ಕ್ಕೆ ಅವರ ಪ್ರಶ್ನೆ, ಆ ಸಾಲವನ್ನು ವಸೂಲಿ ಮಾಡಬಹುದು ಎಂದಿದ್ದರೆ, ಅವನ್ನು ಬ್ಯಾಂಕುಗಳು ರೈಟ್–ಆಫ್ ಮಾಡುವುದಾದರೂ ಏಕೆ ಎಂದು ಪ್ರಶ್ನಿಸುತ್ತಾರೆ. ಎಲ್ಲ ಬ್ಯಾಂಕುಗಳೂ ತಾವು ಯಾರ‍್ಯಾರ ಸಾಲಗಳನ್ನು ರೈಟ್–ಆಫ್ ಮಾಡಿದ್ದೇವೆ ಎಂಬುದನ್ನು ಸಾರ್ವಜನಿಕಗೊಳಿಸಬೇಕು, ಈ ‘ತಾಂತ್ರಿಕ’ ರೈಟ್–ಆಫ್‌ಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದಿದ್ದಾರೆ ದೇಶದ ಆರ್ಥಿಕವನ್ನು ನಿಯಂತ್ರಣ ಮಾಡುವ ರಿಝರ್ವ್ ಬ್ಯಾಂಕಿನ ನಿವೃತ್ತ ಉಪಗವರ್ನರ್.

‘ಚತುರರು ಕಾನೂನಿನ ಸುತ್ತ ದಾರಿಗಳನ್ನು ಹುಡುಕಿಕೊಳ್ಳುತ್ತಾರೆ’

ಎರಡು ತಿಂಗಳ ಹಿಂದೆಯ ವರೆಗೂ ರಿಝರ್ವ್ ಬ್ಯಾಂಕಿನ ಗವರ್ನರ್ ಆಗಿದ್ದ ರಘುರಾಮ ರಾಜನ್ ಈ ನೋಟು ನಿಷೇಧದ ಕ್ರಮದ ಪರವಾಗಿರಲಿಲ್ಲ ಎಂದು ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೂ ಅವರು ಇನ್ನೂ ಅಧಿಕಾರದಲ್ಲಿ ಇರುವಾಗಲೇ ಕೆಲವು ಹಿರಿಯ ಅಧಿಕಾರಶಾಹಿಗಳ ಬೆಂಬಲದಿಂದ ಸರಕಾರ ಈ ಕೆಲಸಕ್ಕೆ ಮುಂದಾಯಿತು ಎನ್ನಲಾಗುತ್ತಿದೆ. ಅವರು ತಾನು ಇನ್ನೊಂದು ಅವಧಿಗೆ ಗವರ್ನರ್ ಆಗಿ ಮುಂದುವರೆಯುವುದಿಲ್ಲ ಎನ್ನಲು ಇದೂ ಒಂದು ಕಾರಣವಾಗಿರಬಹುದು ಎಂದು ಹೇಳಲಾಗುತ್ತಿದೆ.

2014ರಲ್ಲಿ ಅನಾಣ್ಯೀಕರಣ ಕುರಿತ್ತು ಮಾತಾಡುತ್ತ ಅವರು ಇದನ್ನು ಕಪ್ಪು ಹಣ ನಿರ್ಮೂಲ ಮಾಡುವ ಪ್ರಯತ್ನ ಎಂದು ಬಗೆಯಲಾಗುತ್ತಿದೆ, ಆದರೆ ‘ಚತುರರು ಅದರ ಸುತ್ತ ದಾರಿಗಳನ್ನು ಹುಡುಕಿಕೊಳ್ಳುತ್ತಾರೆ’ ಎಂದಿದ್ದರು. ಅವರ ಪ್ರಕಾರ ಇವುಗಳಲ್ಲಿ ಒಂದು ದಾರಿಯೆಂದರೆ ಅವರು ತಮ್ಮ ಹಣವನ್ನು ಸಣ್ಣ–ಸಣ್ಣ ಕಂತೆಗಳಾಗಿ ವಿಭಜಿಸಿ ಅವುಗಳ ವಿನಿಮಯ ಸುಲಭವಾಗುವಂತೆ ಮಾಡುತ್ತಾರೆ, ಇನ್ನೊಂದು ದಾರಿಯೆಂದರೆ ಅವನ್ನು ಚಿನ್ನವಾಗಿ ಪರಿವರ್ತಿಸುವುದು, ಅದನ್ನು ಪತ್ತೆ ಹಚ್ಚುವುದು ಇನ್ನೂ ಕಷ್ಟ. ಕಪ್ಪು ಹಣವನ್ನು ಬಿಳಿ ಮಾಡುವ ಬಗ್ಗೆ ಯೋಚಿಸದವರು ಅದನ್ನು ಯಾವುದೋ ದೇವಸ್ಥಾನದ ಹುಂಡಿಗೆ ಹಾಕುತ್ತಾರೆ ಎನ್ನುವ ಅವರು “ಕಪ್ಪು ಹಣವನ್ನು ಹೊರ ತೆಗೆಯುವುದು ಸುಲಭವೇನಲ್ಲ. ನಾನಂತೂ ಕಪ್ಪು ಹಣವನ್ನು ಉತ್ಪತ್ತಿಮಾಡುವುದಕ್ಕೆ, ಉಳಿಸಿಕೊಳ್ಳುವುದಕ್ಕೆ ಇರುವ ಉತ್ತೇಜನೆಗಳ ಮೇಲೆ ಗಮನ ಕೇಂದ್ರೀಕರಿಸಬಯಸುತ್ತೇನೆ” ಎಂದಿದ್ದರು. ಮುಂದುವರೆದು ಅವರು **“ಈ ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಹಣವನ್ನು ಅಡಗಿಸಿಡುವುದು ಸುಲಭವೇನಲ್ಲ, ಬಹಳ ಕಷ್ಟದಾಯಕ, ಆದ್ದರಿಂದ ನಾನು ಎಲ್ಲಿ ಹಣವನ್ನು ಘೋಷಿಸಿರುವುದಿಲ್ಲ ಎಂಬ ಮಾಹಿತಿಗಳನ್ನು ಪತ್ತೆ ಹಚ್ಚುವುದರ ಮೇಲೆ, ತೆರಿಗೆ ಆಡಳಿತವನ್ನು ಉತ್ತಮ ಪಡಿಸುವುದರ ಗಮನ ಕೇಂದ್ರೀಕರಿಸುತ್ತೇನೆ”** ಎಂದಿದ್ದರು.

ಮೋದಿ ಸರಕಾರ ಅಂತಹ ಗಮನ ಕೇಂದ್ರೀಕರಿಸುತ್ತಿಲ್ಲ ಎನ್ನುವುದೇ ಈ ‘ಮಿಂಚಿನ ಪ್ರಹಾರ’ದ ಮುಂದೆ ದೊಡ್ಡ ಪ್ರಶ್ನೆ ಚಿಹ್ನೆ ಇಟ್ಟಿರುವ ಸಂಗತಿ.

“ಕಪ್ಪು ಹಣದ ಉತ್ಪತ್ತಿಯ ನವ–ನವೀನ ದಾರಿಗಳನ್ನು ಹುಡುಕಿಕೊಳ್ಳಬಹುದು”

ರಿಝರ್ವ್ ಬ್ಯಾಂಕಿನ ಮತ್ತೊಬ್ಬ ನಿವೃತ್ತ ಗವರ್ನರ್ ಡಿ. ಸುಬ್ಬರಾವ್ ಈ ಕ್ರಮವನ್ನು ಚಕ್ರವರ್ತಿಯವರಂತೆ, ರಘುರಾಮ ರಾಜನ್‌ರವರಂತೆ ವಿರೋಧಿಸಿಲ್ಲ, ಆದರೆ ಅವರೂ ಕೂಡ ಜಾಗರೂಕರಾಗಿರಬೇಕಾಗುತ್ತದೆ ಎಂದಿದ್ದಾರೆ. ಈ ಕ್ರಮದಿಂದ ಎಷ್ಟು ಪ್ರಮಾಣದಲ್ಲಿ ಕಪ್ಪು ಹಣ ಹೊರಗೆ ಬರುತ್ತದೆಂಬುದು ಊಹೆಗೆ ಬಿಟ್ಟ ಸಂಗತಿ ಎಂದಿದ್ದಾರೆ.

ಕಪ್ಪು ಹಣದ ಬಹುಪಾಲು ಜಮೀನು, ಆಸ್ತಿಗಳು, ಶೇರುಗಳು, ಚಿನ್ನ ಅಥವ ವಿದೇಶಿ ಕರೆನ್ಸಿಗಳಲ್ಲಿ ಇದೆ ಎಂದು ಹೇಳುತ್ತಾರೆ ಎಂದಿರುವ ಸುಬ್ಬಾರಾವ್ ಅವರು ನೋಟು ನಿಷೇಧದ ಪರಿಣಾಮ ನಿಜವಾಗಿ ನಗದು ರೂಪದಲ್ಲಿ ಇರುವ ಕಪ್ಪು ಹಣದ ಪ್ರಮಾಣ ಎಷ್ಟು ಎಂಬುದರ ಮೇಲೆ ಅವಲಂಭಿಸಿದೆ ಎಂದು ಒಪ್ಪಿಕೊಳ್ಳುತ್ತಾರೆ.

ಕಾನೂನಿನ ಅಂಚಿನಲ್ಲಿ ತಮ್ಮ ಕೆಲಸ ಮಾಡಿಕೊಳ್ಳಲು ನವ–ನವೀನ ದಾರಿಗಳನ್ನು ಕಂಡುಕೊಳ್ಳುವ ನಮ್ಮ ದೇಶದಲ್ಲಿ ಜನಗಳು ಇದರಿಂದಲೂ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ಅದಾಗಲೇ ನಿಷೇಧಿತ ಕರೆನ್ಸಿಯನ್ನು ಕಾನೂನುಬದ್ಧ ಕರೆನ್ಸಿಯಾಗಿ ಭಾರೀ ಡಿಸ್ಕೌಂಟಿನಲ್ಲಿ ವಿನಿಮಯ ಮಾಡುವ ಅನೌಪಚಾರಿಕ ವ್ಯವಸ್ಥೆ ಏರ್ಪಟ್ಟಿದೆ ಎಂಬ ಸುದ್ದಿಗಳಿವೆ ಎನ್ನುವ ಸುಬ್ಬರಾವ್ ಅವರು “ಆದರೂ ಸರಕಾರ ಕಠಿಣ ಮತ್ತು ವಿಶ್ವಾಸಾರ್ಹ ಸಂದೇಶವನ್ನು ಕಳಿಸಬಲ್ಲುದಾದರೆ ಇಂತಹ ತಪ್ಪಿಸಿಕೊಳ್ಳುವ ಪ್ರಯತ್ನಗಳಿಗೆ ಅವಕಾಶ ಕಡಿಮೆ” ಎನ್ನುತ್ತಾರೆ.

ನಿಜ, ಆದರೆ ಕಳೆದೆರಡು ವರ್ಷಗಳಲ್ಲೇ 1.12ಲಕ್ಷ ಕೋಟಿ ರಊ.ಗಳ ಕಾರ್ಪೊರೇಟ್ ಸಾಲಗಳನ್ನು ಮನ್ನಾಮಾಡಿದ ಈ ಸರಕಾರದ ಅಂತಹ ಸಂದೇಶಗಳನ್ನು ಕೊಡುತ್ತದೆಯೇ ಎಂಬುದೇ ಬಹುಮೂಲ್ಯ ಪ್ರಶ್ನೆ.

“ಸಂಘಟಿತ ಲೂಟಿ ಮತ್ತು ಕಾನೂನಾತ್ಮಗೊಳಿಸಿದ ಕೊಳ್ಳೆ”

ಈ ಹಿಂದೆ ರಿಝರ್ವ್ ಬ್ಯಾಂಕಿನ ಗನರ್ನರ್ ಕೂಡ ಆಗಿದ್ದ ಮಾಜಿ ಪ್ರಧಾನ ಮಂತ್ರಿಗಳು ಈ ನೋಟು ರದ್ಧತಿ ಕ್ರಮಕ್ಕೆ ವಿರುದ್ಧವಾಗಿಲ್ಲ ಎಂದು ಕನ್ನಡದ ‘ಮೋದಿ ಭಕ್ತ’ ಚಾನೆಲ್ ಒಂದು ನೋಟು ರದ್ದತಿ ಕ್ರಮವನ್ನು ಹಾಡಿಹೊಗಳುತ್ತ ಹೇಳಿತ್ತು. ಆದರೆ ಅವರು ರಾಜ್ಯಸಭೆಯಲ್ಲಿ ಮಾತಾಡುತ್ತ ಇದೊಂದು ಸಂಘಟಿತ ಲೂಟಿ ಮತ್ತು ಕಾನೂನಾತ್ಮಗೊಳಿಸಿದ ಕೊಳ್ಳೆ ಎಂದು ವರ್ಣಿಸಿದ್ದಾರೆ. ಇದು ಒಂದು ದೈತ್ಯಪ್ರಮಾಣದ ನಿರ್ವಹಣಾ ವಿಫಲತೆ ಎಂದೂ ಅವರು ಹೇಳಿದ್ದಾರೆ.


ಇದು ದೂರಗಾಮಿ ಪ್ರಯೋಜನ ತರುತ್ತದೆಂಬ ಮೋದಿಯವರ ಸಮರ್ಥನೆಯನ್ನು ಪ್ರಶ್ನಿಸುತ್ತ ಅವರು ಅಷ್ಟು ದೂರ ಹೋಗುವ ವೇಳೆಗೆ ನಾವೆಲ್ಲ ಸತ್ತಿರುತ್ತೇವೆ ಎಂದಿದ್ದಾರೆ, ಜನ 50ದಿನ ಕಾಯಬೇಕು ಎನ್ನುವ ಮಾತನ್ನೂ ಟೀಕಿಸುತ್ತ “ಆ ಐವತ್ತು ದಿನಗಳು ಬಡವರ ಮೇಲೆ ವಿನಾಶಕಾರಿ ಪ್ರಭಾವ ಬೀರಿರುತ್ತವೆ” ಎಂದಿದ್ದಾರೆ.

ವರ್ಷದ ಆರಂಭದಿಂದಲೇ ತೆರಿಗೆ ವಂಚನೆಯ ಧಾಮಗಳತ್ತ 1000ದ ನೋಟುಗಳ ಚಲನೆ?

ಅನಾಣ್ಯೀಕರಣದ ಊಹಾಪೋಹ ಈ ವರ್ಷದ ಆರಂಭದಿಂದಲೇ ಹರಡಿತ್ತು, ಬಹುಶಃ ಇದರಿಂದಾಗಿ ಕಪ್ಪು ಹಣದ ಜನ ತೆರಿಗೆವಂಚನೆಯ ದೇಶ–ಪ್ರದೇಶಗಳ ಮೂಲಕ ಆಸ್ತಿಗಳನ್ನು ಮಾಡಿಕೊಳ್ಳುವ ಕ್ರಿಯೆಯಲ್ಲಿ 1000ರೂ.ಗಳ ಪ್ರಸಾರ ಬಹಳಷ್ಟು ಹೆಚ್ಚಿತ್ತು ಎಂಬಂತಹ ಸುದ್ದಿಗಳು ಈಗ ಹರಿದಾಡುತ್ತಿವೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆರ್ಥಿಕ ತಜ್ಞರ ಒಂದು ಪ್ರಬಂಧ ಮತ್ತು ಪ್ರಧಾನಿಗಳ ಪ್ರಕಟಣೆಯ ಒಂದು ವಾರದ ಹಿಂದೆ ರಿಝರ್ವ್ ಬ್ಯಾಂಕ್ ಹೊರಡಿಸಿದ ಸುತ್ತೋಲೆ ಈ ಅನಾಣ್ಯೀಕರಣ ಮತ್ತು ಅದು ಉಂಟು ಮಾಡಬಹುದಾದ ಅಗಾಧ ಸಮಸ್ಯೆಗಳತ್ತ ಗಮನ ಸೆಳೆದಿದ್ದವು ಎನ್ನಲಾಗಿದೆ. ಅದರಲ್ಲಿ ಕಂಡರಿಸಿದ್ದ ಸಮಸ್ಯೆಗಳು ಈಗ ನಿಜವಾಗಿಯೂ ಜನಸಾಮಾನ್ಯರನ್ನು ಕಾಡುತ್ತಿವೆ. ಹಾಗಿದ್ದರೆ ಗೊತ್ತಿದ್ದೂ, ಗೊತ್ತಿದ್ದೂ ಈ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ? ರಿಝುವ ಬ್ಯಾಂಕ್ ತಾನೇ ಗುರುತಿಸಿದ್ದ ಸಮಸ್ಯೆಗಳ ಬಗ್ಗೆ ತಾನೇ ನಿಷ್ಕ್ರಿಯವಾಗಿತ್ತೇ ಎಂದು ಪ್ರಶ್ನಿಸಲಾಗುತ್ತಿದೆ. ರಿಐರ್ವ್ ಬ್ಯಾಂಕಿನ ಪ್ರಸಕ್ತ ಗವರ್ನರ್ ದೇಶದ ಹಣಕಾಸು ವ್ಯವಸ್ಥೆ ಅಲ್ಲೋಲ ಕಲ್ಲೋಲವಾಗಿರುವಾಗ ಇದುವರೆಗೆ ಒಂದು ಸಲ ಮಾತ್ರ ಬಾಯಿ ಬಿಚ್ಚಿದ್ದಾರೆ, ತಮ್ಮ ವಿಫಲತೆಗೆ ಅವರು ರಾಜೀನಾಮೆ ಕೊಡಬೇಕು ಎಂದು ಬ್ಯಾಂಕ್ ನೌಕರರ ಸಂಘಟನೆಯ ಮುಖಂಡರೊಬ್ಬರು ಆಗ್ರಹಿಸಿದ್ದಾರೆ. ❑

ಮೋದೀ ಕೇಳಿದ್ದು, ಕೇಳದ್ದು ಕೇಳಬೇಕಾದ್ದು

ನೋಟು ರದ್ದತಿ ಜನರನ್ನು ತೀವ್ರವಾಗಿ ಬಾಧಿಸುತ್ತಿದ್ದು, ಪ್ರಚಾರಕ್ಕೆಂದು ಮಾಡಿದ್ದ ಕ್ರಮ



ಬ್ಯೂಮರಾಂಗ್ ಆಗುವಂತೆ ಕಾಣುತ್ತಿದ್ದು, ಮೋದಿ ಸಂಘ ಗ್ಯಾಂಗು ಮತ್ತು ಅವರ ಜೀ ಹುಜೂರ್ ಮಾಧ್ಯಮಗಳು ಕಂಗಾಲಾಗಿವೆ. ನೋಟು ರದ್ದತಿ ಬಗ್ಗೆ ಮೋದಿ ಒಂದು ಆಪ್ ಬಿಟ್ಟು ಜನರ ಅಭಿಪ್ರಾಯ ಬಿಟ್ಟರಂತೆ. ಮೋದಿ ಅವರದ್ದೇ, ಅವರೇ ಫಲಿತಾಂಶ ಪ್ರಕಟಿದ್ದಾರೆ. ಹೆಚ್ಚಿನ ಪ್ರಶ್ನೆಗಳಿಗೆ ಶೇ. 90ಕ್ಕಿಂತ ಹೆಚ್ಚು ಜನ ಮೋದಿಗೆ ಶಹಬಾಸ್ ಗಿರಿ ಕೊಟ್ಟಿದ್ದಾರಂತೆ. ಮಾಮೂಲಿನಂತೆ ಜೀ ಹುಜೂರ್ ಮಾಧ್ಯಮಗಳು, ಈ ಬೋಗಸ್ ಸಮೀಕ್ಷೆಯ ಬೋಗಸ್ ಫಲಿತಾಂಶಗಳ ಬಗ್ಗೆ ಪ್ರಚಾರ ಮಾಡಿದ್ದೇ ಆಡಿದ್ದು. ಇದರ ನಂತರ ವಿರೋಧ ಪಕ್ಷಗಳು ತಮ್ಮ ವಿರೋಧ ಹಿಂತೆಗೆದುಕೊಳ್ಳಬೇಕೆಂದು ಉಪದೇಶ ನೀಡಿದ್ದೇ ನೀಡಿದ್ದು. ಸಾಮಾಜಿಕ ಮಾಧ್ಯಮಗಳು ಮತ್ತು ಜನತೆಯ ನಡುವೆ ಮಾತ್ರ ಈ ‘ಆಪ್’ ಸಮೀಕ್ಷೆ ಜೋಕಿನ ವಿಷಯವಾಗಿದೆ. ಹೆಚ್ಚಿನ ಪ್ರಶ್ನೆಗಳೇ ಒಂದು ನಿರ್ದಿಷ್ಟ ಉತ್ತರದತ್ತ ತಳ್ಳುತ್ತವೆ ಎಂದು ಹಲವು ತಟಸ್ಥ ವೀಕ್ಷಕರೂ ಅಭಿಪ್ರಾಯ ಪಟ್ಟಿದ್ದಾರೆ. ಉದಾಹರಣೆಗೆ ಪ್ರಶ್ನೆ 8 ಎ.ಎ.ಪಿ. ಪಕ್ಷವನ್ನು ಅಥವಾ ಭ್ರಷ್ಟಾಚಾರವನ್ನೂ ಈ ನೋಟು ರದ್ದತಿ ಕ್ರಮ ಎರಡನ್ನೂ ವಿರೋಧಿಸುವ ಎಲ್ಲಾ ಪಕ್ಷಗಳನ್ನೂ ಸಂಘಟನೆಗಳನ್ನು ನೇರವಾಗಿ

ಪುಟ 10 ಕ್ಕೆ

ಜಿಡಿಪಿ ಶೇ. 3 ರಷ್ಟು ಕಡಿಮೆಯಾಗಬಹುದು



ನೋಟು ನಿಷೇಧದ ಪರಿಣಾಮಗಳು ಈಗಾಗಲೇ ಕಾಣಲಾರಂಬಿಸಿವೆ. ಮೊದಲನೆಯದಾಗಿ ಎ.ಟಿ.ಎಂ./ಬ್ಯಾಂಕುಗಳ ಮುಂದೆ ಕ್ಯೂ ನಿಂತ ಜನ ತಮ್ಮ ಜೀವನಾಧಾರವಾದ ಆದಾಯ ಕಳೆದುಕೊಳ್ಳುತ್ತಿದ್ದಾರೆ. ನೋಟುಗಳ ಅಭಾವದಿಂದ ದಿನ ನಿತ್ಯದ ಮತ್ತಿತರ ಬಳಕೆಯಲ್ಲಿ ತೀವ್ರ ಕಡಿತವಾಗಿದ್ದು, ಇದರ ಮೇಲೆ ಅವಲಂಬಿತವಾದ ಸಣ್ಣ/ದೊಡ್ಡ ವ್ಯಾಪಾರ ವಹಿವಾಟುಗಳು ಮತ್ತು ಅದರ ಕಾರ್ಮಿಕರ ಆದಾಯದ ಕಡಿತವಾಗಿದೆ. ಕೃಷಿ ಒಂದು ಕಡೆ ಸತತ ಬರಗಾಲಗಳ ಇತರ ಸಂಕಟಗಳ ಬಿಕ್ಕಟ್ಟಿನಲ್ಲಿದೆ. ಇನ್ನೊಂದು ಕಡೆ ಒಂದು ಬೆಳೆಯ ಕಟಾವು, ಇನ್ನೊಂದು ಬೆಳೆಯ ಬಿತ್ತನೆ ಮಧ್ಯೆ ಬಂದಿದ್ದು ಇಂದಿನ ಆದಾಯ ಹಾಗೂ ಮುಂದಿನ ಬೆಳೆಗೆ ಹೂಡಲು ಹಣ ಇಲ್ಲದೆ ಮುಂದೆ ಬರಬಹುದಾದ ಆದಾಯವೂ ಕಡಿತವಾಗಲಿದೆ. ಇದು ಇಡೀ ಕೃಷಿ ಉತ್ಪಾದನೆ ಕಡಿತಕ್ಕೆ ಕಾರಣವಾಗಲಿದೆ. ಇದೇ ರೀತಿ ಸಣ್ಣ/ ಮಧ್ಯಮ ಕೈಗಾರಿಕೆಗಳು ಅಸಂಘಟಿತ (ಮುಖ್ಯವಾಗಿ ಸರಕುಗಳಿಗೆ, ಕಾರ್ಮಿಕರಿಗೆ ನಗದು ಕೊಡಬೇಕಾದ ಎಲ್ಲಾ) ಕ್ಷೇತ್ರಗಳಲ್ಲಿ ಕೆಲಸ ನಿಂತೇ ಹೋಗಿದೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಈ ಪರಿಸ್ಥಿತಿ ನೋಟು ಅಭಾವ ಮುಂದುವರೆಯುವ ವರೆಗೆ (ಅಂದರೆ ಕನಿಷ್ಠ 6 ತಿಂಗಳವರೆಗೆ) ಮುಂದುವರೆಯಲಿದೆ.

ಸುಮಾರು 3.2 ಕೋಟಿ ಜನ ದುಡಿಯುತ್ತಿರುವ ಬಟ್ಟೆ, ಸಿದ್ದ ಉಡುಪು, ಚರ್ಮ, ಚಿನ್ನಾಭರಣ ಕ್ಷೇತ್ರದಲ್ಲಿ ದಿನ/ವಾರ ಕೂಲಿ ಮಾಡುತ್ತಾ ನಗದು ಸಂಬಳ ಪಡೆಯುತ್ತಿರುವ ಸುಮಾರು ಶೇ. 20 ಕಾರ್ಮಿಕರು ಅಂದರೆ ಸುಮಾರು 64 ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ ಅಥವಾ ಕೆಲಸ ಕಳೆದುಕೊಳ್ಳಲಿದ್ದಾರೆ.

ಇದೇ ರೀತಿ ನೋಟು ನಿಷೇಧದ ಪರಿಣಾಮ, ಈಗ ಶೇ. 45ರಷ್ಟು ಇಡಿಪಿಗೆ ಮತ್ತು ಶೇ. 80 ಉದ್ಯೋಗಗಳನ್ನು ಸೃಷ್ಟಿಸುವ ಇಡೀ ಅಸಂಘಟಿತ ಕ್ಷೇತ್ರವನ್ನು ತಟ್ಟಲಿದೆ. ಈಗಲೇ ದಿನಕ್ಕೆ ಸುಮಾರು 20 ಸಾವಿರ ಕೋಟಿಯಷ್ಟು ಜಿಡಿಪಿ ನಷ್ಟವಾಗುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಅಂದರೆ ಕಳೆದ 16 ದಿನಗಳಲ್ಲಿ 3.20 ಲಕ್ಷ ಕೋಟಿ ರೂ. ಜಿಡಿಪಿಗೆ ನಷ್ಟವಾಗಿದೆ. ಒಟ್ಟು ನೋಟು ನಿಷೇಧದ ಪರಿಣಾಮವಾಗಿ ಜಿಡಿಪಿ ಬೆಳವಣಿಗೆ ದರ ಶೇ. 3ರಷ್ಟು ಕಡಿಮೆಯಾಗಬಹುದು ಎಂದು ಪ್ರೊಣಬ್ ಸೆನ್ ಎಂಬ ಆರ್ಥಿಕ ತಜ್ಞ ಮತ್ತು ಮಾಜಿ ಮುಖ್ಯ ಸಂಖ್ಯಾಸಾಸ್ತ್ರಜ್ಞ ಅಂದಾಜು ಮಾಡಿದ್ದಾರೆ. ❑

ಮೋದೀ ಕೇಳಿದ್ದು, ಕೇಳದ್ದು ಕೇಳಬೇಕಾದ್ದು...... ಪುಟ 9 ರಿಂದ

ಗುರಿ ಮಾಡುವುದಿಲ್ಲವೇ? ಸ್ವಾಭಾವಿಕವಾಗಿಯೇ ಸಾಮಾಜಿಕ ಮಾಧ್ಯಮಗಳಲ್ಲಿ ಮೋದಿ ಕೇಳದ ಆದರೆ ಕೇಳಬೇಕಾಗಿದ್ದ ಪ್ರಶ್ನೆಗಳು ಹರಿದಾಡುತ್ತಿದೆ. ಮೋದಿ ಕೇಳಿದ, ಕೇಳದ ಆದರೆ ಕೇಳಬೇಕಾಗಿದ್ದ ಪ್ರಶ್ನೆಗಳು ಇಲ್ಲಿವೆ. ಓದಿ.

ಮೋದಿಯವರು ಕೇಳಿದ್ದು

1. ಭಾರತದಲ್ಲಿ ಕಪ್ಪು ಹಣ ಇದೆ ಎಂದು ನೀವು ಭಾವಿಸಿದ್ದೀರಾ?
2. ಭ್ರಷ್ಟಾಚಾರ ಮತ್ತು ಕಪ್ಪು ಹಣದ ದುಷ್ಪಶಕ್ತಿಯ ವಿರುದ್ಧ ಹೋರಾಡಬೇಕು ಮತ್ತು ನಿರ್ಮೂಲಗೊಳಿಸಬೇಕು ಎಂದು ನಿಮಗನಿಸಿದೆಯೇ?
3. ಒಟ್ಟಾರೆಯಾಗಿ ಕಪ್ಪು ಹಣದ ವಿರುದ್ಧ ಸರಕಾರದ ನಡೆಗಳ ಬಗ್ಗೆ ನಿಮಗೇನನಿಸುತ್ತದೆ?
4. ಇದುವರೆಗೆ ಭ್ರಷ್ಟಾಚಾರದ ವಿರುದ್ಧ ಸರಕಾರದ ಪ್ರಯತ್ನಗಳ ಬಗ್ಗೆ ನಿಮಗೇನನಿಸುತ್ತದೆ?
5. ಮೋದಿ ಸರಕಾರದ ಹಳೆಯ 500 ರೂಪಾಯಿ ಮತ್ತು 1000 ರೂಪಾಯಿ ನೋಟುಗಳ ನಿಷೇಧದ ನಡೆಯ ಬಗ್ಗೆ ನಿಮಗೇನನಿಸುತ್ತದೆ?
6. ಇದು ರಿಯಲ್‌ಎಸ್ಟೇಟ್, ಶಿಕ್ಷಣ, ಆರೋಗ್ಯ ಪಾಲನೆಯನ್ನು ಜನಸಾಮಾನ್ಯರ ಅಳವಿನೊಳಕ್ಕೆ ತರುತ್ತದೆಯೇ?
7. ಭ್ರಷ್ಟಾಚಾರ, ಕಪ್ಪು ಹಣ, ಭಯೋತ್ಪಾದನೆ ಮತ್ತು ನಕಲಿ ನೋಟುಗಳನ್ನು ದಮನ ಮಾಡುವ ನಮ್ಮ ಹೋರಾಟದಲ್ಲಾದ ಅನಾನುಕೂಲತೆಗಳ ಬಗ್ಗೆ ನಿಮಗೆ ಬೇಸರವಾಗಿದೆಯೇ?
8. ಕೆಲವು ಭ್ರಷ್ಟಾಚಾರ-ವಿರೋಧಿ ಕಾರ್ಯಕರ್ತರು ಈಗ ವಾಸ್ತವವಾಗಿ ಕಪ್ಪು ಹಣ, ಭ್ರಷ್ಟಾಷ್ಟಾಚಾರ ಮತ್ತು ಭಯೋತ್ಪಾದನೆಗೆ ಬೆಂಬಲವಾಗಿ ಹೋರಾಡುತ್ತಿದ್ದಾರೆ ಎಂದು ನೀವು ನಂಬುತ್ತೀರಾ?
9. ಪ್ರಧಾನ ಮಂತ್ರಿ ಮೋದಿಯವರೊಡನೆ ನೀವು ಹಂಚಿಕೊಳ್ಳಬಯಸುವ ಸೂಚನೆಗಳು, ವಿಚಾರಗಳು, ಒಳನೋಟಗಳು ಏನಾದರೂ ನಿಮ್ಮ ಬಳಿಯಿದೆಯೇ?

ಮೋದಿಯವರು ಕೇಳದ್ದು, ಕೇಳಬೇಕಾದ್ದು

1. ನಿಮ್ಮ ಖಾತೆಯಿಂದ ಹಣ ಪಡೆಯಲು ನೀವು ಎಷ್ಟು ಸಮಯವನ್ನು ಬ್ಯಾಂಕ್ ಅಥವ ಎಟಿಎಂನಲ್ಲಿ ಕಳೆದಿದ್ದೀರಿ?
2. ನಿಮಗೆ ಅಗತ್ಯವಿದ್ದ ಹಣ ನಿಮಗೆ ಸಿಕ್ಕಿತೇ, ಸಿಕ್ಕಿದ್ದರೆ, ಎಷ್ಟು ಪ್ರಯತ್ನಗಳ ನಂತರ?
3. ನೀವು ಎದುರಿಸಿದ ಸಮಸ್ಯೆಗಳು ಯಾವುದನ್ನು ಸೂಚಿಸುತ್ತವೆ ಎಂದು ನಿಮಗನಿಸುತ್ತದೆ?
   - ❍ ಇದು ಕಪ್ಪು ಹಣದ ವಿರುದ್ಧ ಸರಕಾರದ ಹೋರಾಟದ ಅನಿವಾರ್ಯ ಪರಿಣಾಮ
   - ❍ ಇದು 125 ಕೋಟಿ ಜನಗಳಿರುವ ದೇಶದಲ್ಲಿ ಅನಿವಾರ್ಯ ಸಮಸ್ಯೆ
   - ❍ ಸರಕಾರದ ಬಳಿ ಯೋಜನೆಯ ಒಂದು ಸಂಪೂರ್ಣ ಅಭಾವ ಇದೆ.
4. ಭಯೋತ್ಪಾದಕರಿಗೆ ತಮ್ಮ ಕಾರ್ಯಾಚರಣೆಗಳನ್ನು ನಡೆಸಲು ಬೇಕಾದ ಹಣ ಈಗ ಸಿಗುತ್ತಿಲ್ಲ ಎಂದು ನಿಮಗನಿಸುತ್ತಿದೆಯೇ?
5. ಹೆಚ್ಚಿನ ಮೌಲ್ಯದ ನೋಟುಗಳು ಭ್ರಷ್ಟಾಚಾರ-ಸ್ನೇಹಿ, ಅವು ಕಪ್ಪು ಹಣವನ್ನು ಬಚ್ಚಿಡುವುದನ್ನು ಸುಲಭಗೊಳಿಸುತ್ತವೆ ಎಂದಿರುವಾಗ 2000ರೂಪಾಯಿಗಳ ನೋಟುಗಳನ್ನು ತರುವ ನಿರ್ಣಯವನ್ನು ನೀವು ಬೆಂಬಲಿಸುತ್ತೀರಾ?
6. 2000ರೂಪಾಯಿ ನೋಟುಗಳಲ್ಲಿ ಯಾವುದೇ ಹೆಚ್ಚಿನ ಭದ್ರತಾ ಅಂಶವಿಲ್ಲ. ಅದರ ನಕಲಿಗಳು ಬರುತ್ತವೆ, ಭಯೋತ್ಪಾದಕರು ಅವನ್ನು ಬಳಸುತ್ತಾರೆ ಎಂದು ನಿಮಗನಿಸುತ್ತದೆಯೇ?
7. ಈ ನಡೆಗೆ ಪ್ರಾಥಮಿಕ ಉದ್ದೇಶ ಏನು ಎಂದು ನಿಮಗನಿಸುತ್ತದೆ?
   - ❍ ಹಣಕಾಸು
   - ❍ ಭ್ರಷ್ಟಾಚಾರದ ವಿರುದ್ಧ ಪ್ರಹಾರ
   - ❍ ರಾಜಕೀಯ
8. ನೀವು ಎಟಿಎಂ ಅಥವ ಬ್ಯಾಂಕಿನಲ್ಲಿ ತ್ಯಾಗ ಮಾಡಿದ ಸಮಯ ಮತ್ತು ಎದುರಿಸಿದ ಸಮಸ್ಯೆಗಳು ರಾಷ್ಟ್ರೀಯ ಹಿತದೃಷ್ಟಿಯಿಂದ ಇದ್ದುದೇ ಅಥವ ಯಾರದೋ ಪ್ರಮಾದಕ್ಕೆ ನೀವು ಬೆಲೆ ತೆರುವಂತಾಗಿದೆಯೇ?
9. ಅನಾಣ್ಯೀಕರಣದ ನಂತರ ಜನಗಳ ಸಾವುಗಳು ಮತ್ತು ನೋವುಗಳ ಕತೆಗಳು ನಕಲಿ ಮತ್ತು ರಾಜಕೀಯ ಪ್ರೇರಿತ ಎಂದು ನಿಮಗೆ ಅನಿಸುತ್ತದೆಯೇ? ❑

ಮೋದಿಗೆ ಮಾಜಿ ಗುರು ಯತೀನ್ ಓಝಾ..... ಪುಟ 8 ರಿಂದ

ವಾಸ್ತವಾಂಶಗಳನ್ನು ಪರಿಶೀಲಿಸಬಹುದು.

ಜಿಲ್ಲಾ ಸಹಕಾರಿ ಬ್ಯಾಂಕುಗಳ ಹಂತದಲ್ಲಿ ವ್ಯಾಪಕ ಆಕ್ರಮಗಳು ನಡೆಯುತ್ತವೆ ಎಂಬ ಮಾಹಿತಿ ದೊರೆತ ನಂತರ ನೀವು ಈ ಬ್ಯಾಂಕುಗಳು ನೋಟು ವಿನಿಮಯ ಮಾಡುವುದನ್ನು ನಿಷೇಧಿಸಿದ್ದೀರೆಂದು ನಿಮ್ಮನ್ನು ತಿಳಿದವರು ಒಪ್ಪಲು ನಿರಾಕರಿಸಬಹುದು. ನಿಮ್ಮ ವೈರಿ ಕೂಡ ನಿಮ್ಮ ಸಾಮರ್ಥ್ಯ ಹಾಗೂ ಬುದ್ಧಿವಂತಿಕೆಯನ್ನು ಗೌರವಿಸುತ್ತಾನೆ. ಇಂತಹ ಒಂದು ಪ್ರಮುಖ ವಿಚಾರ ನಿಮ್ಮ ಮನಸ್ಸಿನ ಹೊರಗಿರಲಿಕ್ಕಿಲ್ಲ ಎಂಬುದು ಸ್ಪಷ್ಟ. ನೀವು ಕೈಗೊಳ್ಳುವ ಕ್ರಮದ ಸಂಪೂರ್ಣ ಚಿತ್ರಣ ನಿಮ್ಮ ಮನಸ್ಸಿನಲ್ಲಿರುವ ತನಕ ನೀವು ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ ಎಂಬುದು ನನಗೆ ತಿಳಿದಿದೆ. ನೀವು ಯಾವುದೇ ಕ್ರಮ ಕೈಗೊಳ್ಳುವ ಮುನ್ನ ಅದರ ಉತ್ತಮ ಹಾಗೂ ಅಡ್ಡ ಪರಿಣಾಮಗಳೂ ನಿಮ್ಮ ಮನಸ್ಸಿನಲ್ಲಿರುತ್ತದೆ. ಗುಜರಾತ್ ರಾಜ್ಯದ ಎಲ್ಲಾ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಬಿಜೆಪಿಯ ಜನರ ನಿಯಂತ್ರಣದಲ್ಲಿರುವುದರಿಂದ ಈ ಬ್ಯಾಂಕ್‌ಗಳು 8-11-2016 ರ ರಾತ್ರಿ 9 ಗಂಟೆಯಿಂದ 9-11-2016 ರಂದು ಬೆಳಿಗ್ಗೆ 5 ಗಂಟೆಯ ತನಕ 500 ಹಾಗೂ 1000 ರೂ. ಮುಖಬೆಲೆಯ ನೋಟುಗಳನ್ನು ಸಣ್ಣ ಮೌಲ್ಯದ ಸಮಾನ ಮೌಲ್ಯದ ನೋಟುಗಳಿಗೆ ವಿನಿಮಯ ಮಾಡಿವೆ. ನೀವು ಆರ್‌ಬಿಐ ಮುಖಾಂತರ ದೇಶದ ಎಲ್ಲಾ ಬ್ಯಾಂಕುಗಳಲ್ಲಿ 8-11-2016 ರಂದು ಇದ್ದ ನಗದು ಹಾಗೂ ಅವು ಯಾವ ಮುಖಬೆಲೆಯ ನೋಟುಗಳು ಎಂಬ ಮಾಹಿತಿ ಕೇಳಿದ್ದೀರಿ. ನನ್ನ ಮೇಲಿನ ಹೇಳಿಕೆಯ ಸತ್ಯಾಸತ್ಯತೆಯನ್ನು ನೀವು ಪರಿಶೀಲಿಸಬಹುದು. ನಾನು ಹೇಳಿದ್ದು ತಪ್ಪು ಎಂದು ಸಾಬಿತಾದರೆ ನಾನು ಸಾರ್ವಜನಿಕವಾಗಿ ಕ್ಷಮೆಯಾಚಿಸುತ್ತೇನೆ.

> ಶ್ರೀ ಅಮಿತ್ ಶಾ ಅವರ ಎಲ್ಲಾ ಆಪ್ತರು ನವೆಂಬರ್ 8 ರಿಂದ ಇಲ್ಲಿಯ ತನಕ ಹಣ ವಿನಿಮಯ ದಂಧೆಯಲ್ಲಿ ತೊಡಗಿದ್ದಾರೆಂಬುದನ್ನು ಸ್ಪಷ್ಟವಾಗಿ ತಿಳಿಸುವ ವೀಡಿಯೋ ರೆಕಾರ್ಡಿಂಗ್ ನನ್ನ ಬಳಿ ಇದೆ. ಅವರೆಲ್ಲರ ಕಛೇರಿ ಹಾಗೂ ನಿವಾಸಗಳ ಹೊರಗೆ ದೊಡ್ಡ ಸರತಿ ಸಾಲಿದ್ದು ಅಲ್ಲಿ ಕಪ್ಪು ಹಣವನ್ನು ಶೇ. 37 ರಷ್ಟು ವಿನಾಯಿತಿ ದರದಲ್ಲಿ ಬಿಳಿಯಾಗಿಸಲಾಗಿದೆ.

ತಿಮಿಂಗಿಲಗಳನ್ನು ಬಿಟ್ಟು ಬಿಡಲಾಗಿದೆ ಹಾಗೂ ನಿಮ್ಮ ಆತ್ಮೀಯ ಕೈಗಾರಿಕೋದ್ಯಮಿಗಳಿಗೆ ನೋಟು ರದ್ದತಿಯ ವಿಚಾರ ಮೊದಲೇ ತಿಳಿಸಲಾಗಿದೆಯೆಂದು ಜನರು ಮನಸ್ಸಿನಲ್ಲಿರುವ ಸಂಶಯವನ್ನು ನಿವಾರಿಸಲು ಭಾರತ ಸರಕಾರದ ಅಧಿಕೃತ ವೆಬ್‌ಸೈಟಿನಲ್ಲಿ ನೀವು ಒಂದು ಕೋಟಿಗೂ ಅಧಿಕ ಹಣ ಠೇವಣಿಯಿಟ್ಟವರು ಮಾಹಿತಿ ಬಹಿರಂಗಪಡಿಸಬೇಕೆಂದು ತಿಳಿಸಬೇಕು. ಭಾರತದ ಮೊದಲ 300 ಫಾರ್ಚೂನ್ ಕಂಪೆನಿಗಳ ಒಬ್ಬನೇ ಒಬ್ಬ ಅಧ್ಯಕ್ಷ, ಆಡಳಿತ ನಿರ್ದೇಶಕ ಯಾ ನಿರ್ದೇಶಕರು ಮುಂದೆ ಬಂದು ಮಾಹಿತಿ ನೀಡದೇ ಇದ್ದರೆ ನನ್ನ ಆರೋಪ ಸಾಬೀತಾದಂತೆಯೇ ಸರಿ. ರೂ. 4,000 ಹಾಗೂ ಅದಕ್ಕಿಂತಲೂ ಕೆಳಗಿನ ಠೇವಣಾತಿಗಾಗಿ ಜನರು ಹಸಿವು ಬಾಯಾರಿಕೆಯನ್ನು ಲೆಕ್ಕಿಸದೆ ಸರತಿ ನಿಂತಿದ್ದನ್ನು ನಾನು ನೋಡಿದ್ದೇನೆ. ಆದರೆ ಒಂದೇ ಒಂದು ಮರ್ಸಿಡಿಸ್, ಬಿಎಂ ಡಬ್ಲ್ಯೂ, ಆಡಿ, ವೋಲ್ವೋ, ಪೋರ್ಶೆ ಯಾ ರೇಂಜ್ ರೋವರ್ ವಾಹನಗಳು ಯಾವುದೇ ಬ್ಯಾಂಕಿನ ಹೊರಗಿರಲಿಲ್ಲ ಹಾಗೂ ಇಂತಹ ವಾಹನದ ಯಾವನೇ ಮಾಲಕ ಸರತಿಯಲ್ಲಿ ನಿಂತು ಹಣ ಹಿಂಪಡೆಯಲು ನಿಲ್ಲಲಿಲ್ಲ. ನಿಮ್ಮ ಪ್ರಕಾರ ಕಪ್ಪು ಹಣವನ್ನು ಬ್ಯಾಂಕು ಅಥವಾ ಎಟಿಎಂ ಎದುರು ಕ್ಯೂ ನಿಂತವರೇ ಶೇಖರಿಸಿರಬಹುದಲ್ಲದೆ ಮೇಲೆ ತಿಳಿಸಲಾದ ವಾಹನಗಳ ಮಾಲಕರು ಅಲ್ಲ. ಈ ಮೇಲಿನ ಫಾರ್ಚೂನ್ 300 ಕೈಗಾರಿಕೋದ್ಯಮಿಗಳ ಹೊರತಾಗಿ ಬಿಲ್ಡರುಗಳು, ಗುತ್ತಿಗೆದಾರರು, ಸರಕಾರಿ ಗುತ್ತಿಗೆ ಪಡೆದವರು, ಗಣಿ ಉದ್ಯಮಿಗಳು, ಮುಖ್ಯವಾಗಿ ಕಬ್ಬಿಣದ ಅದಿರು ಗಣಿಯವರು ಇತರ ಕೈಗಾರಿಕೋದ್ಯಮಿಗಳು ಹಾಗೂ ರಾಜಕಾರಣಿಗಳು ಮತ್ತು ಅಧಿಕಾರಿಗಳು ಎಷ್ಟು ಹಣ ಠೇವಣಿಯಿರಿಸಿದ್ದಾರೆಂಬುದನ್ನು ಈ ದೇಶದ ಜನರು ತಿಳಿಯ ಬಯಸುತ್ತಾರೆ.

ಯಾರು ಎಷ್ಟು ಹಣ ಠೇವಣಿಯಿರಿಸಿದ್ದಾರೆಂಬ ಮಾಹಿತಿ ನೀಡದ ಹೊರತು ಶೇ. 50 ರಷ್ಟು ಕಪ್ಪು ಹಣ ಶೇಖರಿಸಿರುವ 10-12 ಕೈಗಾರಿಕೆಗಳ ಮಂದಿಗೆ ಮುಂಚಿತವಾಗಿ ಮಾಹಿತಿ ನೀಡಿ ನೀವು ಆಶೀರ್ವಾದ ಮಾಡಿದ್ದೀರೆಂಬುದು ಸಾಬಿತಾಗುತ್ತದೆ. ನೀವು ಒಂದು ಲಕ್ಷ ಕೋಟಿ ರೂ. ಮೌಲ್ಯದ ಭೂಮಿ ಮಂಜೂರು ಮಾಡಿದರೂ 7,000 ಜನರಿಗೆ ಉದ್ಯೋಗ ಒದಗಿಸದ ಆ 10-12 ಕೈಗಾರಿಕೆಗಳು ಮಾಡಿದ ಠೇವಣಿಯೆಷ್ಟು ಎಂಬುದನ್ನು ಬ್ಯಾಂಕುಗಳ ಎದುರು ಸರತಿ ನಿಲ್ಲುವ ಜನರಿಗೆ ಕನಿಷ್ಠ ತಿಳಿಯುವಂತಾಗಬೇಕು. 300 ರಿಂದ 400 ಕೋಟಿ ರೂ. ಠೇವಣಿಯಿರಿಸಿದ ವ್ಯಕ್ತಿಗಳು ಯಾರು ಎಂದು ವೆಬ್‌ಸೈಟ್‌ನಲ್ಲಿ ಠೇವಣಿಗಳ ಬಗ್ಗೆ ಮಾಹಿತಿ ಹಾಕಿದರೆ ತಿಳಿಯುವುದಲ್ಲದೆ, ಅವರ ಠೇವಣಿಗಳು ಅವರು ಪಾವತಿಸುವ ಆದಾಯ ತೆ-ರಿಗೆಗೆ ಹೊಂದಾಣಿಕೆಯಾಗದೇ ಇದ್ದಲ್ಲಿ ಆದಾಯ ತೆರಿಗೆ ಇಲಾಖೆ ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳುವರೆಂದು ತಿಳಿಸಬೇಕು. ಯಾರೆಲ್ಲ ಚಿನ್ನಾಭರಣ ಹಾಗೂ ವಜ್ರಾಭರಣಗಳನ್ನು 7 ಹಾಗೂ 8 ತಾರೀಖಿನಂದು ರಾತ್ರಿ 8 ಗಂಟೆಯ ಮೊದಲು ಖರೀದಿಸಿದ್ದರೆಂಬುದನ್ನು ವಿಚಾರಿಸಬೇಕೆಂದು ನಿಮಗೆ ವಿನಂತಿ. ದೊಡ್ಡ ಕುಳಗಳು ದೊಡ್ಡ ಮೌಲ್ಯದ ಚಿನ್ನ ಹಾಗೂ ವಜ್ರಾಭರಣಗಳನ್ನು ಏಕೆ ಖರೀದಿಸುವಂತಾಯಿತು ಎಂದು ಜನರಿಗೆ ಆಗ ತಿಳಿಯುತ್ತದೆ.

ಮೇಲೆ ಕೇಳಲಾದ ಮಾಹಿತಿಯನ್ನು ಭಾರತ ಸರಕಾದ ಅಧಿಕೃತ ವೆಬ್‌ಸೈಟಿನಲ್ಲಿ ಶೇರ್ ಮಾಡುವಷ್ಟು ಉದಾರಿ ನೀವಾಗಬೇಕು. ಹಾಗೆ ಮಾಡದಲ್ಲಿ ನೋಟು ರದ್ದತಿಯು ದೇಶದ ಹಿತಾಸಕ್ತಿಗಾಗಿ ಮಾಡಲಾಗಿದೆಯೇ ಅಥವಾ ನೇರವಾಗಿ ನಿಮಗೆ, ನಿಮ್ಮ ಪ್ರೀತಿ ಪಾತ್ರರಿಗೆ ಹಾಗೂ ನಿಮ್ಮ ಪಕ್ಷ ಕಾರ್ಯಕರ್ತರಿಗೆ ಸಹಾಯ ಮಾಡಲು ಮಾಡಲಾಗಿದೆಯೇ ಎಂಬುದು ಸ್ಪಷ್ಟವಾಗುತ್ತದೆ.

ನಿಮ್ಮವನೇ ಆದ

ಯತೀನ್ ಓಝಾ

ಈ ವಾರ ಚರಿತ್ರೆಯಲ್ಲಿ

24 ನವೆಂಬರ್ 1859

"ಜೀವಿಗಳ ಉಗಮ" ಪುಸ್ತಕ ಪ್ರಕಟ

ಜೀವಶಾಸ್ತ್ರದಲ್ಲಿ ಕ್ರಾಂತಿಯನ್ನೇ ತಂದ ಚಾರ್ಲ್ಸ್ ಡಾರ್ವಿನ್ ಅವರ "ಜೀವಿಗಳ ಉಗಮ" ಗ್ರಂಥ ಈ ದಿನ ಪ್ರಕಟವಾಯಿತು. ಡಾರ್ವಿನ್ ಅವರ ಹಲವಾರು ವರ್ಷಗಳ ಸಂಶೋಧನೆಯ ಫಲವಾಗಿ ಜೀವಸಾಸ್ತ್ರದಲ್ಲಿ ವಿಕಾಸವಾದದ ಸಿದ್ಧಾಂತವನ್ನು ಮಂಡಿಸಿದ ಪ್ರಮುಖ ಗ್ರಂಥ. 150 ವರ್ಷಗಳ ನಂತರವೂ ಕೆಲವು ವಿವರಗಳು, ಪುರಾವೆಗಳಲ್ಲಿ ಬದಲಾವಣೆಗಳಾಗಿದ್ದರೂ, ಕಾಲದ ಪರೀಕ್ಷೆ ಗೆದ್ದ ಸಿದ್ಧಾಂತ. ಜೀವಶಾಸ್ತ್ರದಲ್ಲಿ ಮಾತ್ರವಲ್ಲ. ಜೀವಜಗತ್ತು ಹೇಗೆ ಉಗಮವಾಗಿ ವಿಕಾಸವಾಯಿತು ಎಂದು ನಿರೂಪಿಸುವ ಮೂಲಕ ಜಗತ್ತನ್ನು ಸೃಷ್ಟಿಸಿದ್ದು ದೇವರು ಎಂಬ ಧಾರ್ಮಿಕ ನಂಬಿಕೆಗಳಿಗೆ ಬಲವಾದ ಏಟು ಕೊಟ್ಟ ಗ್ರಂಥ. ಈಗಲೂ ಡಾರ್ವಿನ್ ಅವರ "ಜೀವಿಗಳ ಉಗಮ"ವನ್ನು ಕಲಿಸಬಾರದು ಎಂದು ಉಗ್ರ ಧಾರ್ಮಿಕ ಸಂಘಟನೆಗಳು ಅಮೆರಿಕದಲ್ಲೂ ಒತ್ತಾಯಿಸುವುದು ಅದರ ಪ್ರಭಾವವನ್ನು ಸೂಚಿಸುತ್ತದೆ.



ವಾಹನ ನಾಪತ್ತೆ, ಬರಿಯ ಚಾಲಕನ ಕೈಚಳಕವೇ?

ಬೆಂಗಳೂರಿನ ಕೆಂಪೇಗೌಡ ರಸ್ತೆಯಿಂದ ಬುಧವಾರ ನಾಪತ್ತೆಯಾಗಿದ್ದ ಎಟಿಎಂ ಘಟಕಗಳಿಗೆ ಹಣ ತುಂಬುವ ವಾಹನ ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು ಬಳಿ ಪತ್ತೆಯಾಗಿದೆ. ಎಟಿಎಂ ಘಟಕಗಳಿಗೆ ಹಣ ತುಂಬಲು ತೆಗೆದುಕೊಂಡು ಹೋಗುತ್ತಿದ್ದ ರೂ. 1.37 ಕೋಟಿ ನಗದು ಇದ್ದ ವಾಹನದ ಜತೆಗೆ ಚಾಲಕ ಡಾಮಿನಿಕ್ ಜಾಯ್ ಪರಾರಿಯಾಗಿದ್ದ. ರೂ. 44 ಲಕ್ಷ ನಗದು ಮತ್ತು ಬಂದೂಕನ್ನು ವಾಹನದಲ್ಲೇ ಬಿಟ್ಟು ಉಳಿದ ರೂ. 93 ಲಕ್ಷ ಹಣದೊಂದಿಗೆ ಡಾಮಿನಿಕ್ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. 'ಸೆಕ್ಯೂರ್ ಟ್ರಾನ್ಸಿಟ್' ಏಜೆನ್ಸಿಯ ಚಾಲಕನಾಗಿದ್ದ ಡಾಮಿನಿಕ್ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಇದು ಬರಿಯ ಚಾಲಕನ ಚಾಲಾಕಿತನ ಮಾತ್ರ ಇರಲಿಕ್ಕಿಲ್ಲ. ಇದರ ಹಿಂದೆ ಕೆಲವು ಪ್ರಭಾವಿಗಳ ಕೈಚಳಕವೂ ಇರಬಹುದು. ಬಹುಶಃ ತನಿಖೆಯ ನಂತರ ತಿಳಿಯಬಹುದು. ನಿಗೂಢವಾಗಿಯೇ ಮುಚ್ಚಿ ಹೋಗಬಹುದು ಕೂಡಾ!

ಹೇಳಿದ್ದು 1.78 ಲಕ್ಷ ಕೋಟಿ ರೂ. ಬಂದಿದ್ದು ಕೇವಲ 3261 ಕೋಟಿ ರೂ.

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ (ಇನ್ವೆಸ್ಟ್ ಕರ್ನಾಟಕ) ರೂ. 1,77,764 ಕೋಟಿ ಹೂಡಿಕೆಯ 1,080 ಕೈಗಾರಿಕೆಗಳ ಪ್ರಸ್ತಾವನೆಗಳು ಬಂದಿವೆಯಂತೆ. ಶಾಸಕ ನಾರಾಯಣ ಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ, ಈ ಪೈಕಿ 122 ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಒಡಂಬಡಿಕೆಗೆ (ಎಂಒಯು) ಸಹಿ ಹಾಕಲಾಗಿದೆ.

ಆದರೆ ಅದೇ ಉತ್ತರದ ಪ್ರಕಾರ, ಈವರೆಗೆ ಕೇವಲ 54 ಕೈಗಾರಿಕಾ ಘಟಕಗಳು ಆರಂಭಗೊಂಡಿದ್ದು ಅವುಗಳಿಂದ ರೂ. 3261 ಕೋಟಿ ಬಂಡವಾಳ ಹೂಡಿಕೆಯಾಗಿದೆ ಅಷ್ಟೇ.

ಪ್ರಭಾವಿಗಳಿಂದ ಅಪಾರ ಹಣ ವಿನಿಮಯ

ಬೆಂಗಳೂರು ನಗರದ ಹಲವು ಪ್ರಭಾವಿ ರಾಜಕಾರಣಿಗಳು ಲಕ್ಷಗಟ್ಟಲೆ ಹಳೆಯ ನೋಟುಗಳನ್ನು ಕೊಟ್ಟು ಹೊಸ ನೋಟುಗಳನ್ನು ಪಡೆಯಲು ತಮ್ಮ ಬೆಂಬಲಿಗರು ಮತ್ತು ನಿಷ್ಠಾವಂತರನ್ನು ಬಳಕೆ ಮಾಡುತ್ತಿದ್ದಾರೆ.

ತಮ್ಮ ಬಡಾವಣೆಗಳಲ್ಲಿರುವ ಬ್ಯಾಂಕು ಮತ್ತು ಅಂಚೆ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧಿಕಾರಿಗಳಿಗೆ ಮೊದಲೇ ದೂರವಾಣಿ ಮೂಲಕ ತಿಳಿಸಿ ಬೆಂಬಲಿಗರು ಮತ್ತು ಹಿಂಬಾಲಕರನ್ನು ಹಣ ವಿನಿಮಯಕ್ಕೆ ಕಳುಹಿಸುತ್ತಿದ್ದಾರೆ. ಪ್ರಭಾವಿಗಳು ತಮ್ಮ ಬೆಂಬಲಿಗರು ಮತ್ತು ನಿಷ್ಠಾವಂತರನ್ನು ಕಳುಹಿಸುವ ಮೊದಲೇ ಹಣ ವಿನಿಮಯಕ್ಕೆ ಇರುವ ಅರ್ಜಿಯನ್ನು ಭರ್ತಿ ಮಾಡಿಸಿ, ಸೂಕ್ತ ಗುರುತಿನ ಚೀಟಿಗಳನ್ನು ನೀಡುತ್ತಿದ್ದಾರೆ ಎಂದು ವರದಿಗಳು ಹೇಳಿವೆ.

ಬಹುತೇಕ ಬಡಾವಣೆಗಳಲ್ಲಿ ಕಾರ್ಪೊರೇಟರ್‌ಗಳು, ಶಾಸಕರು, ರಿಯಲ್ ಎಸ್ಟೇಟ್ ಉದ್ಯಮಿಗಳು ಹಣ ವಿನಿಮಯಕ್ಕೆ ಪರ್ಯಾಯ ಹಾದಿ ಹಿಡಿದಿದ್ದಾರೆ.

ಅಂಚೆ ಕಚೇರಿಗಳಲ್ಲಿ ಇಲಾಖೆಯ ಪೋಸ್ಟುಮನ್ನುಗಳು ಅಥವಾ ಇತರೆ ಸಿಬ್ಬಂದಿ ಮೂಲಕ ಅಧಿಕ ಪ್ರಮಾಣದ ಹಣವನ್ನು ಬದಲಿಸುವ ಕಾರ್ಯ ನಿರಾತಂಕವಾಗಿ ನಡೆದಿದೆ ಎಂದು ಬ್ಯಾಂಕ್ ಮತ್ತು ಅಂಚೆ ಇಲಾಖೆ ಮೂಲಗಳು ಖಚಿತಪಡಿಸಿವೆ.

ಇದೇ ರೀತಿ ಕೆ.ಎಸ್.ಆರ್.ಟಿ.ಸಿ. ಬಸ್ ಕಂಡಕ್ಟರುಗಳ ಮೂಲಕವೂ ನೋಟು ಬದಲಿಸುವ ಕೆಲಸ ನಡೆದಿದೆ ಎಂದು ವರದಿಯಾಗಿವೆ.

ನಗರದಲ್ಲಿ ನೋಟುಗಳ ಬದಲಾವಣೆಯ ಹೊಸ ಕಾಳದಂಧೆಯೇ ಹುಟ್ಟಿಕೊಂಡಿದೆ. ಕೋಟಿಗಟ್ಟಲೆ ಹಣವನ್ನೂ ಯಾವುದೇ ತೊಂದರೆಯಿಲ್ಲದೆ ಹೊಸ ನೋಟುಗಳಾಗಿ ಪರಿವರ್ತಿಸುವ ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರಂತೆ. ಡಿಸ್ಕೌಂಟು ರೇಟು ಶೇ. 30 ರಿಂದ 50ರ ವರೆಗೆ ಇದೆ ಯಂತೆ. ಹಲವು ಚಾರ್ಟರ್ಡ್ ಅಕೌಂಟೆಂಟುಗಳೂ ಈ ಕೆಲಸ ಮಾಡಿಕೊಡುತ್ತಿದ್ದಾರೆ ಎಂದು ವರದಿಗಳು ಹೇಳುತ್ತಿವೆ.

ಇದು ಕಪ್ಪು ಹಣದ ಮೇಲೆ ಯುದ್ಧದ ನಿಜವಾದ ಮುಖ. ಬಂಡವಾಳಶಾಹಿ ಪದ್ಧತಿಯಲ್ಲಿ ಅನಿರೀಕ್ಷಿತ ಬೆಳವಣಿಗೆಯೇನಲ್ಲ. ಇದು ಬೆಂಗಳೂರಿಗೆ ಸೀಮಿತವಾದದ್ದೂ ಅಲ್ಲ. ದೇಶದ ರಾಜ್ಯದ ಹಲವು ನಗರಗಳಲ್ಲಿ ನಡೆಯುತ್ತಿದೆ ಎನ್ನಲಾಗಿದೆ.

ರೈತರ ಆತ್ಮಹತ್ಯೆ – ಪರಿಹಾರಕ್ಕೆ ಮೀಸಲಿಟ್ಟಿದ್ದ ರೂ. 68 ಲಕ್ಷ ವಾಪಸ್: ಸಿಎಜಿ ವರದಿ

ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಪರಿಹಾರ ನೀಡಲು ಮೀಸಲಿಟ್ಟ ರೂ. 67.90 ಲಕ್ಷವನ್ನು ರಾಜ್ಯ ಸರ್ಕಾರ ಬಳಕೆ ಮಾಡದೆ ವಾಪಸ್ ಮಾಡಿರುವ ಅಚ್ಚರಿಯ ಸಂಗತಿಯನ್ನು ಮಹಾಲೇಖಪಾಲ (ಸಿಎಜಿ) ವರದಿ ಪತ್ತೆ ಹಚ್ಚಿದೆ.

ರಾಜ್ಯ ಸರ್ಕಾರದ '2015– 16ರ ಧನ ವಿನಿಯೋಗ ಮಸೂದೆ' ಮೇಲಿನ ಮಹಾ ಲೇಖಪಾಲರ (ಸಿಎಜಿ) ವರದಿಯನ್ನು ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದರು.

2014– 15ನೇ ಸಾಲಿನಲ್ಲಿ ರೈತರ ಕಲ್ಯಾಣ ಮತ್ತಿತರ ಯೋಜನೆಗಳಿಗೆ ಬಜೆಟ್ ಮತ್ತು ಪೂರಕ ಅಂದಾಜಿನಲ್ಲಿ ಅನುಮೋದನೆ ಪಡೆಯಲಾಗಿತ್ತು. ಈ ಹಣವನ್ನು ಖರ್ಚು ಮಾಡದೆ ಹಿಂತಿರುಗಿಸಲಾಗಿದೆ.

ಕೇಂದ್ರ ಸರ್ಕಾರ ನೀಡಿದ ಅನುದಾನ ಬಳಸದೇ ಉಳಿತಾಯ ಅಥವಾ ಮರು ಸಂದಾಯ ಮಾಡಿರುವುದಕ್ಕೆ ಸರ್ಕಾರ ಕಾರಣವನ್ನೇ ನೀಡಿಲ್ಲ ಎಂದೂ ಸಿಎಜಿ ವರದಿ ಹೇಳಿದೆ.

ಇದು ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಒದಗಿಸುವಲ್ಲಿ ಸರಕಾರದ ಕಾಳಜಿ ಮತ್ತು ಮುತುವರ್ಜಿ ?!

ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ!

ಅದ್ದೂರಿ ಮದುವೆ ಮಾಡಿ ದೇಶದಾದ್ಯಂತ ಗಮನ ಸೆಳೆದು, ಮಗಳನ್ನು ಬೀಗರ ಮನೆಗೆ ಕಳುಹಿಸಿ ಬರುವಷ್ಟರಲ್ಲಿಯೇ ಗಣಿ ಉದ್ಯಮಿ ಗಾಲಿ ಜನಾರ್ದನ ರೆಡ್ಡಿ ಅವರ ಮನೆ ಹಾಗೂ ಕಚೇರಿಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಅವರು ಬಳ್ಳಾರಿಗೆ ಬರುವ ಮುಂಚೆಯೇ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಗಣೇಶ್ ನಗರದಲ್ಲಿರುವ ಅವರ ಮನೆ, ಅವರ ಒಡೆತನದ ಓಬಳಾಪುರಂ ಮೈನಿಂಗ್ ಕಂಪೆನಿ (ಓಎಂಸಿ) ಹಾಗೂ ಅಸೋಸಿಯೇಟೆಡ್ ಮೈನಿಂಗ್ ಕಂಪೆನಿ (ಎಎಂಸಿ) ಕಚೇರಿ ಪ್ರವೇಶಿಸಿದ್ದರು.

ಸಂಜೆ 5.30ಕ್ಕೆ ರೆಡ್ಡಿ ಅವರ ಮನೆಗೆ ತೆರಳಿ, ಮದುವೆಯ ಖರ್ಚು–ವೆಚ್ಚಕ್ಕೆ ಸಂಬಂಧಿಸಿದಂತೆ ಇದೇ 25ರ ಒಳಗೆ ಬೆಂಗಳೂರಿನ ಆದಾಯ ತೆ–ರಿಗೆ ಇಲಾಖೆಯ ತನಿಖಾ ವಿಭಾಗಕ್ಕೆ ಮಾಹಿತಿ ಕೊಡುವಂತೆ ಸೂಚಿಸಿ ಅಲ್ಲಿಂದ ನಿರ್ಗಮಿಸಿದರು ಎಂದು ತಿಳಿದುಬಂದಿದೆ.

ರೆಡ್ಡಿ ಅವರ ಪುತ್ರಿಯ ಈ ಅದ್ದೂರಿ ಮದುವೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಬೇಕೆಂದು ಬಳ್ಳಾರಿ ಮೂಲದ ವಕೀಲ ನರಸಿಂಹಮೂರ್ತಿ ಆದಾಯ ತೆರಿಗೆ ಇಲಾಖೆಗೆ ಇತ್ತೀಚೆಗೆ ದೂರು ನೀಡಿದ್ದರಿಂದ ಈ ದಾಳಿ ನಡೆದಿದೆ ಎಂದು ತಿಳಿದು ಬಂದಿದೆ. ಮದುವೆಗೆ ಆದ ಖರ್ಚು–ವೆಚ್ಚದ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಗಣಿ ಉದ್ಯಮಿ ಟಪಾಲ್ ಗಣೇಶ್ ಕೂಡ ಇತ್ತೀಚೆಗೆ ಬಳ್ಳಾರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದ್ದರು.

ತೆರಿಗೆ ಅಧಿಕಾರಿಗಳು ಮದುವೆಯ ಅದ್ದೂರಿ ಖರ್ಚಿನ ವಿವರಗಳ ಬಗ್ಗೆ ದೊಡ್ಡ ಪ್ರಶ್ನಾವಳಿಯನ್ನು ಕೊಟ್ಟಿದ್ದಾರಂತೆ. ಇವೆಲ್ಲಾ ನಿರ್ದಿಷ್ಟ ದೂರುಗಳ ನಂತರವಷ್ಟೇ ನಡೆಯಿತು. ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ, ಹಾಗೆ! ಆದರೆ ಶ್ರೀಸಾಮಾನ್ಯ ಈ ಪ್ರಶ್ನೆಗಳನ್ನು ಮದುವೆಯ ಮೊದಲೇ ಎದುರಿಸಬೇಕಾಗಿದೆ. ಅಷ್ಟೇ ವ್ಯತ್ಯಾಸ. ಮದುವೆಗೆ 2.5 ಲಕ್ಷ ಪಡೆಯಲು ಷರತ್ತುಗಳ ಪಟ್ಟಿ ನೋಡಿದರೆ ಯಾರಿಗೂ ಅದು ಸಿಗುವಂತೆ ಕಾಣುತ್ತಿಲ್ಲ.

ಪೊಲೀಸರ ಮೂಗಿಗೆ ತುಪ್ಪ ಸವರುವ ಹುನ್ನಾರ

'ಕೆಳಹಂತದ ಪೊಲೀಸ್ ಸಿಬ್ಬಂದಿಯ ವೇತನ ಪರಿಷ್ಕರಣೆ ಮಾಡುವ ಬದಲು ಭತ್ಯೆ ಹೆಚ್ಚಳದ ಮೂಲಕ ಪೊಲೀಸರ ಮೂಗಿಗೆ ತುಪ್ಪ ಸವರುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ.' ಅಖಿಲ ಕರ್ನಾಟಕ ಪೊಲೀಸ್ ಮಹಾ ಸಂಘದ ಅಧ್ಯಕ್ಷ ವಿ. ಶಶಿಧರ್ ಅವರ ಆರೋಪವಿದು.

'ಶೇ 30ರಿಂದ 35ರಷ್ಟು ವೇತನ ಹೆಚ್ಚಳ ಮಾಡಬೇಕೆಂಬುದು ಪೊಲೀಸ್ ಸಿಬ್ಬಂದಿಯ ಪ್ರಮುಖ ಬೇಡಿಕೆಯಾಗಿತ್ತು. ಇದು ಈಡೇರಿದ್ದಿದ್ದರೆ ರೂ.8–12 ಸಾವಿರ ವೇತನ ಹೆಚ್ಚಳವಾಗುತ್ತಿತ್ತು. ಆದರೆ, ಭತ್ಯೆ ಹೆಚ್ಚಳದ ಮೂಲಕ ಕಣ್ಣೊರೆಸುವ ತಂತ್ರವನ್ನು ಅನುಸರಿಸಲಾಗಿದೆ' ಎಂದು ಅವರು ದೂರಿದ್ದಾರೆ.

'ಮುಂದಿನ ವರ್ಷ ವೇತನ ಆಯೋಗ ರಚನೆಯಾಗಲಿದ್ದು, ಅದರ ಶಿಫಾರಸು ಅನ್ವಯ ಪೊಲೀಸ್ ಸೇರಿ ಎಲ್ಲ ಇಲಾಖೆಗಳ ಸಿಬ್ಬಂದಿಯ ವೇತನ ಪರಿಷ್ಕರಣೆ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಹೇಳಿಕೆ ನೀಡಿದ್ದಾ–ರೆ. ಆದರೆ, ವಿವಿಧ ಇಲಾಖೆಗಳ ನೌಕರರಿಗೂ ಪೊಲೀಸರಿಗೂ ವ್ಯತ್ಯಾಸವಿದೆ. ಪೊಲೀಸರಿಗೆ ಕಾರ್ಯದೊತ್ತಡ ಹೆಚ್ಚಿದ್ದು, ಪ್ರತಿದಿನ ಸರಾಸರಿ 13–14 ಗಂಟೆಗಳವರೆಗೆ ಕೆಲಸ ಮಾಡುತ್ತಾರೆ' ಎಂದು ಹೇಳಿದರು.

'ಈ ಹಿಂದೆ ವಾರದ ರಜೆಯ ದಿನದಂದು ಕೆಲಸ ಮಾಡುತ್ತಿದ್ದ ಪೊಲೀಸರಿಗೆ ರಜೆ ಭತ್ಯೆ ರೂ. 400 ನೀಡಲಾಗುತ್ತಿತ್ತು. ಆದರೆ, ಪೊಲೀಸ್ ಸಿಬ್ಬಂದಿಗೆ ಕಡ್ಡಾಯವಾಗಿ ವಾರದ ರಜೆ ನೀಡಬೇಕು ಎಂದು ಸರ್ಕಾರ ಆದೇಶ ಹೊರಡಿಸಿತ್ತು. ಹೀಗಾಗಿ ರಜೆ ಭತ್ಯೆಯನ್ನು ನೀಡುತ್ತಿಲ್ಲ. ಆದರೆ, ರೈತರ ಪ್ರತಿಭಟನೆ, ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ, ಕಾವೇರಿ ಗಲಾಟೆಯಿಂದಾಗಿ ಪೊಲೀಸರಿಗೆ ಸರಿಯಾಗಿ ವಾರದ ರಜೆ ನೀಡಿಲ್ಲ. ವಾರದ ರಜೆಯೂ ಇಲ್ಲ, ಭತ್ಯೆಯೂ ಇಲ್ಲದಂತಾಗಿದೆ' ಎಂದರು. 'ಮಹಾರಾಷ್ಟ್ರದಲ್ಲಿ ವಾರದ ರಜೆಯ ದಿನದಂದು ಕೆಲಸ ಮಾಡಿದ ಸಿಬ್ಬಂದಿಗೆ ಒಂದು ದಿನದ ಸಂಬಳ ಹೆಚ್ಚುವರಿಯಾಗಿ ನೀಡಲಾಗುತ್ತಿದೆ. ಹರಿಯಾಣದಲ್ಲಿ ದಿನಕ್ಕೆ 8 ಗಂಟೆ ಕೆಲಸ ಮಾಡಬೇಕಿದ್ದು, ಹೆಚ್ಚುವರಿ ಕೆಲಸ ಮಾಡಿದರೆ ಅವರಿಗೆ ಓ.ಟಿ. ನೀಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಪೊಲೀಸರ ಸಾಮೂಹಿಕ ರಜೆ ನಿಲ್ಲಿಸಲು ಕೊಟ್ಟ ಆಶ್ವಾಸನೆಗಳನ್ನು ಸರಕಾರ ಈಡೇರಿಸಿಲ್ಲ ಎಂಬುದು ಸ್ಪಷ್ಟ. ಸಂಘಟಿತ ಯೂನಿಯನ್ ಇರುವ ಕಾರ್ಮಿಕರನ್ನೇ ಯಾಮಾರಿಸುವ ಸರಕಾರ ಪೊಲೀಸರನ್ನು ಬಿಟ್ಟೀತೇ?

ಪಡಿತರ ವಿತರಣೆಗೆ ಕೂಪನ್ : ಸರಕಾರಕ್ಕೆ ಹೈಕೋರ್ಟು ನೋಟೀಸ್

'ನ್ಯಾಯಬೆಲೆ ಅಂಗಡಿಗಳಲ್ಲಿ ಟೋಕನ್ ಇದ್ದರೆ ಮಾತ್ರ ಪಡಿತರ ಹಾಗೂ ಸೀಮೆ ಎಣ್ಣೆ ಕೊಡಬೇಕು' ಎಂಬ ಪದ್ಧತಿ ರದ್ದುಗೊಳಿಸುವಂತೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಈ ಸಂಬಂಧ ಶಿವಮೊಗ್ಗ ಬೇಡರಕೇರಿಯ ರಾಜೇಶ್ವರಿ ಹಾಗೂ ಇತರೆ ಎಂಟು ಜನರು ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಎಸ್.ಕೆ.ಮುಖರ್ಜಿ ಹಾಗೂ ನ್ಯಾ.ಆರ್.ಬಿ.ಬೂದಿಹಾಳ್ ಅವರಿದ್ದ ವಿಭಾಗೀಯ ಪೀಠವು ವಿಚಾರಣೆ ನಡೆಸುತ್ತಿದೆ.

ಈ ವೇಳೆ ಅರ್ಜಿದಾರರ ಪರ ವಕೀಲ ಟಿ.ಬಸವರಾಜ ಅವರು, 'ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸಲಾಗುವ ಪಡಿತರ ವ್ಯವಸ್ಥೆಯಲ್ಲಿ ಟೋಕನ್ ಪದ್ಧತಿ ಜಾರಿಗೆ ತಂದಿರುವುದು ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದೆ' ಎಂದು ಆಕ್ಷೇಪಿಸಿದರು.

'ಕೂಲಿ ಕಾರ್ಮಿಕರು ತಮ್ಮ ಕೆಲಸ ಬಿಟ್ಟು ಪಡಿತರ ಅಂಗಡಿಗಳ ಮುಂದೆ ಸರದಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಬಂದಿದೆ. ಸರ್ವರ್ ಬ್ಯುಸಿ ಇದ್ದರೆ ಆ ದಿನ ಟೋಕನ್ ಕೂಡಾ ಸಿಗುವುದಿಲ್ಲ. ಟೋಕನ್ ಅನ್ನು ಪುಕ್ಕಟೆ ಕೊಡಲಾಗುತ್ತದೆ ಎಂದು ಸರ್ಕಾರ ಪ್ರಚಾರ ಮಾಡಿದೆ. ಆದರೆ ರೂ.30 ನೀಡದೆ ಟೋಕನ್ ಸಿಗುತ್ತಿಲ್ಲ' ಎಂದು ದೂರಿದರು.

'ಒಂದು ಕಾರ್ಡಿನಲ್ಲಿ ಐದು ಜನ ಸದಸ್ಯರಿದ್ದು ಅವರಲ್ಲಿ ಮೂವರಿಗೆ ಆಧಾರ್ ಕಾರ್ಡ್ ಹೊಂದಿದ್ದರೆ ಅವರಿಗೆ ಮಾತ್ರ ಪಡಿತರ ನೀಡಲಾಗುತ್ತದೆ. ಯುನಿಟ್ ಪದ್ಧತಿ ಜಾರಿಯಲ್ಲಿರುವ ಕಾರಣ ಒಂದು ಯುನಿಟ್ಗೆ 5 ಕೆ.ಜಿಯಂತೆ ಪಡಿತರ ನೀಡುತ್ತಾರೆ. ಇನ್ನುಳಿದ ಕುಟುಂಬದ ಸದಸ್ಯರು ಇದರಿಂದ ವಂಚಿತರಾಗುತ್ತಿದ್ದಾರೆ. ಇದು ಬಡವರಿಗೆ ಸಾಕಷ್ಟು ತೊಂದರೆ ಉಂಟು ಮಾಡಿದೆ' ಎಂದು ಬಸವರಾಜ ವಿವರಿಸಿದರು.

ಅರ್ಜಿದಾರರ ವಾದ ಆಲಿಸಿದ ಪೀಠವು, ಸರ್ಕಾರದ ಪರ ಹಾಜರಿದ್ದ ವೆಂಕಟೇಶ್ ಎಚ್.ದೊಡ್ಡೇರಿ ಅವರಿಗೆ 10 ದಿನಗಳಲ್ಲಿ ಆಕ್ಷೇಪಣೆ ಸಲ್ಲಿಸಲು ಸೂಚಿಸಿ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಲು ಆದೇಶಿಸಿತು.

ಆಧಾರ ಕಾರ್ಡ್ ಆಧಾರಿತ ಕೂಪನ್ ಪದ್ಧತಿಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಆಗಸ್ಟ್ ತಿಂಗಳಿನಿಂದ ಜಾರಿಗೆ ತಂದಿದೆ.

ಈ ಅವೈಜ್ಞಾನಿಕ ಅತಾರ್ಕಿಕ ಕೂಪನ್ ಪದ್ಧತಿಯನ್ನು ಹೈ ಕೋರ್ಟು ರದ್ದು ಮಾಡುತ್ತದೆ ಎಂದು ಆಶಿಸೋಣ!

ನಮ್ಮ ಚುರು-ಟ್ವೀಟ್

@SitaramYechury

ಪ್ರಧಾನಿ ಅನಾಣ್ಯೀಕರಣದ ಘೋಷಣೆಯ ಹಿಂದೆ 10 ತಿಂಗಳುಗಳ ತಯಾರಿ ಇದೆ ಎಂದು ಹೇಳಿಕೊಂಡಿದ್ದಾರೆ. 16 ದಿನಗಳಲ್ಲಿ 32 ತಿದ್ದುಪಡಿಗಳು ಅವರ ಯೋಜನೆ ಮತ್ತು ಆಡಳಿತಕ್ಕೆ ಕನ್ನಡಿ ಹಿಡಿದಿವೆ.

– ಸೀತಾರಾಂ ಯೆಚುರಿ


ಸೂಪರ್ ಶ್ರೀಮಂತರಿಗೆ ಬಂದೇ ಬಂದಿದೆ ಅತ್ಯಂತ ಒಳ್ಳೆಯ ದಿನಗಳು!

ಆರ್ಥಿಕ ಅಸಮಾನತೆಯ ಸೂಚ್ಯಂಕದಂತಿರುವ ಕ್ರೆಡಿಟ್ ಸ್ಯೂಸ್ಸೆ ಸಂಸ್ಥೆಯ ಇತ್ತೀಚಿನ ವರದಿ 'ಅಚ್ಛೇ ದಿನ್' ಆಳ್ವಿಕೆಯ ನಿಜಸ್ವರೂಪವನ್ನು ಒಪ್ಪಲು ನಿರಾಕರಿಸುವವರಿಗೆ ತಲೆಗೆ ಹೊಡೆದು ಹೇಳುವಂತಹ ಅಂಕಿ–ಅಂಶಗಳನ್ನು ಪ್ರಕಟಿಸಿದೆ.

ದೇಶದ 1% ಸೂಪರ್ ಶ್ರೀಮಂತರು ಈಗ ದೇಶದ ಒಟ್ಟು ಸಂಪತ್ತಿನ 58.4%ವನ್ನು ತಮ್ಮದಾಗಿಸಿಕೊಂಡಿದ್ದಾರೆ. ಕಳೆದ ವರ್ಷ ಇದು 53% ಇತ್ತು. ಮೋದಿಯವರು ಅಧಿಕಾರಕ್ಕೆ ಬರುವ ವೇಳೆಗೆ 2014ರಲ್ಲಿ ಅದು 49% ಇತ್ತು.

ನಿಜ, ಅವರ ಒಳ್ಳೆಯ ದಿನಗಳು 2014ರಿಂದಲೇ ಆರಂಭವಾದುದಲ್ಲ. ಎಡಪಕ್ಷಗಳು ಆಗಲೇ ಎಚ್ಚರಿಸಿದಂತೆ ತೊಂಭತ್ತರ ದಶಕದಲ್ಲಿ ನವ–ಉದಾರವಾದಿ ಧೋರಣೆಗಳೊಂದಿಗೇ ಆರಂಭವಾಗಿತ್ತು. 2000ನೇ ಇಸ್ವಿಯಲ್ಲಿ 1% ಸೂಪರ್ ಶ್ರೀಮಂತರ ಪಾಲು 36.8%ಇತ್ತು. 2010ರ ವೇಳೆಗೆ ಅದು 40.3% ಕ್ಕೇರಿತು. ಅಂದರೆ ಹತ್ತು ವರ್ಷಗಳಲ್ಲಿ 3.5% ಏರಿತು.

ಶ್ರೀಮಂತರ ಶ್ರೀಮಂತಿಕೆ ಇನ್ನಷ್ಟು ವೇಗವಾಗಿ ಹೆಚ್ಚುತ್ತಿದೆ!
ಭಾರತದ ಸಂಪತ್ತಿನಲ್ಲಿ ಮೇಲಿನ 1% ಮತ್ತು 10% ಮಂದಿಯ ಪಾಲು




ಯುಪಿಎ–2 ಸರಕಾರದ ಐದು ವರ್ಷಗಳ ಅವಧಿಯಲ್ಲಿ ಅದು 8.7% ಏರಿತು. ಈಗ ಮೋದಿ ಸರಕಾರದ ಎರಡೇ ವರ್ಷಗಳ ಆಳ್ವಿಕೆಯಲ್ಲಿ ಅದು 9.4% ಏರಿಕೆ ದಾಖಲಿಸಿದೆ! ಮೊದಲ ವರ್ಷದಲ್ಲಿ 4% ಏರಿಕೆಯಾದರೆ, ಎರಡನೇ ವರ್ಷದಲ್ಲಿ 5.4% ಏರಿಕೆ. ಎಂತಹ ಒಳ್ಳೆಯ ದಿನಗಳು!

ಮೇಲಿನ 10% ಭಾರತೀಯರ ಸಂಪತ್ತಿನಲ್ಲೂ ಸಹಜವಾಗಿಯೇ ಏರಿಕೆ ದಾಖಲಾಗಿದೆ. ಅವರಲ್ಲಿ ಈ 1% ಕೂಡ ಇರುತ್ತಾರೆ ತಾನೇ?

ಈ 10% ಮಂದಿಯ ಪಾಲು 2010ರಲ್ಲಿ 68.8% ಇತ್ತು. ಈಗ ಅದು 80.7%ಕ್ಕೆ ಏರಿದೆ. ಬಡ 50% ಭಾರತೀಯರ ಪಾಲು ಈಗ ಕೇವಲ 2.1%.

ಭಾರತೀ ಗತ್ಯಂತ ಅಸಮಾನತೆಯ ದೇಶಗಳಲ್ಲಿ ಪ್ರಮುಖ ಸ್ಥಾನ ಪಡೆ–ಯುತ್ತಿದೆ!



ಹೈಕೋರ್ಟ್ ನ್ಯಾಯಾಧೀಶರುಗಳ ನೇಮಕಕ್ಕೆ 77ರಲ್ಲಿ 43 ಹೆಸರುಗಳು ಸಲ್ಲದ 'ಗರಿಷ್ಟ ಆಳ್ವಿಕೆ'!

ಹೈಕೋರ್ಟ್ ನ್ಯಾಯಾಧೀಶರ ನೇಮಕದಲ್ಲಿ ಮತ್ತೆ 'ಒಳ್ಳೆಯ ದಿನ'ಗಳ ಸರಕಾರದ 'ಗರಿಷ್ಟ ಆಳ್ವಿಕೆ'ಯ ಬಡಾಯಿಯ ಮೇಲೆ ಪ್ರಶ್ನೆ ಚಿಹ್ನೆ ಇಟ್ಟಿದೆ.

ನ್ಯಾಯಾಧೀಶರುಗಳ ನೇಮಕಕ್ಕಾಗಿ ಇರುವ ಕೊಲೇಜಿಯಂ 77 ಹೆಸರುಗಳನ್ನು ಸರಕಾರಕ್ಕೆ ಕಳಿಸಿತ್ತು. ಈ ಬಗ್ಗೆ ಸರಕಾರ ನಿರ್ಧಾರ ತಗೊಳ್ಳದೆ ಕೂತಿದೆ ಎಂದು ಮುಖ್ಯ ನ್ಯಾಯಾಧೀಶರು ಬಹಿರಂಗವಾಗಿಯೇ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಮೇಲೆ ಸರಕಾರ ಅವುಗಳಲ್ಲಿ 34 ಹೆಸರುಗಳನ್ನು ಮಂಜೂರು ಮಾಡಿ, 43 ಹೆಸರುಗಳನ್ನು ಬದಲಿಸುವಂತೆ ತಿಳಿಸಿತು.

ಇದನ್ನು ಪರಿಶೀಲಸಿದ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಟಿಎಸ್ ಠಾಕುರ್ ಮತ್ತು ನ್ಯಾಯಮೂರ್ತಿ ಎ ಆರ್ ದವೆ ಯವರಿರುವ ಸುಪ್ರಿಂ ಕೋರ್ಟ್ ಪೀಠ ಇದಕ್ಕೆ ಒಪ್ಪದೆ ಕೊಲೇಜಿಯಂ ಕಳಿಸಿದ ಪಟ್ಟಿಯನ್ನು ಪುನರ್ ಪರಿಶೀಲಿಸಲು ಸರಕಾರಕ್ಕೆ ಕಳಿಸಿದೆ.

ಡಿಸೆಂಬರ್ 24 ರ ಲಕ್ನೌ ರ್‍ಯಾಲಿ ರದ್ದು! 'ನಗದು ಸಮರ'ದ ಪ್ರತಿಧ್ವನಿ?

ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆಗಳು ನಡೆಯಲಿರುವ ಉತ್ತರಪ್ರದೇಶದ ರಾಜಧಾನಿಯಲ್ಲಿ ಡಿಸೆಂಬರ್ 24ರಂದು ಯೋಜಿಸಿದ್ದ ಪ್ರಧಾನ ಮಂತ್ರಿಗಳ ರ್‍ಯಾಲಿಯನ್ನು ರದ್ದು ಮಾಡಲಾಗಿದೆಯೆಂದು ವರದಿಯಾಗಿದೆ. ಪ್ರಧಾನಿಗಳ ಸ್ವಂತ ಸರ್ವೆ ಏನೇ ಹೇಳಲಿ, ನೋಟು ನಿಷೇಧದ ಹಿನ್ನೆಲೆಯಲ್ಲಿ ಸಾಕಷ್ಟು ಜನರನ್ನು ತರಲು ಸಾಧ್ಯವಾಗಲಿಕ್ಕಿಲ್ಲ ಎಂಬ ಭಯದಿಂದ ಹೀಗೆ ಮಾಡಿರಬಹುದೆಂಬ ಊಹಾಪೋಹಗಳು ಎದ್ದಿವೆ.

ಈ ತಿಂಗಳ ಆರಂಭದಿಂದ ಉತ್ತರಪ್ರದೇಶದಲ್ಲಿ ಸಂಚರಿಸುತ್ತಿರುವ ನಾಲ್ಕು 'ಪರಿವರ್ತನಾ ಯಾತ್ರೆ'ಗಳ ಸಮಾಪ್ತಿ ಸಮಾರಂಭವಾಗಿ ಈ 'ಬೃಹತ್ ರ್‍ಯಾಲಿ'ಯನ್ನು ಯೋಜಿಸಲಾಗಿತ್ತು.

ಈ 'ದಿಟ್ಟ ಕ್ರಮ'ಕ್ಕೆ ಬರುತ್ತಿರುವ ಪ್ರತಿಕ್ರಿಯೆಗಳನ್ನು ಕಂಡು ಕಂಗಾಲಾದ ಬಿಜೆಪಿ ಮುಖಂಡತ್ವ ಈ ಮೊದಲು ಸಂಸತ್ ಅಧಿವೇಶನದ ಆರಂಭದಲ್ಲಿ ನಡೆಸುವ ಬಿಜೆಪಿ ಎಂಪಿಗಳ ಸಭೆಯನ್ನು ಎರಡು ಬಾರಿ ರದ್ದು ಮಾಡಿತ್ತು. ಬಿಜೆಪಿ ಎಂಪಿಗಳೇ ಹಲವರು ಈ ಬಗ್ಗೆ ಅದಾಗಲೇ ತಂತಮ್ಮ ಕ್ಷೇತ್ರಗಳಲ್ಲಿ ಅಪಸ್ವರ ವ್ಯಕ್ತಪಡಿಸಿದ ಸುದ್ದಿಗಳ ಹಿನ್ನೆಲೆಯಲ್ಲಿ ಹಾಗೆ ಮಾಡಬೇಕಾಗಿ ಬಂದಿತ್ತು ಎನ್ನಲಾಗಿದೆ.

ಕೊನೆಗೂ ಡಿಸೆಂಬರ್ ರ್‍ಯಾಲಿಯನ್ನು ರದ್ದು ಮಾಡಿದ ಮರುದಿನ ಬಿಜೆಪಿ ಎಂಪಿಗಳ ಸಭೆ ನಡೆಯಿತು, ಈ ವೇಳೆಗೆ ಪ್ರಧಾನಿಗಳ ದಿಟ್ಟ ಕ್ರಮವನ್ನು ಅಭಿನಂದಿಸುವ ಮತ್ತು ಬೆಂಬಲಿಸುವ ಒಂದು ನಿರ್ಣಯವನ್ನು 'ಸರ್ವ ಸಮ್ಮತಿ'ಯಿಂದ ಅಂಗೀಕರಿಸುವಂತೆ ಮಾಡಲು ಬಿಜೆಪಿ ಮುಖಂಡತ್ವಕ್ಕೆ ಸಾಧ್ಯವಾಗಿದೆ ಎನ್ನಲಾಗಿದೆ.

ಕಪ್ಪು ಹಣದ ವಿರುದ್ಧ ನಗದು ಸಮರ ಹೂಡಿರುವವರ ಬಳಿಯೂ ಕಪ್ಪು ನಗದು ಓಡಾಡುತ್ತಿತ್ತೇ?

ನವಂಬರ್ 8 ರಂದು ರಾತ್ರಿ ಎಂಟು ಗಂಟೆಗೆ ಪ್ರಧಾನ ಮಂತ್ರಿಗಳು ನೋಟು ನಿಷೇಧದ ತನ್ನ 'ಐತಿಹಾಸಿಕ' ಪ್ರಕಟಣೆಯನ್ನು ಮಾಡುವಾಗ ದೇಶವನ್ನು ಭ್ರಷ್ಟಾಚಾರದ ಪಿಡುಗಿನಿಂದ ಮುಕ್ತಗೊಳಿಸುವುದಕ್ಕೆ ತಾನು ಕಟಿಬದ್ಧ ಎಂದು ಸಾರುತ್ತಿದ್ದಾಗಲೇ, ರಾಜಧಾನಿಯಲ್ಲೇ ಅವರ ಸುತ್ತಮುತ್ತ ಇರುವ ಕನಿಷ್ಟ ಐದು ಕೇಂದ್ರೀಯ ಏಜೆಂಸಿಗಳು ಅಥವ ಆಯೋಗಗಳು ಈ ಘೋಷಣೆ ಮಾಡಿದವರೇ 55 ಕೋಟಿ ರೂಪಾಯಿಗಳ ಲಂಚ ಸ್ವೀಕರಿಸಿದ್ದಾರೆಂದು ಸೂಚಿಸುವ ಒಂದಿಷ್ಟು ದಸ್ತಾವೇಜುಗಳ ಕಂತೆಗಳ ಮೇಲೆ ಏನೂ ಕ್ರಮ ಕೈಗೊಳ್ಳದೆ ಕೂತಿದ್ದರು (ಬಹುಶಃ ಈಗಲೂ ಕೂತಿ–ದ್ದಾರೆ) ಎಂದು ಪ್ರಖ್ಯಾತ ಆರ್ಥಿಕ ವಿಶ್ಲೇಷಣೆಯ ವಾರಪತ್ರಿಕೆ ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯ ಸಂಪಾದಕರಾದ ಪರೊಂಜಯ್ ಗುಹ ಥಾಕುರ್ತ ಮತ್ತು ಇನ್ನೊಬ್ಬ ಆರ್ಥಿಕ ಅಧ್ಯಯನಕಾರ ಅದ್ವೈತ್‌ರಾವ್ ಪಲೆಪು ನವಂಬರ್ 18ರಂದು ಪ್ರಕಟಿಸಿರುವ ತಮ್ಮ ಜಂಟಿ ಲೇಖನದಲ್ಲಿ ಹೇಳಿದ್ದಾರೆ.

ಈ ವ್ಯವಹಾರ 2012–13 ರಲ್ಲಿ ಅವರು ಗುಜರಾತಿನ ಮುಖ್ಯಮಂತ್ರಿಗಳಾಗಿದ್ದಾಗ ನಡೆದದ್ದು.. ಈ ದಸ್ತಾವೇಜುಗಳು ಬಿರ್ಲಾ ಗುಂಪಿನ 'ಹಿಂದಾಲ್ಕೊ ಇಂಡಸ್ಟ್ರೀಸ್' ಮತ್ತು ಸಹಾರ ಇಂಡಿಯ ಗುಂಪಿನ ಮೇಲೆ ಆದಾಯ ತೆರಿಗೆ ಇಲಾಖೆ ಮತ್ತು ಸಿಬಿಐ 2013–2014ರಲ್ಲಿ ನಡೆಸಿದ ದಾಳಿಗಳಲ್ಲಿ ವಶಪಡಿಸಿಕೊಂಡವುಗಳು.

ಕಳೆದ ಕೆಲವು ತಿಂಗಳಿಂದ ರಾಜಧಾನಿಯಲ್ಲಿ ಸುತ್ತಾಡುತ್ತಿರುವ ಈ ದಾಖಲೆಗಳ ಪ್ರಕಾರ ಸಹಾರ ಇಂಡಿಯಾ ಗುಂಪಿನ ಸ್ಥಾಪಕ ಅಧ್ಯಕ್ಷ ಸುಬ್ರತೊ ರಾಯ್ ಸಹವರ್ತಿಗಳು ಆಗಿನ ಗುಜರಾತ್ ಮುಖ್ಯಮಂತ್ರಿ ಮಾತ್ರವಲ್ಲ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದ ಬಿಜೆಪಿ ಮುಖ್ಯಮಂತ್ರಿಗಳಿಗೆ, ಬಿಜೆಪಿಯ ಕೋಶಾಧಿಕಾರಿಗೆ ಮತ್ತು ಆಗಿನ ದಿಲ್ಲಿಯ ಕಾಂಗ್ರೆಸ್ ಮುಖ್ಯಮಂತ್ರಿಗಳಿಗೆ ದೊಡ್ಡ ಪ್ರಮಾಣದಲ್ಲಿ 'ನಗದು' ಹಣ ಕೊಟ್ಟ ದಾಖಲೆಗಳು ಈ ದಸ್ತಾವೇಜುಗಳಲ್ಲಿ ಇವೆ ಎಂದು ಹೇಳಲಾಗಿದೆ.

ಈ ಕುರಿತು ಮಾಹಿತಿ ಕೇಳಿ ಮೇಲೆ ಹೇಳಿದ ಇಬ್ಬರು ಆರ್ಥಿಕ ವಿಷಯಗಳ ಲೇಖಕರು ಈ ಎಲ್ಲ ವ್ಯಕ್ತಿಗಳಿಗೆ ನವಂಬರ್ 17ರಂದು ಪತ್ರಗಳು ಮತ್ತು ಇ–ಮೇಲ್‌ಗಳನ್ನು ಕಳಿಸಿದ್ದರಂತೆ. ಅವಕ್ಕಿನ್ನೂ ಉತ್ತರ ಬಂದಿಲ್ಲವಂತೆ.

ಈ ದಸ್ತಾವೇಜುಗಳನ್ನು ವಶಪಡಿಸಿಕೊಂಡ ದಾಖಲೆಗೆ ಸಹಿ ಮಾಡಿದ ಆದಾಯ ತೆರಿಗೆ(ತನಿಖೆ) ವಿಭಾಗದ ಉಪ ನಿರ್ದೇಶಕಿ ಅಂಕಿತಾ ಪಾಂಡೆಯವರನ್ನು ಈ ಲೇಖಕರು ಸಂಪರ್ಕಿಸಿದಾಗ, ತಾನು ದೀರ್ಘ ರಜೆಯಲ್ಲಿದ್ದೇನೆ, ಮತ್ತು ಈ ಬಗ್ಗೆ ಟಿಪ್ಪಣಿ ಮಾಡುವ ಅಧಿಕಾರ ತನಗಿಲ್ಲ, ಆದ್ದರಿಂದ ಅದನ್ನು ದೃಢಪಡಿಸುವುದೂ ಇಲ್ಲ, ನಿರಾಕರಿಸುವುದು ಇಲ್ಲ ಎಂದು ಹೇಳಿದ್ದಾರಂತೆ. ಈ ದಸ್ತಾವೇಜುಗಳ ಪ್ರತಿಗಳು ಈಗ ರಾಜಧಾನಿಯಲ್ಲಿ 10–12 ಪತ್ರಕರ್ತರು ಮತ್ತು ಕೆಲವು ಸರಕಾರಿ ಅಧಿಕಾರಿಗಳ ಕೈಗಳಲ್ಲಿವೆ ಎಂದು ಹೇಳಲಾಗಿದೆ.

ಮೋದಿ ಸರಕಾರ ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯ ಅಧ್ಯಕ್ಷರಾಗಿದ್ದ ಕೆ.ವಿ.ಚೌಧರಿಯವರನ್ನು ಅವರು ನಿವೃತ್ತರಾದ ಕೂಡಲೇ ಕೇಂದ್ರೀಯ ಜಾಗೃತಾ ಆಯೋಗ(ಸಿವಿಸಿ)ದ ಮುಖ್ಯಸ್ಥರಾಗಿ ನೇಮಿಸಿತು ಮತ್ತು ಕಪ್ಪು ಹಣದ ಮೂಲಗಳ ವಿಚಾರಣೆ ನಡೆಸುವ ಒಂದು ವಿಶೇಷ ತನಿಖಾ ತಂಡದ ಸಲಹಾಕಾರರಾಗಿಯೂ ನೇಮಿಸಿತು. ಅವರು ಈ ಸ್ಥಾನಕ್ಕೆ ಅರ್ಹರಲ್ಲ ಎಂದು ಇದನ್ನು ಪ್ರಶ್ನಿಸಿ 'ಕಾಮನ್ ಕಾಸ್' ಎಂಬ ಸಂಘಟನೆಯ ಪರವಾಗಿ ಸುಪ್ರಿಂ ಕೋರ್ಟಿನಲ್ಲಿ ಹಾಕಿರುವ ಅರ್ಜಿಯ ಸಂಬಂಧದಲ್ಲಿ ಈ ದಸ್ತಾವೇಜುಗಳು ಸಿಬಿಐ ಮತ್ತು ಆದಾಯ ತೆರಿಗೆ ಹಾಗೂ ಇತರ ಕೆಲವು ಕೇಂದ್ರೀಯ ಆಯೋಗಗಳ ಬಳಿಯಿರುವುದು ತಿಳಿದು ಬಂದಿದೆ, ಹಾಗೂ ಆ ಬಗ್ಗೆ ತನಿಖೆ ನಡೆಸದೆ ಅವನ್ನು ಸಮಾಧಿ ಮಾಡುವ ಪ್ರಯತ್ನ ನಡೆದಿದೆ ಎಂಬ ಗುಮಾನಿ ಈಗ ಬಲವಾಗುತ್ತಿದೆ.

ಬಹುಶಃ ಸುಪ್ರಿಂ ಕೋರ್ಟ್‌ನಲ್ಲಿ ವಿಚಾರಣೆಯ ವೇಳೆಯಲ್ಲಿ ಕಪ್ಪು ಹಣದ ವಿರುದ್ಧ ಸಮರದ ಹೆಸರಲ್ಲಿ ಜನಸಾಮಾನ್ಯರ ಮೇಲೆ 'ನಗದು ಸಮರ' ಹೂಡಿರುವವರ ಪ್ರಾಮಾಣಿಕತೆಯ ಪ್ರಮಾಣ ಬೆಳಕಿಗೆ ಬರಬಹುದು!



ವ್ಯಂಗ್ಯಚಿತ್ರ ಕೃಪೆ: ಕೀರ್ತಿಶ್, ಬಾಮುಲಾಜಿಜಾ.ಕಾಂ


ಸಾಮಾಜಿಕ ಮಾಧ್ಯಮಗಳ ಮೇಲೆ ಸೆಕ್ಷನ್ 144!

ಇದು ಜೋಕಲ್ಲ, ಒಳ್ಳೆಯ ದಿನಗಳ ವಾಸ್ತವ. ಬಿಜೆಪಿ ಆಳ್ವಿಕೆಯ ಮಧ್ಯಪ್ರದೇಶದ ಇಂದೋರಿನ ಜಿಲ್ಲಾ ಮ್ಯಾಜಿಸ್ಟ್ರೇಟ್ ನವಂಬರ್ 14ರಂದು ಪೋಲೀಸ್ ಕಾನೂನಿನ ಸೆಕ್ಷನ್ 144 ರ ಅಡಿಯಲ್ಲಿ ಒಂದು ಆದೇಶ ಹೊರಡಿಸಿದ್ದಾರೆ– ಹಳೆಯ ನೋಟುಗಳ ವಿನಿಮಯ ಕುರಿತ ಯಾವುದೇ 'ಆಕ್ಷೇಪಕಾರಿ' ಮತ್ತು ಉದ್ರೇಕಿಸಬಹುದಾದ' ಟೀಕೆ ಸಾಮಾಜಿಕ ಮಾಧ್ಯಮದಲ್ಲಿ, ಅಂದರೆ ಫೇಸ್‌ಬುಕ್, ಟ್ವಿಟರ್, ವಾಟ್ಸ್ ಆಪ್ ಇತ್ಯಾದಿಗಳಲ್ಲಿ ನಿಷಿದ್ಧ! ಅನಾಣ್ಯೀಕರಿಸಿದ ನಂತರ ಮರುನಾಣ್ಯೀಕರಿಸುವಲ್ಲಿನ ತನ್ನ ವಿಫಲತೆಯಿಂದ ಜನಸಾಮಾನ್ಯರ ಮೇಲೆ ಅಪಾರ ಸಂಕಟಗಳನ್ನು ಹೇರಿರುವುದನ್ನು ಮುಚ್ಚಿಕೊಳ್ಳಲು ಟೀಕೆಗಳ ಮೇಲೆಯೇ ಪ್ರಹಾರ ನಡೆಸಿದೆ ಎಂದು ಫ್ರೀ ಸಾಫ್ಟ್‌ವೇರ್ ಮೂವ್‌ಮೆಂಟ್ ಆಫ್ ಇಂಡಿಯಾ'(ಎಫ್‌ಎಸ್‌ಎಂಐ) ಒಂದು ಹೇಳಿಕೆಯಲ್ಲಿ ಇದನ್ನು ಖಂಡಿಸಿದೆ.

ಕೇಂದ್ರ 'ಮತ್ತು ರಾಜ್ಯ ಸರಕಾರಗಳು ಈ ಹಿಂದೆ ಸಾರ್ವಜನಿಕ ಸಭೆಗಳನ್ನು ನಿಷೇಧಿಸಲು ಬಳಸುತ್ತಿದ್ದ ಸೆಕ್ಷನ್ 144 ರ ಅಡಿಯಲ್ಲಿ ಇರುವ ಅಧಿಕಾರದ ವ್ಯಾಪ್ತಿಯ ಬಹಳ ಆಚೆಗೆ ಹೋಗಿ ಈಗ ಅಭಿವ್ಯಕ್ತಿ ಸ್ವಾತಮತ್ರ್ಯದ ಜನರ ಹಕ್ಕುಗಳನ್ನು ದಮನ ಮಾಡು ವಪ್ರಕ್ರಿಯೆಯಲ್ಲಿ ಇಂಟರ್‌ನೆಟ್‌ನ್ನು ಮನಬಂದಂತೆ ಮುಚ್ಚಿಸುವ ಪ್ರಯತ್ನಗಳನ್ನು ನಡೆಸುತ್ತಲೇ ಇವೆ. ಇದು ಕೇಂದ್ರ ಮತ್ತು ಮಧ್ಯಪ್ರದೇಶ ಸರಕಾರಗಳ ಹತಾಶೆಯನ್ನು ಬಿಂಬಿಸುತ್ತದೆ ಎಂದು ಎಫ್‌ಎಸ್‌ಎಂಐ ಅಭಿಪ್ರಾಯ ಪಟ್ಟಿದೆ.

ಈ ಆದೇಶವನ್ನು ತಕ್ಷಣವೇ ಹಿಂದಕ್ಕೆ ತಗೊಳ್ಳಬೇಕು ಮತ್ತು ಈ ಕ್ರಮದ ಬಗ್ಗೆ ಜನತೆಯಲ್ಲಿ ಕ್ಷಮೆ ಯಾಚಿಸಬೇಕು ಎಂದು ಅದು ಆಗ್ರಹಿಸಿದೆ.

ಈ ನಡುವೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು " ಪ್ರಧಾನ ಮಂತ್ರಿಗಳು ಅನಾಣ್ಯೀಕರಣದ ಪ್ರಕಟಣೆ–ಯ ಮೊದಲು ಹತ್ತು ತಿಂಗಳ ಸಿದ್ದತೆ ನಡೆದಿದೆ ಎಂದು ಹೇಳಿದ್ದಾರೆ, 16 ದಿನಗಳಲ್ಲಿ 32 ತಿದ್ದುಪಡಿಗಳು ಅವರ ಯೋಜನೆ ಮತ್ತು ಆಳ್ವಿಕೆಯ ಬಗ್ಗೆ ಸಾಕಷ್ಟು ಹೇಳುತ್ತವೆ" ಎಂದು ದಿಲ್ಲಿಯಿಂದ ಟ್ವೀಟ್ ಮಾಡಿದ್ದಾರೆ.



ವ್ಯಂಗ್ಯಚಿತ್ರ ಕೃಪೆ:ಗೋಕುಲ್, ಡೆಕ್ಕನ್ ಕ್ರಾನಿಕಲ್

ವಿದೇಶಗಳಲ್ಲಿ ಬಚ್ಚಿಟ್ಟ ಕಪ್ಪುಹಣದ ಮೇಲೆ ಪ್ರಹಾರ ಏಕಿಲ್ಲ?



ಕೆ.ಎಂ.ನಾಗರಾಜ್

ಕಪ್ಪು ಹಣವನ್ನು ವಾಪಸ್ ತರುವುದಾಗಿ ಚುನಾವಣೆ ಸಂದರ್ಭದಲ್ಲಿ ಅಬ್ಬರಿಸಿದ್ದ ಮೋದಿಯವರಿಗೆ ವಿದೇಶಗಳಲ್ಲಿರುವ ಕಾಳ ಧನದ ವಿರುದ್ಧದ ಹೋರಾಟ ಮೊದಲ ಆದ್ಯತೆಯಾಗಿರಬೇಕಿತ್ತು ಅಲ್ಲವೇ?

ಕಪ್ಪು ಹಣ ಎಷ್ಟಿದೆ: ಕಪ್ಪು ಹಣ ಎಂದರೆ ಅದು ಕೇವಲ ನಗದು ರೂಪದಲ್ಲಿರುವ ಹಣ ಮಾತ್ರ ಎಂದು ಭಾವಿಸಲಾಗದು. ನಗದು ಹಣ, ಭೂಮಿ, ಮನೆ, ಬಂಗಾರ, ಬೇನಾಮಿ ಆಸ್ತಿ, ವಿದೇಶಿ ಹೂಡಿಕೆ ಮತ್ತು ಬ್ಯಾಂಕ್ ಡಿಪಾಸಿಟ್, ಹೀಗೆ ಹಲವು ಹತ್ತಾರು ರೂಪಗಳಲ್ಲಿ ಕಪ್ಪು ಹಣ ಇದೆ. ನಮ್ಮ ದೇಶದ ಅರ್ಥವ್ಯವಸ್ಥೆಯಲ್ಲಿ ಸೇರಿಕೊಂಡಿರುವ ಕಪ್ಪು ಹಣದ ಬಗ್ಗೆ ಒಂದು ಗ್ರಂಥವನ್ನೇ ಪ್ರಕಟಿಸಿರುವ ಅರುಣ್‌ಕುಮಾರ್ ಎಂಬ ಅರ್ಥಶಾಸ್ತ್ರಜ್ಞರ ಅಂದಾಜಿನ ಪ್ರಕಾರ 'ದೇಶದಲ್ಲಿ ಸುಮಾರು 97 ಲಕ್ಷಕೋಟಿ ರೂಪಾಯಿಗಳಷ್ಟು ಕಪ್ಪು ಹಣ ಇದೆ. ಅದರಲ್ಲಿ, ನಗದು ರೂಪದಲ್ಲಿರುವ ಕಪ್ಪು ಹಣದ ಪ್ರಮಾಣ ಸುಮಾರು ಎರಡರಿಂದ ಆರು ಲಕ್ಷ ಕೋಟಿ ರೂಪಾಯಿಗಳ ವರೆಗೂ ಇರಬಹುದೆಂದು ಕೆಲವು ಅರ್ಥಶಾಸ್ತ್ರಜ್ಞರ ಅಂದಾಜು. ಎಲ್ಲ ರೂಪದಲ್ಲಿರುವ ಕಪ್ಪು ಹಣದ ಮೂಲಕ ಗಳಿಸಿರುವ ಒಟ್ಟು ಸಂಪತ್ತಿನ ಮೌಲ್ಯಕ್ಕೆ ಹೋಲಿಸಿದರೆ, ನಗದುರೂಪದಲ್ಲಿರುವ ಕಪ್ಪು ಹಣದ ಪ್ರಮಾಣ ಕೇವಲ 0.2%. ಅಂದರೆ, ಕಪ್ಪು ಹಣದ ಮೂಲಕ ಗಳಿಸಿದ ಸಾವಿರ ರೂಪಾಯಿ ಮೌಲ್ಯದ ಸಂಪತ್ತಿನಲ್ಲಿ ನಗದು ಹಣದ ರೂಪದಲ್ಲಿರುವುದು ಎರಡು ರೂಪಾಯಿ ಮಾತ್ರ. ಸಣ್ಣಗಾತ್ರದ ಮೀನು ಹಿಡಿಯಲು ಹೋಗಿ, ಮೋದಿ ಸರ್ಕಾರ ಕೆರೆಯ ನೀರನ್ನೆಲ್ಲಾ ಹೊರ ಹಾಕಿದೆ. ಆದರೆ, ಮೊಸಳೆಗಳು ನೆಲದ ಮೇಲೆ ಮಜಾ ಮಾಡುತ್ತಿವೆ ಎಂದು ಮೋದಿ ಸರ್ಕಾರದ ವಿವೇಚನಾರಹಿತ ಕ್ರಮವನ್ನು ಸೀತಾರಾಂ ಯೆಚೂರಿ ಟೀಕಿಸಿದ್ದಾರೆ.

ಪರದಾಟ ತಪ್ಪಿಲ್ಲ: ಚಲಾವಣೆಯಲ್ಲಿದ್ದ ಕರೆನ್ಸಿಯ 86% ಭಾಗವಾಗಿದ್ದ, 500 ರೂ ಮುಖ ಬೆಲೆಯ ನೋಟುಗಳು (48%) ಮತ್ತು 1000 ರೂ ಮುಖ ಬೆಲೆಯ ನೋಟುಗಳನ್ನು (38%) ಅನಾಮತ್ತಾಗಿ ರದ್ದು ಮಾಡಿದ ಎರಡು ವಾರಗಳ ನಂತರವೂ ಜನ ಹಣ ಇಲ್ಲದೆ ಪರದಾಡುತ್ತಿರುವುದು ತಪ್ಪಿಲ್ಲ. ಸಾವಿರ ಮತ್ತು ಐದು ನೂರು ರೂ ಮುಖ ಬೆಲೆಯ ನೋಟುಗಳಲ್ಲಿ ಕಪ್ಪು ಹಣ ಬಚ್ಚಿಟ್ಟದ್ದಾರೆಂಬ ಕಾರಣದ ಮೇಲೆ ಅವುಗಳನ್ನು ರದ್ದು ಮಾಡಲಾಗಿದೆ. ಹಾಗಾಗಿ, ಸಾವಿರ ರೂಗಳಿಗೆ ಬದಲಾಗಿ 2000 ರೂ ನೋಟುಗಳನ್ನು ಜಾರಿಗೆ ತಂದಿರುವುದು ಸೋಜಿಗವಾಗಿದೆ. ಹಳೆಯ ಸಾವಿರ ಮತ್ತು ಐದು ನೂರು ರೂಗಳ ಬದಲಾಗಿ ಕೊಡುತ್ತಿರುವ ಈ 2000 ರೂ ನೋಟುಗಳಿಗೆ ಚಿಲ್ಲರೆಯೇ ಸಿಗುತ್ತಿಲ್ಲ. ಐದು ನೂರು ರೂ ಮುಖ ಬೆಲೆಯ ಹೊಸ ನೋಟುಗಳು ಇನ್ನೂ ಜನರ ಕೈಗೆ ಬಂದಿಲ್ಲ. ಹಾಗಾಗಿ, ಜನಸಾಮಾನ್ಯರು ಹೇಳತೀರದ ಕಷ್ಟ ಅನುಭವಿಸುತ್ತಿದ್ದಾರೆ.

ಗಾಯದ ಮೇಲೆ ಬರೆ: ದಿನ ನಿತ್ಯವೂ ಸುಮಾರು ಹದಿಮೂರು ಕೋಟಿ ಮಂದಿ ಬ್ಯಾಂಕ್‌ಗಳ ಮುಂದೆ ಜಮಾಯಿಸುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸಾವಿರ ಮತ್ತು ಐದು ನೂರು ರೂಗಳ ಹಳೆಯ ನೋಟುಗಳ ತಕ್ಷಣದ ಬದಲಾವಣೆಗೆ 4000 ರೂಗಳ ಮಿತಿ ಹೇರಲಾಗಿದೆ.ಆದ್ದರಿಂದ, ಈ ನೋಟುಗಳನ್ನು ಬದಲಾಯಿಕೊಳ್ಳಲು ಬ್ಯಾಂಕ್‌ಖಾತೆಗೆ ಜಮಾ ಮಾಡುವುದು ಅನಿವಾರ್ಯವಾಗಿದೆ. ಹೀಗೆ ಜಮಾ ಮಾಡಿದ ಹಣವನ್ನಾಗಲಿ ಅಥವಾ ಹಿಂದೆ ಜಮಾ ಮಾಡಿದ ತಮ್ಮದೇ ಹಣ ಹಿಂಪಡೆಯಲೂ ಮಿತಿ ಹೇರಲಾಗಿದೆ. ಈ ಮಿತಿಗಳನ್ನು ಆಗಾಗ್ಗೆ ಬದಲಿಸಲಾಗುತ್ತಿದೆ. ಹಾಗಾಗಿ, ನೋಟುಗಳನ್ನು ಬದಲಾಯಿಕೊಳ್ಳಲು, ಎರಡು ಸಾವಿರ ನೋಟಿಗೆ ನೂರರ ಚಿಲ್ಲರೆ ನೋಟು ಪಡೆಯಲು, ದಿನ ನಿತ್ಯದ ಖರ್ಚುಗಳಿಗೆ ಬೇಕಾಗುವ ತಮ್ಮದೇ ಹಣವನ್ನು ತಮ್ಮ ಖಾತೆಯಿಂದ ಹಿಂತೆಗೆಯಲು ಕೋಟ್ಯಾಂತರ ಮಂದಿ ಬೇರೆ ಎಲ್ಲ ಕೆಲಸಗಳನ್ನು ಬದಿಗೊತ್ತಿ, ಬ್ಯಾಂಕ್‌ಗಳ ಮುಂದೆ ಸರತಿಯ ಸಾಲಿನಲ್ಲಿ ಕಾಯುವುದೇ ಒಂದು ಉದ್ಯೋಗವಾಗಿದೆ. ಕ್ರೆಡಿಟ್‌ಕಾರ್ಡ್‌ಇಲ್ಲದವರು, ಬ್ಯಾಂಕ್ ಶಾಖೆಗಳಿಲ್ಲದ ಸುಮಾರು ಐದು ಲಕ್ಷ ಹಳ್ಳಿಗಳಲ್ಲಿರುವ ಜನತೆ ಮತ್ತು ಬ್ಯಾಂಕ್ ಖಾತೆಗಳಿಲ್ಲದ ಪಟ್ಟಣಗಳಲ್ಲಿರುವ ಕೋಟ್ಯಂತರ ಮಂದಿಯ ದಿನ ನಿತ್ಯದ ಜೀವನ ಅಸ್ತವ್ಯಸ್ತವಾಗಿದೆ. ಬ್ಯಾಂಕ್‌ಗಳಿಂದ ಹಣಪಡೆಯುವ ಸಾಹಸದಲ್ಲಿ ಈಗಾಗಲೇ 70 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಪರಿಸ್ಥಿತಿ ಸದ್ಯದಲ್ಲಿ ಕೊನೆಗೊಳ್ಳುವ ಸೂಚನೆಗಳು ಕಾಣುತ್ತಿಲ್ಲ.

> ಬ್ಯಾಂಕ್‌ಗಳಿಂದ ಕೊಳ್ಳೆ ಹೊಡೆದ ಹಣವನ್ನು ಹಲವಾರು ಮಾರ್ಗಗಳ ಮೂಲಕ ದೇಶದಿಂದ ಹೊರಕ್ಕೆ ಸಾಗಿಸಿ, ಪನಾಮ ಮತ್ತು ಮಾರಿಷಸ್ ನಂತಹ ಹಲವಾರು ತೆರಿಗೆದಾಣಗಳಲ್ಲಿ ಅಡಗಿಸಿಟ್ಟ ಕಪ್ಪು ಹಣವು, ಪಿ ನೋಟ್‌ಗಳು ಮೂಲಕ ಮತ್ತು ಬೋಗಸ್ ಕಂಪೆನಿಗಳ ಮೂಲಕ, ದೇಶಕ್ಕೆ ಹೂಡಿಕೆಯಾಗಿ ಹರಿದು ಬರುತ್ತದೆ. ಇಂತಹ ಮಂದಿಯನ್ನು ರಕ್ಷಿಸುವ ಸರ್ಕಾರ ಸಣ್ಣ ಇಲಿಗಳನ್ನು ಹಿಡಿಯಲು ಹೋಗಿ ಮನೆಗೆ ಬೆಂಕಿ ಹಚ್ಚಿದೆ.

ಕಪ್ಪು ಹಣಯಾರ ಬಳಿ ಇದೆ?

ಹಣ ಚೆಲ್ಲಿ ಚುನಾವಣೆ ಗೆಲ್ಲುವ ರಾಜಕಾರಣಿಗಳು, ಲಂಚಕೋರ ಅಧಿಕಾರಿಗಳು, ದೊಡ್ಡ ವ್ಯಾಪಾರಿಗಳು ಮತ್ತು ಉದ್ಯಮಪತಿಗಳು ಕಪ್ಪು ಹಣದ ಸಿಂಹಪಾಲು ಹೊಂದಿದ್ದಾರೆ. ಅವರ ಮೇಲೆ ಕ್ರಮ ಜರುಗಿಸುವುದನ್ನು ಕೈಬಿಟ್ಟಿರುವ ಮೋದಿ ಸರ್ಕಾರ ಜನಸಾಮಾನ್ಯರ ಮೇಲೆ ಹರಿಹಾಯುತ್ತಿದೆ. ಚಲಾವಣೆಯಲ್ಲಿದ್ದ ಹದಿನೈದು ಲಕ್ಷಕೋಟಿ ರೂಗಳ ನೋಟುಗಳನ್ನು ರದ್ದುಪಡಿಸಿದ ಪರಿಣಾಮವಾಗಿ, ಸಣ್ಣ ಪುಟ್ಟ ವ್ಯಾಪಾರಿಗಳು, ದಿನಗೂಲಿಯ ಸಂಪಾದನೆಯಲ್ಲಿ ಬದುಕುತ್ತಿರುವವರು, ಸಣ್ಣ ಪ್ರಮಾಣದ ಕೈಗಾರಿಕೆಗಳು ಹೇಳತೀರದ ಬವಣೆಗೊಳಗಾಗಿದ್ದಾರೆ. ಸಾಮಾಜಿಕ, ಕೌಟುಂಬಿಕ ಸಂಭ್ರಮಾಚರಣೆಗಳು ಸ್ತಬ್ಧವಾಗಿವೆ. ಈ ವಾಸ್ತವಗಳಿಗೆ ಕುರುಡಾಗಿರುವ ಸಕಾರ, ದೀರ್ಘಕಾಲದ ಲಾಭ ಪಡೆಯಲು ಎಲ್ಲ ರೀತಿಯ ತಾತ್ಕಾಲಿಕ ತೊಂದರೆಗಳನ್ನು ಸಹಿಸಿಕೊಳ್ಳಬೇಕೆಂದು ಉಪದೇಶಮಾಡುತ್ತಿದೆ. ಕೋಪಗೊಂಡಿರುವ ಅವರನ್ನು ಸಮಾಧಾನಪಡಿಸಲು, ಮುಂದಿನ ದಿನಗಳಲ್ಲಿ ಕಾಳಧನಿಕರ ಮೇಲೆ ಕ್ರಮ ಜರುಗಿಸುವುದಾಗಿ ಮೋದಿ ಹೇಳುತ್ತಿದ್ದಾರೆ.

ನಮ್ಮವರ 'ಕಪ್ಪು ಹಣ ವಿದೇಶಗಳಲ್ಲಿ ಎಷ್ಟಿದೆ?: ವಿಶ್ವದ ಎಲ್ಲ ಶ್ರೀಮಂತರು ತೆರಿಗೆ ತಾಣಗಳಲ್ಲಿ ಅಡಗಿಸಿಟ್ಟಿರುವ ಕಪ್ಪು ಹಣದ ಮೊತ್ತ ಸುಮಾರು ಐದು ಸಾವಿರ ಲಕ್ಷ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ನಮ್ಮ ದೇಶದ ಭ್ರಷ್ಟರಾಜಕಾರಣಿಗಳು, ಲಂಚಕೋರ ಅಧಿಕಾರಿಗಳು, ದೊಡ್ಡ ವ್ಯಾಪಾರಿಗಳು ಮತ್ತು ಉದ್ಯಮಪತಿಗಳು ನೂರು ಲಕ್ಷ ಕೋಟಿ ರೂಗಳಿಗೂ ಅಧಿಕ ಮೊತ್ತದ ಕಪ್ಪು ಹಣವನ್ನು ನಲವತ್ತಕ್ಕೂ ಹೆಚ್ಚಿನ ಸಂಖ್ಯೆಯ ತೆರಿಗೆ ತಾಣಗಳಲ್ಲಿ ಅಡಗಿಸಿಟ್ಟಿರುವ ಅಂದಾಜುಗಳಿವೆ. (ಆ ಲೆಕ್ಕದ ಆಧಾರದಲ್ಲೇ, ಅಧಿಕಾರಕ್ಕೆ ಬಂದ ನೂರು ದಿನಗಳ ಒಳಗೆ ಪ್ರತಿಯೊಬ್ಬ ನಾಗರಿಕನ ಖಾತೆಗೆ ತಲಾ ಹದಿನೈದು ಲಕ್ಷ ರೂಗಳನ್ನು ಜಮಾ ಮಾಡುವುದಾಗಿ ಮೋದಿ ಹೇಳಿದ್ದರು).

ಪನಾಮಾದೇಶದಲ್ಲಿ: ಕಪ್ಪು ಹಣವನ್ನು ಬಿಳಿ ಮಾಡುವ ದಂಧೆಯಲ್ಲಿ ತೊಡಗಿರುವ ಮೊಸ್ಯಾಕ್ ಫೋನ್ಸೇಕಾ ಎಂಬ ಒಂದು ಸಂಸ್ಥೆ 2,14,000 ಬೋಗಸ್ ಕಂಪೆನಿಗಳನ್ನು ಸೃಷ್ಟಿಸಿದೆ. ಇಂತಹ ಬೋಗಸ್ ಕಂಪೆನಿಗಳಲ್ಲಿ ಸುಮಾರು 500 ಮಂದಿ ಭಾರತೀಯರು ಸಾವಿರಾರು ಕೋಟಿ ಹಣವನ್ನು ರಹಸ್ಯವಾಗಿ ಹೂಡಿಕೆ ಮಾಡಿದ್ದಾರೆ. ಪನಾಮದಲ್ಲಿ ಮೊಸ್ಯಾಕ್ ಫೋನ್ಸೇಕಾದಂತಹ ನೂರಾರು ಸಂಸ್ಥೆಗಳಿವೆ.

ಸ್ವಿಜರ್ಲ್ಯಾಂಡ್: ಸ್ವಿಜರ್ಲ್ಯಾಂಡ್‌ನ ಹೆಚ್‌ಎಸ್‌ಬಿಸಿ ಬ್ಯಾಂಕ್‌ನಲ್ಲಿ ಹಣ ಅಡಗಿಟ್ಟವರ ಹೆಸರು ಮಾತ್ರ ಬಹಿರಂಗವಾಗಿದೆ. ಸ್ವಿಜರ್ಲ್ಯಾಂಡ್‌ನಲ್ಲಿ ನೂರಾರು ಬ್ಯಾಂಕ್‌ಗಳಿವೆ. ಅವುಗಳಲ್ಲಿ ಎಷ್ಟು ಮಂದಿ ಭಾರತೀಯರು ಹಣ ತೊಡಗಿಸಿದ್ದಾರೆ ಎಂದು ಹುಡುಕುವವರು ಯಾರು?

ತೆರಿಗೆದಾಣಗಳು: ಸ್ವಿಜರ್ಲ್ಯಾಂಡ್ ಮತ್ತು ಪನಾಮ ಪರಿಚಿತ ಹೆಸರುಗಳು. ಸ್ವಿಜರ್ಲ್ಯಾಂಡ್‌ನ ಹೆಚ್‌ಎಸ್‌ಬಿಸಿ ಬ್ಯಾಂಕ್‌ನಲ್ಲಿ ಹಣ ಅಡಗಿಟ್ಟವರ ಹೆಸರು ಬಹಿರಂಗವಾಗಿದೆ. ಪನಾಮದ ಮೊಸ್ಯಾಕ್ ಫೋನ್ಸೇಕಾದಲ್ಲಿ ಹಣ ಅಡಗಿಟ್ಟವರ ಹೆಸರು ಬಹಿರಂಗವಾಗಿದೆ. ವಿದೇಶಗಳಲ್ಲಿ ಆನೆ ಗಾತ್ರದ ಕಪ್ಪು ಹಣ ಅಡಗಿಸಿಕೊಂಡಿರುವುದು ಬಹಿರಂಗವಾದ ನಂತರ ಅವರ ಮೇಲೆ ಸರ್ಜಿಕಲ್ ದಾಳಿ ಮಾಡದೆ, ಅಂತಹ ಮಂದಿಯನ್ನು ಸರ್ಕಾರ ರಕ್ಷಿಸುತ್ತಿದೆ. ಕಪ್ಪು ಹಣವನ್ನು ವಾಪಸ್ ತರುವುದಾಗಿ ಚುನಾವಣೆ ಸಂದರ್ಭದಲ್ಲಿ ಅಬ್ಬರಿಸಿದ್ದ ಮೋದಿಯವರಿಗೆ ವಿದೇಶದಲ್ಲಿರುವ ಕಾಳ ಧನದ ವಿರುದ್ಧದ ಹೋರಾಟ ಮೊದಲ ಆದ್ಯತೆಯಾಗಿರಬೇಕಿತ್ತು ಅಲ್ಲವೇ?

ಪಿ ನೋಟ್ ಹೂಡಿಕೆದಾರರು: ವಿದೇಶಿ ಹೂಡಿಕೆಯ ಹೆಸರಿನಲ್ಲಿ ಮಾರಿಷಸ್ ಮತ್ತಿತರ 'ಅನೇಕ ತೆರಿಗೆದಾಣಗಳಿಂದ ಪಿ ನೋಟ್‌ಗಳ ಮೂಲಕ ಭಾರತಕ್ಕೆ ಹರಿದು ಬಂದಿರುವ 2.3 ಲಕ್ಷಕೋಟಿ ರೂಪಾಯಿಗಳ ಬಂಡವಾಳವೂ ಕಪ್ಪು ಹಣವೇ. ಪಿ ನೋಟ್‌ಗಳ ಹೂಡಿಕೆಯನ್ನು ಒಪ್ಪಿಕೊಳ್ಳುವವರು ರಾಷ್ಟ್ರಪ್ರೇಮಿಗಳೇ?

ನಮ್ಮ ದೇಶದ ಷೇರು ಮಾರುಕಟ್ಟೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಬಂಡವಾಳ ಹರಿಯುತ್ತದೆ. ಈ ವಿದೇಶಿ ಸಾಂಸ್ಥಿಕ ಹೂಡಿಕೆಯ ಶೇ.30 ರಷ್ಟು ಪ್ರಮಾಣದ ಹಣ ಪಿ ನೋಟ್(ಪಾರ್ಟಿಸಿಪೇಟರಿ ನೋಟ್) ಮೂಲಕ ಬರುತ್ತಿದೆ. 2.3 ಲಕ್ಷ ಕೋಟಿ ರೂಗಳ ಮೌಲ್ಯದ ಈ ಪಿ ನೋಟ್‌ಗಳ ಒಡೆಯರು ಯಾರು ಎಂಬುದು ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ, ನಮ್ಮ ದೇಶದ ಉದ್ಯಮಪತಿಗಳೇ ಈ ಪಿ ನೋಟ್‌ಗಳ ಅಸಲಿ ಒಡೆಯರು ಎಂಬ ಗುಮಾನಿ ದಟ್ಟವಾಗಿದೆ. ಅವರು ಕಪ್ಪು ಹಣವನ್ನು ಬಿಳಿ ಮಾಡಿಕೊಳ್ಳಲು ಈ ಪಿ ನೋಟ್ ಹೂಡಿಕೆಯ ಮಾರ್ಗ ಹಿಡಿದಿದ್ದಾರೆ. ತದನಂತರ, ಮಾರುಕಟ್ಟೆಯಲ್ಲಿ ತಮ್ಮ ಕಂಪೆನಿಯ ಷೇರುಗಳ ಬೆಲೆ ಏರಿಕೆಯ ಚಮತ್ಕಾರಕ್ಕೆ ಪಿ ನೋಟ್ ಬಳಸಿಕೊಳ್ಳುತ್ತಾರೆ. ಭಯೋತ್ಪಾದನೆಗೆ ಹಣಕಾಸು ಸರಬರಾಜು ಮಾಡುವ ವ್ಯಕ್ತಿಗಳು, ಸಂಸ್ಥೆಗಳು ಮತ್ತು ವಿದೇಶಿ ಸರ್ಕಾರಗಳೂ ಪಿ ನೋಟ್ ಹೂಡಿಕೆ ಮಾಡುತ್ತವೆ. ಭಯೋತ್ಪಾದನೆಗೆ ಹಣಕಾಸು ಸರಬರಾಜು ಮಾಡುವವರು ಐದು ನೂರು ಮತ್ತು ಸಾವಿರರೂ ನೋಟುಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದೂ ನೋಟುಗಳ ರದ್ದತಿಗೆ ಒಂದು ಕಾರಣ. ಹಾಗಾದರೆ, ಸಂಪೂರ್ಣವಾಗಿ, ಅನಾಮಧೇಯರು ಹೂಡಿಕೆ ಮಾಡುವ ಪಿ ನೋಟ್‌ಗಳನ್ನು ಸರ್ಕಾರ ನಿರ್ಬಂಧಿಸುವುದೇ? ಎಲ್ಲಕ್ಕಿಂತ ಮುಖ್ಯವಾಗಿ ಪಿ ನೋಟ್‌ಗಳು ಒಬ್ಬ ಸಾಮಾನ್ಯ ವ್ಯಕ್ತಿಯ ಸ್ವಾಭಿಮಾನಕ್ಕೆ ಸವಾಲು ಒಡ್ಡುತ್ತವೆ. ಏಕೆಂದರೆ, ಷೇರುಗಳಲ್ಲಿ ಹೂಡಿಕೆ ಮಾಡುವಾಗ, ದೇಶದ ಒಬ್ಬ ಪ್ರಜೆಯು ತನ್ನಗುರತು, ವಿಳಾಸಗಳನ್ನು ಸಾಬೀತುಪಡಿಸುವುದರ ಜೊತೆಗೆ ಪ್ಯಾನ್‌ಕಾರ್ಡ್ ಹೊಂದಿರಬೇಕು. ಆದರೆ, ಪಿ ನೋಟ್‌ಗಳಲ್ಲಿ ಹೂಡಿಕೆ ಮಾಡುವ ವ್ಯಕ್ತಿಯು ಕಾಳಧನಿಕನೂ ಆಗಿರಬಹುದು, ಅನಾಮಧೇಯನೂ ಆಗಿರಬಹುದು, ಶತ್ರುದೇಶದವನೂ ಆಗಿರಬಹುದು, ಅಥವಾ ಭಯೋತ್ಪಾದಕನೂ ಆಗಿರಬಹುದು, ಅಡ್ಡಿಯಿಲ್ಲ! ಅಷ್ಟೇ ಅಲ್ಲ, ಪಿ ನೋಟ್ ಹೂಡಿಕೆದಾರರನ್ನು ತೆರಿಗೆ ಅಧಿಕಾರಿಗಳು, ಸೆಬಿ, ಆರ್‌ಬಿಐ ಅಥವಾ ಬೇರೆಯಾವುದೇ ಸಂಸ್ಥೆಯೂ ಪ್ರಶ್ನಿಸುವಂತಿಲ್ಲ! ಹೇಗಿದೆ, ಪಿ ನೋಟ್‌ಗಳ ಗಮ್ಮತ್ತು!

ಎನ್‌ಪಿಎ, ಸಾಲ ಮನ್ನಾ ಮತ್ತು ಕಪ್ಪು ಹಣ:

ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯಿಂದ ತಲಾ ಸಾವಿರಕೋಟಿಗಿಂತಲೂ ಅಧಿಕ ಮೊತ್ತದ ಸಾಲ ಪಡೆದು ಬಾಕಿ ಉಳಿಸಿಕೊಂಡಿರುವ ಲ್ಯಾಂಕೊ, ಜೇಪಿ, ಜಿಎಂಆರ್, ವಿಡಿಯೊಕಾನ್, ಜಿವಿಕೆ, ಎಸ್ಸಾರ್, ಅದಾನಿ, ರಿಲೈಯನ್ಸ್ (ಅನಿಲ್ ಅಂಬಾನಿ), ಜೆಎಸ್‌ಡಬ್ಲೂ ಮತ್ತು ವೇದಾಂತ ಸಮೂಹ ಕಂಪೆನಿಗಳ ಹೆಸರುಗಳನ್ನು ಸ್ವಿಝರ್‌ಲ್ಯಾಂಡಿನ ಕ್ರೆಡಿಟ್ ಸ್ಯೂಸೆ ಸಂಶೋಧನಾ ಸಂಸ್ಥೆ ಪ್ರಕಟಿಸಿದೆ. ಈ ಹತ್ತು ಸಮೂಹ ಕಂಪೆನಿಗಳು ಪಡೆದ ಒಟ್ಟು ಸಾಲ 7.33 ಲಕ್ಷಕೋಟಿ ರೂಗಳಿಗೂ ಅಧಿಕವಾಗಿದೆ ಎಂದು ಅದು ತಿಳಿಸಿದೆ. ಈಗ ಎನ್‌ಪಿಎ ಆಗಿರುವ ಸಾಲಗಳ ಒಟ್ಟು ಮೊತ್ತ 11 ಲಕ್ಷ ಕೋಟಿ ರೂ.ಗಳಿಗಿಂತಲೂ ಅಧಿಕವಾಗಿದೆ. ಮುಂದೊಂದು ದಿನ ಈ ಸಾಲವು ಹಂತ ಹಂತವಾಗಿ ಮನ್ನಾ ಆಗುತ್ತದೆ. ಆಗ ಬ್ಯಾಂಕಿನಲ್ಲಿ ಹೂಡಿಕೆಯಾದ ಬಂಡವಾಳದ ಪರಿಸ್ಥಿತಿ ಗೆದ್ದಲು ತಿಂದು ಲದ್ದು ಹಿಡಿದ ಮರದಂತಾಗಿರುತ್ತದೆ. ಹೀಗೆ ಸವಕಳಿಯಾದ ಬಂಡವಾಳವನ್ನು ಕೇಂದ್ರ ಸರ್ಕಾರವು ಮರು ಪೂರೈಕೆ ಮಾಡಬೇಕಾಗುತ್ತದೆ. ಅದಕ್ಕಾಗಿ, ಮುಂದಿನ ನಾಲ್ಕು ವರ್ಷಗಳಲ್ಲಿ, ಕೇಂದ್ರ ಸರ್ಕಾರವು ಸಾರ್ವಜನಿಕರ ತೆರಿಗೆ ಇಂದ ಬಂದ ಕನಿಷ್ಠ ಎಪ್ಪತ್ತು ಸಾವಿರ ಕೋಟಿರೂಗಳನ್ನು ಕೊಡಬೇಕಾಗುತ್ತದೆ. ಅರುಣ್ ಜೇಟ್ಲಿ ಈಗಾಗಲೇ ಆಶ್ವಾಸನೆಕೊಟ್ಟಿದ್ದಾರೆ.

2004 ಮತ್ತು 2015ರ ಅವಧಿಯಲ್ಲಿ, ಒಟ್ಟು ಎರಡು ಲಕ್ಷ ಹನ್ನೊಂದು ಸಾವಿರ ಕೋಟಿ (2,11,000,00,00,000) ರೂಪಾಯಿಗಳ ಮೊತ್ತದ ಸಾಲಗಳನ್ನು ಬ್ಯಾಂಕ್‌ಗಳು ತಮ್ಮ ದಾಖಲೆಗಳಿಂದ ತೆಗೆದು ಹಾಕಿವೆ ಅಂದರೆ, ಮನ್ನಾ ಮಾಡಿವೆ ಎಂದರ್ಥ. "ವಸೂಲಾಗದ ಸಾಲಗಳನ್ನು ಕಡತದಿಂದ ತೆಗೆದುಹಾಕಿರುವುದು ಮಾಮೂಲಾಗಿ ನಡೆಯುವ ಒಂದು ತಾಂತ್ರಿಕ ತೋರಿಕೆಯ ಕ್ರಮ.ಅದರರ್ಥ ವಸೂಲಿ ಮಾಡಬಾರದು ಎಂದಲ್ಲ" ಎಂದು ರಿಸರ್ವ್ ಬ್ಯಾಂಕ್ ಹೇಳುತ್ತದೆ ಮತ್ತು ಅರುಣ್ ಜೇಟ್ಲಿಯವರು ಅದನ್ನೇಇತ್ತೀಚೆಗೆ ಸಂಸತ್ತಿನಲ್ಲಿ ಪುನರುಚ್ಛರಿಸಿದರು. ಅಲ್ಲಿಗೆ ಕತೆ ಮುಗಿಯಿತು.

ವಸೂಲಾಗದ ಸಾಲಗಳು ಹೆಚ್ಚುತ್ತಿರುವುದು ಮತ್ತು ಅದನ್ನು ಮನ್ನಾ ಮಾಡುತ್ತಿರುವುದು ಉದ್ಯಮಪತಿಗಳು ಮಾಡುತ್ತಿರುವ ಮೋಸವನ್ನು ಬಯಲುಮಾಡಿದೆ. ಉದ್ಯಮಪತಿಗಳು 'ರಿಸ್ಕ್ ಇಲ್ಲದ ಬಂಡವಾಳ'ದ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ರಘುರಾಂ ರಾಜನ್ ಅವರನ್ನು ನಯವಾಗಿ ಚುಚ್ಚಿದ್ದರು. ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡದೆ ಅದನ್ನು ಗುಪ್ತ ಮಾರ್ಗಗಳ ಮೂಲಕ ಹೊರದೇಶಗಳಿಗೆ ಸಾಗಿಸಿ ವೈಭವೋಪೇತ ಜೀವನ ನಡೆಸುತ್ತಿರುವ ವಿಜಯ್ ಮಲ್ಯ ಪ್ರಸಂಗ ಕಪ್ಪು ಹಣದ ವಿರುದ್ಧ ಸರ್ಕಾರ ನಡೆಸುತ್ತಿರುವ ಹೋರಾಟ ಎಷ್ಟು ಬೋಗಸ್‌ಎಂಬುದು ಗೊತ್ತಾಗುತ್ತದೆ.

ಬ್ಯಾಂಕ್‌ಗಳಿಂದ ಕೊಳ್ಳೆ ಹೊಡೆದ ಹಣವನ್ನು ಹಲವಾರು ಮಾರ್ಗಗಳ ಮೂಲಕ ದೇಶದಿಂದ ಹೊರಕ್ಕೆ ಸಾಗಿಸಿ, ಪನಾಮ ಮತ್ತು ಮಾರಿಷಸ್ ನಂತಹ ಹಲವಾರು ತೆರಿಗೆದಾಣಗಳಲ್ಲಿ ಅಡಗಿಸಿಟ್ಟ ಕಪ್ಪು ಹಣವು, ಪಿ ನೋಟ್‌ಗಳು ಮೂಲಕ ಮತ್ತು ಬೋಗಸ್ ಕಂಪೆನಿಗಳ ಮೂಲಕ, ದೇಶಕ್ಕೆ ಹೂಡಿಕೆಯಾಗಿ ಹರಿದು ಬರುತ್ತದೆ. ಇಂತಹ ಮಂದಿಯನ್ನು ರಕ್ಷಿಸುವ ಸರ್ಕಾರ ಸಣ್ಣ ಇಲಿಗಳನ್ನು ಹಿಡಿಯಲು ಹೋಗಿ ಮನೆಗೆ ಬೆಂಕಿ ಹಚ್ಚಿದೆ.

ಸಹಕಾರಿ ಬ್ಯಾಂಕ್‌ಗಳಲ್ಲಿ ನೋಟುಗಳ ಬದಲಾವಣೆಗೆ ನಿರ್ಬಂಧ : ಕೇರಳದಲ್ಲಿ ಪ್ರತಿಭಟನೆ



ಸಹಕಾರಿ ಬ್ಯಾಂಕ್‌ಗಳು ಕೇರಳ ರಾಜ್ಯದ ಉದ್ದಗಲಕ್ಕೂ ಭದ್ರವಾಗಿ ನೆಲೆಯೂರಿವೆ. ಬಹುಪಾಲು ಜನರು ತಮ್ಮ ಬ್ಯಾಂಕಿಂಗ್ ಅವಶ್ಯಕತೆಗಳಿಗೆ ಸಹಕಾರಿ ಬ್ಯಾಂಕ್‌ಗಳನ್ನು ಅವಲಂಬಿಸಿದ್ದಾರೆ. ಹಾಗಾಗಿ, ಸಹಕಾರಿ ಬ್ಯಾಂಕ್‌ಗಳು ಕೇರಳದ ಜನಜೀವನದಲ್ಲಿ ಬಹು ಮುಖ್ಯ ಪಾತ್ರ ವಹಿಸಿವೆ.

ನವೆಂಬರ್‌ಎಂಟರಿಂದ ರದ್ದಾಗಿರುವ 500 ಮತ್ತು 1000 ರೂಪಾಯಿ ನೋಟುಗಳನ್ನು ಸಹಕಾರಿ ಬ್ಯಾಂಕ್‌ಗಳು ಸ್ವೀಕರಿಸದಂತೆ ನಿರ್ಬಂಧಿಸಲಾಗಿದೆ. ಹಾಗಾಗಿ, ಕೇರಳದ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿರುವ 'ನಾಗರಿಕರು ರದ್ದಾಗಿರುವ 500 ಮತ್ತು 1000 ರೂಪಾಯಿ ನೋಟುಗಳನ್ನು ತಮ್ಮ ಖಾತೆಗೆ ಜಮಾ ಮಾಡಲು ಅವಕಾಶವಿಲ್ಲ ಮತ್ತು ನೋಟುಗಳನ್ನು ಬದಲಾಯಿಸಿಕೊಳ್ಳಲೂ ಅವಕಾಶವಿಲ್ಲ. ಈ ನಿರ್ಬಂಧದಿಂದಾಗಿ ಕೇರಳದ ಜನತೆ ತಮ್ಮ ದಿನ ನಿತ್ಯದ ವ್ಯವಹಾರ ನಡೆಸಲು ಸಾಧ್ಯವಾಗುತ್ತಿಲ್ಲ. ತಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆಗುತ್ತಿಲ್ಲ. ತಮ್ಮ ಖಾತೆಯಲ್ಲಿರುವ ಹಣತೆಗೆಯಲು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿ ಹಿಂದೆ-ಂದೂ ಉಂಟಾಗಿರಲಿಲ್ಲ.

ಜನತೆಗೆ ಇಂತಹ ಪರಿಸ್ಥಿತಿ ತಂದಿಟ್ಟ ಮೋದಿ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಬೇಜವಾಬ್ದಾರಿ ಧೋರಣೆಯ ವಿರುದ್ಧ ಪ್ರತಿಭಟಿಸಲು ಕೇರಳದ ಎಡರಂಗ ಸರ್ಕಾರವು ನವೆಂಬರ್ 19ರಂದು ತಿರುವನಂತ ಪುರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಎದುರು ಧರಣಿ ನಡೆಸಿದೆ. ಬೆಳಗಿನಿಂದ ಸಂಜೆಯ ವರೆಗೆ ನಡೆದ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಸಾವಿರಾರು ಮಂದಿಯ ನೇತೃತ್ವವನ್ನು ಕೇರಳದ ಮುಖ್ಯ ಮಂತ್ರಿ ಪಿನರಾಯಿ ವಿಜಯನ್ ವಹಿಸಿದ್ದರು. ಅವರ ಸಂಪುಟದ ಎಲ್ಲ ಮಂತ್ರಿಗಳು ಈ ಪ್ರತ್ರಿಭಟನೆಯಲ್ಲಿ ಭಾಗವಹಿಸಿದ್ದರು.

ಈ ಪ್ರತ್ರಿಭಟನೆಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಉದ್ಘಾಟಿಸಿದರು. ನೋಟುರದ್ದತಿಯಿಂದಾಗಿ ಜನರು ಎಲ್ಲರೀತಿಯ ತೊಂದರೆಗೊಳಗಾಗಿದ್ದಾರೆ. ಈ ಸಮಸ್ಯೆಗಳಿಗೆ ಕಾರಣವಾಗಿರುವ ಕೇಂದ್ರ ಸರ್ಕಾರವು

ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.'ಭಾರತದ ಜನತೆಯಾದ ನಾವು' ಎಂಬ ಪದಗಳು ನಮ್ಮ ಸಂವಿಧಾನದ ಆರಂಭದಲ್ಲೇ ಇವೆ. ಆದ್ದರಿಂದ, ನಮ್ಮ ಸಂವಿಧಾನದ ಅಡಿಯಲ್ಲಿ ಜನತೆಯೇ ಅಂತಿಮ. ಅವರಿಗಿಂತ ಉನ್ನತಅಧಿಕಾರ ಹೊಂದಿರುವವರು ಯಾರೂ ಇಲ್ಲ. ಜನರು ತಮ್ಮ ಜೀವನ ನಡೆಸುವ ರೀತಿಯನ್ನು ಪ್ರಧಾನ ಮಂತ್ರಿಗಳು ನಿರ್ಧರಿಸುವಂತಿಲ್ಲ.ಅದನ್ನು ಒಪ್ಪಲಾಗದು. ನೋಟು ರದ್ದು ಪಡಿಸಿರುವ ಅವರ ನಿರ್ಧಾರ ಸರಿ ಇಲ್ಲ. ಈ ಕ್ರಮದ ವಿರುದ್ಧ ಪ್ರತಿಭಟನೆಗಳು ವ್ಯಾಪಕವಾಗುತ್ತವೆ ಎಂದು ಎಚ್ಚರಿಸಿದರು.

ನೋಟುಗಳ ರದ್ದತಿಯ ಪರಿಣಾಮವಾಗಿ ರಾಜ್ಯ ಸರ್ಕಾರಗಳಿಗೆ ಬರುವ ಆದಾಯದಲ್ಲಿ ನಷ್ಟವಾಗುತ್ತದೆ. ಕೇಂದ್ರ ಸರ್ಕಾರವು ಈ ನಷ್ಟವನ್ನುತುಂಬಿಕೊಡುವಂತೆ, ಬಿಜೆಪಿಯೇತರ ರಾಜ್ಯ ಸರ್ಕಾರಗಳು ಒಟ್ಟಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುವಂತೆ ಬಿಜೆಪಿಯೇತರ ರಾಜ್ಯ ಸರ್ಕಾರಗಳ ಮನ ಒಲಿಸುವ ಪ್ರಯತ್ನದ ಮುಂದಾಳತ್ವವನ್ನು ಸಿಪಿಐ(ಎಂ) ನೇತೃತ್ವದ ಕೇರಳ ಮತ್ತು ತ್ರಿಪುರಾ ರಾಜ್ಯ ಸರ್ಕಾರಗಳು ವಹಿಸಲಿವೆ ಎಂದು ಸೀತಾರಾಂ ಯೆಚೂರಿ ಈ ಸಂದರ್ಭದಲ್ಲಿ ಹೇಳಿದರು. ಮುಖ್ಯ ಮಂತ್ರಿ ಪಿನರಾಯಿ ವಿಜಯನ್, ಪೊಲಿಟ್‌ಬ್ಯೂರೊ ಸದಸ್ಯ ಪ್ರಕಾಶ್ ಕರಾಟ್, ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್, ಮಾಜಿಮುಖ್ಯ ಮಂತ್ರಿ ಅಚ್ಯತಾನಂದನ್, ಸಿಪಿಐ ರಾಜ್ಯ ಕಾರ್ಯದರ್ಶಿ ಕಾನಂ ರಾಜೇಂದ್ರನ್, ಶ್ರೇಷ್ಠ ಇತಿಹಾಸ ತಜ್ಞ ಡಾ. ಕೆ.ಎನ್ ಪಣಿಕ್ಕರ್ ಮತ್ತು ಎಡರಂಗದ ಅನೇಕ ಮುಖಂಡರು ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ಪ್ರಧಾನ ಮಂತ್ರಿಗಳ ಬಳಿಗೆ ಸರ್ವ ಪಕ್ಷಗಳ ನಿಯೋಗ

ಸಹಕಾರಿ ಬ್ಯಾಂಕ್‌ಗಳ ಮೇಲಿನ ನಿರ್ಬಂಧ ಸಡಿಲಿಸುವಂತೆ ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿಯವರನ್ನು ಕೋರಲು ಸರ್ವ ಪಕ್ಷಗಳ ನಿಯೋಗ ಒಂದನ್ನು ದೆಹಲಿಗೆ ಕೊಂಡೊಯ್ಯುವಂತೆ ತಿರುವನಂತಪುರದಲ್ಲಿ ನವೆಂಬರ್ 21ರಂದು ನಡೆದ ರಾಜ್ಯದ ಸರ್ವ ಪಕ್ಷಗಳ ಸಭೆಯಲ್ಲಿ ತೀರ್ಮಾನಿಸಿತು. ಕೇರಳ ರಾಜ್ಯ ಸರ್ಕಾರವು ವಿಧಾನ ಸಭೆಯ ವಿಶೇಷ ಅಧಿವೇಶನ ನಡೆಸಲು ತೀರ್ಮಾನಿಸಿದೆ.

ಸಹಕಾರಿ ವಲಯದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿರುವ ಬಿಜೆಪಿಯನ್ನು ಈ ನಿಯೋಗದಿಂದ ಹೊರಗಿಡಲಾಗಿದೆ. ಸಹಕಾರಿ ಬ್ಯಾಂಕ್‌ಗಳ ಕಾರ್ಯ ವಿಧಾನವು ರಿಸರ್ವ್ ಬ್ಯಾಂಕ್ ವಿಧಿಸಿರುವ ನಿಬಂಧನೆಗಳಿಗೆ ಏಕೆ ಅನುಗುಣವಾಗಿಲ್ಲ ಎಂಬ ಪ್ರಶ್ನೆಯನ್ನು ಬಿಜೆಪಿ ಎತ್ತಿದೆ.

"ಕೇರಳದ ಸಹಕಾರಿ ವಲಯವು, ತನ್ನ ಸಾಮಾಜಿಕ ಬದ್ಧತೆಯ ಭಾಗವಾಗಿ, ಸಾಲ ಕೊಡುವುದರ ಜೊತೆಗೆ, ಮೆಡಿಕಲ್ ಸ್ಟೋರ್ಸ್, ಕನ್ಸೂಮರ್ ಸ್ಟೋರ್ಸ್‌ನಂತಹ ಅನೇಕ ಸೇವೆಗಳನ್ನು ಒದಗಿಸುತ್ತಿದೆ. ಈ ವಲಯವನ್ನು ಬೇರೆ ಬೇರೆ ರೀತಿಯ ಲೆಕ್ಕ ಪರಿಶೋಧನೆಗೆ ಒಳಪಡಿಸಲಾಗಿದೆ. 25 ಲಕ್ಷರೂಗಳಿಗೆ ಮೀರಿದ ಡಿಪಾಸಿಟ್‌ಗಳ ಮೇಲೆ ಮೂಲದಲ್ಲೇ ತೆರಿಗೆ ಹಿಡಿಯಲು ಸಹಕಾರಿ ಸಂಸ್ಥೆಗಳು ವಿರೋಧವಾಗಿಲ್ಲ. ರಿಸರ್ವ್ ಬ್ಯಾಂಕ್‌ನ ಮಾರ್ಗದರ್ಶಿ ಸೂತ್ರಗಳನ್ನು ಒಪ್ಪಿಕೊಂಡರೆ, ಸಹಕಾರಿ ಸಂಸ್ಥೆಗಳು ಸಾಲ ಕೊಡುವ ಒಂದೇ ಒಂದು ಚಟುವಟಿಕೆ ಕೈಗೊಳ್ಳಬಹುದು. ಬೇರೆ ಯಾವ 'ಚಟುವಟಿಕೆಯನ್ನೂ ಕೈಗೊಳ್ಳುವಂತಿಲ್ಲ. ಅಲ್ಲದೆ, ರಿಸರ್ವ್ ಬ್ಯಾಂಕ್‌ನ ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುವಂತಿಲ್ಲ. ಇದೇ ಕಾರಣದಿಂದಾಗಿ, ಸಹಕಾರಿ ವಲಯವನ್ನು ರಿಸರ್ವ್ ಬ್ಯಾಂಕ್‌ನ ವ್ಯಾಪ್ತಿಗೊಳಪಡಿಸಲು ನಮ್ಮ ವಿರೋಧವಿದೆ" ಎಂದು ವಿಜಯನ್ ಹೇಳಿದ್ದಾರೆ.

ತ್ರಿಪುರಾ ವಿಧಾನ ಸಭಾ ಉಪಚುನಾವಣೆಯಲ್ಲಿ ಎಡರಂಗದ ಗೆಲುವು

ನವೆಂಬರ್ 19ರಂದು ತ್ರಿಪುರಾ ವಿಧಾನ ಸಭೆಯ ಎರಡು ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಗಳಲ್ಲಿ ಎರಡೂ ಸ್ಥಾನಗಳನ್ನು ಎಡರಂಗ ಗೆದ್ದಿದೆ. 60 ಸದಸ್ಯರ ತ್ರಿಪುರಾ ವಿಧಾನ ಸಭೆಯಲ್ಲಿ ಎಡರಂಗವು 51 ಸದಸ್ಯರ ಬಲ ಹೊಂದಿದೆ.

ಬರ್ಜಾಲ ಕ್ಷೇತ್ರ :ಸಿಪಿಐ(ಎಂ)ನ ಝೂಮೂ ಸರ್ಕಾರ್ ಬಿಜೆಪಿ ಅಭ್ಯರ್ಥಿಯ ಎದುರು 3374 ವೋಟುಗಳ ಅಂತರದಿಂದ ಜಯ ಗಳಿಸಿದ್ದಾರೆ. ಪಕ್ಷಾಂತರಗೊಳ್ಳುವಂತೆ ತೃಣಮೂಲ ಪಕ್ಷ ಹೇರುತ್ತಿದ್ದ ಒತ್ತಡವನ್ನು ತಾಳಲಾಗದೆ ಈ ಕ್ಷೇತ್ರದ ಕಾಂಗ್ರೆಸ್ ಎಂ.ಎಲ್‌ಎ ಜಿತೇಂದ್ರ ಸರ್ಕಾರ್ ವಿಧಾನ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿದ್ದರಿಂದ ಈ ಕ್ಷೇತ್ರ ತೆರವಾಗಿತ್ತು.

ಸಿಪಿಐ(ಎಂ)ನ ನಾಯಕರುಗಳಲ್ಲಿ ಒಬ್ಬರಾಗಿದ್ದ ಜಿತೇಂದ್ರ ಸರ್ಕಾರ್ ಅವರನ್ನು 2008ರಲ್ಲಿ ಪಕ್ಷದಿಂದ ಹೊರಹಾಕಲಾಗಿತ್ತು. ನಂತರ ಅವರು ಕಾಂಗ್ರೆಸ್ ಪಕ್ಷ ಸೇರಿದ್ದರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ 2013ರಲ್ಲಿ ಸ್ಪರ್ಧಿಸಿದ್ದ ಜಿತೇಂದ್ರ ಸರ್ಕಾರ್‌ಎಂ.ಎಲ್‌ಎ ಆಗಿ ಚುನಾಯಿತರಾಗಿದ್ದರು. ಕಾಂಗ್ರೆಸ್ ಪಕ್ಷದ ಒಳಗೆ ನಡೆಯುತ್ತಿದ್ದ ಕಚ್ಚಾಟ, ಗುಂಪುಗಾರಿಕೆಗಳನ್ನು ತಾಳಲಾರದೆ ಹಾಗೂ ನೀತಿಗೆಟ್ಟ ಪಕ್ಷವೊಂದಕ್ಕೆ ಸೇರಿಕೊಳ್ಳಲು ಅವರ ಮನಸ್ಸಿಗೆ ಒಪ್ಪಿಗೆಯಾಗದ ಕಾರಣಗಳಿಂದ ಅವರು ಎಂ.ಎಲ್‌ಎ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ಜಿತೇಂದ್ರ ಸರ್ಕಾರ್ ಅವರು ಈಗ ಸಿಪಿಐ(ಎಂ)ಗೆ ಮರಳಿದ್ದಾರೆ.

ಖೋವೈಕ್ಷೇತ್ರ : ಈ ಕ್ಷೇತ್ರದಲ್ಲಿ ವಿಜಯಿಯಾಗಿರುವ ಸಿಪಿಐ(ಎಂ)ನ ಬಿಸ್ವಜಿತ್ ದತ್ತಾ ಅವರು ತಮ್ಮ ಎದುರಾಳಿ ತೃಣಮೂಲ ಪಕ್ಷದ ಅಭ್ಯರ್ಥಿಯನ್ನು 16094 ವೋಟುಗಳ ಅಂತರದಿಂದ ಸೋಲಿಸಿದ್ದಾರೆ. ತ್ರಿಪುರಾ ವಿಧಾನ ಸಭೆಯಲ್ಲಿ ಸಿಪಿಐ(ಎಂ)ನ ಮುಖ್ಯ ಸಚೇತಕರಾಗಿದ್ದ ಸಮೀರ್ ದೇಬ್ ಸರ್ಕಾರ್‌ಅವರ ಅಕಾಲಿಕ ಮರಣದಿಂದಾಗಿ ಈ ಸ್ಥಾನ ತೆರವಾಗಿತ್ತು.

ಎಡರಂಗದ ಅಭ್ಯರ್ಥಿಗಳನ್ನು ಆರಿಸಿದ ತ್ರಿಪುರಾದ ಮತದಾರರಿಗೆ ವಂದಿಸಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಜನ್ ಧಾರ್, ಎಡರಂಗದ ಅಭ್ಯರ್ಥಿಗಳ ಗೆಲುವು, ಶಾಂತಿ, ಸ್ಥಿರತೆ ಮತ್ತು ಪ್ರಗತಿಗೆ ಸಂದ ಜನಾದೇಶವೆಂದು ವ್ಯಾಖ್ಯಾನಿಸಿದ್ದಾರೆ.


"ಸರಕಾರದ ಅವಿವೇಕಿ ನಿರ್ಣಯ ನಮ್ಮನ್ನೆಲ್ಲ ಬಿಕ್ಷುಕರ ಮಟ್ಟಕ್ಕೆ ಇಳಿಸಿದೆ"

ಗುಜರಾತ್ ರೈತರ ಭಾರೀ ಪ್ರತಿಭಟನೆ

ನವಂಬರ್ 19ರಂದು ದಕ್ಷಿಣ ಗುಜರಾತಿನ ರೈತರು ಸೂರತ್ ನಗರದ ರಸ್ತೆಗಳಲ್ಲಿ ಭಾರೀ ಪ್ರತಿಭಟನೆ ನಡೆಸಿದರು. ಹಾಲು ಸಹಕಾರಿಗಳ ಪಟ್ಟಣ ಆಣಂದ್‌ನಲ್ಲೂ ಪ್ರತಿಭಟನೆ ನಡೆಯಿತು. ಬೃಹತ್ ರ‍್ಯಾಲಿಗಳಲ್ಲಿ ಧಾನ್ಯಗಳು ಮತ್ತು ಹಾಲನ್ನು ಸುರಿದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು., ಜಿಲ್ಲಾ ಸಹಕಾರಿ ಬ್ಯಾಂಕುಗಳ ಮೇಲೆ ನೋಟು ವಿನಿಮಯ ಮತ್ತು ಠೇವಣಿಯ ಮೇಲೆ ಹಾಕಿರುವ ನಿಷೇಧದ ಬಗ್ಗೆ ತಮ್ಮ ಸಿಟ್ಟನ್ನು ಅಭಿವ್ಯಕ್ತಗೊಳಿಸಿದರು.

ಸಾವಿರಾರು ರೈತರು ಟ್ರಕ್‌ಗಳು ಮತ್ತು ಟ್ರಾಕ್ಟರುಗಳಲ್ಲಿ ಗೋದಿ, ಕಬ್ಬು ಮತ್ತು ಇತರ ಕೃಷಿ ಉತ್ಪನ್ನಗಳನ್ನು ತುಂಬಿಕೊಂಡು ಸೂರತ್ ನಗರದ ಬೀದಿಗಳಲ್ಲಿ 10 ಕಿ.ಮೀ. ಮೆರವಣಿಗೆಯ ನಂತರ ಜಿಲ್ಲಾ ಕಲೆಕ್ಟರ್ ಕಚೇರಿ ಮುಂದೆ ಸರಕಾರ ಮತ್ತು ಆರ್‌ಬಿಐ ಕ್ರಮದ ವಿರುದ್ಧ ಭಾರೀ ಪ್ರತಿಭಟನೆ ನಡೆಸಿದರು.

ಜಿಲ್ಲಾ ಸಹಕಾರಿ ಬ್ಯಾಂಕಿನಲ್ಲಿ ರೈತರ ಆರು ಲಕ್ಷ ಖಾತೆಗಳಿವೆ. ಆದರೆ ಅವರಿಗೆ ತಮ್ಮ ಹಣವನ್ನು ಪಡೆಯಲಾಗಲೀ, ಹಳೆಯ ನೋಟುಗಳನ್ನು ಕೊಡಲಾಗಲೀ ಬಿಡುತ್ತಿಲ್ಲ. ಇದರಿಂದ ಹಳ್ಳಿಗಳಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾಗಿದೆ, ಕೃಷಿ ಕೂಲಿಕಾರರು ಅಕ್ಷರಶಃ ಬರಿ ಹೊಟ್ಟೆಯಲ್ಲಿದ್ದಾರೆ ಎಂದು ಈ ರ‍್ಯಾಲಿಯನ್ನು ಸಂಘಟಿಸಿದ್ದ ಗುಜರಾತ್ ಖೆದುತ್ ಸಮಾಜದ ಮುಖಂಡರು ಹೇಳುತ್ತಾರೆ. ದಕ್ಷಿಣ ಗುಜರಾತಿನಲ್ಲಿ 22000 ಮಂಡಿಗಳಿವೆ. ರೈತರು ಅಲ್ಲಿ ತಮ್ಮ ಉತ್ಪನ್ನಗಳನ್ನು ಮಾರುತ್ತಾರೆ. ಆದರೆ ಸಹಕಾರಿ ಬ್ಯಾಂಕುಗಳು ಹಣ ಕೊಡಲಾಗದ್ದರಿಂದ ಈ ಮಂಡಿಗಳ ಬಳಿ ಹಣವಿಲ್ಲ, ಅದರಿಂದಾಗಿ ರೈತರಿಗೆ ತಮ್ಮ ಉತ್ಪನ್ನಗಳಿಗೆ ಹಣ ಸಿಗುತ್ತಿಲ್ಲ.



ಕಬ್ಬು ಕೆಲಸಗಾರರ ಪರಿಸ್ತಿತಿ ಇನ್ನೂ ಕೆಟ್ಟದಾಗಿದೆ. ದಕ್ಷಿಣ ಗುಜರಾತಿನ 12 ಸಕ್ಕರೆ ಕಾರ್ಖಾನೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ 95ಶೇ. ಮಂದಿಗೆ ಸಂಬಳ ಸಿಕ್ಕಿಲ್ಲ. ಅವರು ಹೇಗೆ ಬದುಕಬೇಕು ಎಂದು ರೈತ ಮುಖಂಡರು ಆಕ್ರೋಶದಿಂದ ಪ್ರಶ್ನಿಸುತ್ತಾರೆ.

ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳಿಗೆ ಅವರು ಈ ಪ್ರತಿಭಟನೆಯ ಮೂಲಕ ಸಲ್ಲಿಸಿರುವ ಮನವಿ ಪತ್ರದಲ್ಲಿ ಈ ನಗದು ಸಮಸ್ಯೆಯನ್ನು ಪರಿಹರಿಸದಿದ್ದರೆ ಹಿಂಗಾರು ಬೇಸಾಯ ಸಾಧ್ಯವಾಗುವದಿಲ್ಲ, ತರಕಾರಿ ಮುಂತಾದ ಬೆಳೆ ಬೆಳೆದವರು ಅವನ್ನು ಮಾರಲು ಸಾಧ್ಯವಾಗುವದಿಲ್ಲ, ಅಂತಿಮವಾಗಿ ಇವೆಲ್ಲದರ ಪರಿಣಾಮವಾಗಿ ಬೆಲೆಗಳಲ್ಲಿ ಅಭೂತಪೂರ್ವ ಹೆಚ್ಚಳವಾಗಬಹುದು, ಅದು ಇಡೀ ಜನತೆಯನ್ನು ತಟ್ಟಬಹುದು ಎಂದು ಈ ರೈತರು ಎಚ್ಚರಿಸಿದ್ದಾರೆ.

ಈಗಲೂ ಗುಜರಾತಿನ ಹೆಚ್ಚಿನ ಹಳ್ಳಿಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಶಾಖೆಗಳಿಲ್ಲ. ಅವರಿಗೆಲ್ಲ ಜಿಲ್ಲಾ ಸಹಕಾರಿ ಬ್ಯಾಂಕ್ ಶಾಖೆಗಳೇ ಜೀವನಾಡಿ. ಇಂತಹ ಸನ್ನಿವೇಶದಲ್ಲಿ ಸಹಕಾರಿ ಬ್ಯಾಂಕುಗಳನ್ನು ಹಣಕಾಸು ವ್ಯವಹಾರಗಳಿಂದ ಹೊರಗಿಡುವ ಅವಿವೇಕಿ ನಿರ್ಣಯ ರೈತರು, ಹಾಲು ಉತ್ಪಾದಕರು ಮತ್ತು ಕೃಷಿ ಕಾರ್ಮಿಕರನ್ನು ಭಿಕ್ಷಕರ ಮಟ್ಟಕ್ಕೆ ಇಳಿಸಿದೆ ಎಂದು ತಮ್ಮ ಪಾಡು ತೋಡಿಕೊಂಡಿರುವ ರೈತರು ಒಂದೋ ಜಿಲ್ಲಾ ಸಹಕಾರಿ ಬ್ಯಾಂಕುಗಳ ಮೇಲೆ ಹೇರಿರುವ ನಿಷೇಧವನ್ನು ತೆಗೆಯಬೇಕು, ಇಲ್ಲವೇ ಸಹಕಾರಿ ಬ್ಯಾಂಕು ಶಾಖೆಗಳಲ್ಲಿ ರಿಝರ್ವ್ ಬ್ಯಾಂಕಿನ ಕೌಂಟರ್‌ಗಳನ್ನು ತೆರೆಯಬೇಕು ಎಂದು ಆಗ್ರಹಿಸಿದ್ದಾರೆ.

ಪಶ್ಚಿಮ ಬಂಗಾಲ: ಮತ್ತೆ ಪ್ರಹಸನವಾಗಿರುವ ಚುನಾವಣೆ ಪ್ರಕ್ರಿಯೆ

ಎಡರಂಗದ ಪಶ್ಚಿಮ ಬಂಗಾಲದ ಕೂಚ್‌ಬೆಹಾರ್, ತಾಮ್ಲೂಕ್ ಲೋಕಸಭಾ ಕ್ಷೇತ್ರ ಮತ್ತು ಮಂಟೇಶ್ವರ ವಿಧಾನಸಭಾ ಕ್ಷೇತ್ರ ಉಪಚುನಾವಣೆಗಳ ಫಲಿತಾಂಶಗಳು ಮತ್ತೊಮ್ಮೆ ಈ ರಾಜ್ಯದಲ್ಲಿ ಚುನಾವಣೆಗಳೆಂಬುದು ಪ್ರಹಸನವಾಗಿರುವುದನ್ನು ತೋರಿಸಿವೆ. ರಾಜ್ಯ ಆಳುವ ಪಕ್ಷದ ಭಯೋತ್ಪಾದನೆ ಚುನಾವಣಾ ಪ್ರಕ್ರಿಯೆಗಿಂತ ಮೊದಲೇ ಆರಂಭವಾಗಿತ್ತು. ಹಲವು ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರವನ್ನೇ ನಡೆಸಲು ಬಿಡಲಿಲ್ಲ, ಮತದಾರರ ಮೇಲೆ ಬೆದರಿಕೆ ಹಾಕಲಾಯಿತು. ಮತದಾನದ ದಿನ ನೂರಾರು ಮತಗಟ್ಟೆಗಳ ಅಪಹರಣ ಮಾಡಲಾಯಿತು, ಸುಳ್ಳು ಮತದಾನ ನಡೆಸಲಾಯಿತು. ಚುನಾವಣೆಯ ಫಲಿತಾಂಶಗಳ ಅಂಕಿ-ಅಂಶಗಳೇ ಇವೆಲ್ಲದಕ್ಕೆ ಸಾಕ್ಷಿಯಾಗಿವೆ ಎಂದು ಎಡರಂಗದ ವಕ್ತಾರರು ಹೇಳಿದ್ದಾರೆ.

ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಪ್ರಹಾರ ನಡೆಯುತ್ತಿರುವಾಗ ಟಿಎಂಸಿ ಮತ್ತು ಬಿಜೆಪಿ ನಡುವಿನ ಸಹಕಾರವೂ ಸ್ಪಷ್ಟವಾಗಿದೆ. ಟಿಎಂಸಿ ಮುಖ್ಯಸ್ಥರು ಬಿಜೆಪಿ ಕೇಂದ್ರ ಸರಕಾರದ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದರೂ ರಾಜ್ಯದಲ್ಲಿ ಆಳುವ ಪಕ್ಷದ ದಾಳಿ ಎಡರಂಗದ ಮೇಲೆಯೇ ಕೇಂದ್ರೀಕೃತವಾಗಿದೆ, ಬಿಜೆಪಿ ವಿರುದ್ಧ ಅಲ್ಲ. ಕೋಮುವಾದಿ ಶಕ್ತಿಗಳು ಇದರ ಪ್ರಯೋಜನ ಪಡೆಯುತ್ತಿವೆ.

ಪ್ರಜಾಪ್ರಭುತ್ವದ ಮರುಸ್ಥಾಪನೆಯ ಹೋರಾಟ ಮತ್ತು ಕೋಮುವಾದಿ ಶಕ್ತಿಗಳಿಗೆ ಪ್ರತಿರೋಧವನ್ನು ಎಡಪಕ್ಷಗಳ ಸ್ವತಂತ್ರ ಮುತುವರ್ಜಿಗಳ ಮೂಲಕ ತೀವ್ರಗೊಳಿಸಲು ಎಡರಂಗ ನಿರ್ಧರಿಸಿದೆ.

ಶ್ರಮ ಸಂಸ್ಕೃತಿಯ ಸಾಧಕಿ "ಧರ್ಮಪುರಿಯ ದೇವದಾಸಿ"

ಶಿವು ಹೊಸಹಳ್ಳಿ

"ಧರ್ಮಪುರಿಯ ದೇವದಾಸಿ" ಎಂಬ ಹೆಸರು ಕೇಳಿದೊಡನೆ ತಟ್ಟನೆ ನೆಪಾಗಿದ್ದು ಇದೊಂದು ದೇವದಾಸಿ ಮಹಿಳೆಯರ ಅಥವ ದೇವದಾಸಿ ಮಹಿಳೆಯೊಬ್ಬಳ ಬದುಕಿನ ದುರಂತ ಗಾಥೆಯ ಮೇಲೆ ಹೆಣೆದಿರುವ ಕಥೆಯಿರಬಹುದೆಂದೋ ಅಥವಾ ದೇವದಾಸಿ ಮಹಿಳೆಯೊಬ್ಬಳು ಈ ಪುರುಷ ಪ್ರಧಾನ ಸಮಾಜವನ್ನು ಎದುರಿಸಿ ತನ್ನ ಜೀವನವನ್ನು ಗಟ್ಟಿಗೊಳಿಸಿದ ಕಥೆಯಿರಬಹುದು ಎಂದೋ, ಒಂದು ಕಣ್ಣೋಟದಿಂದ ನಾಟಕ ನೋಡಲು ಬಂದವರಿಗೆ ಈ ರೀತಿಯ ಹೊಸ ಆಲೋಚನೆಯು ಕಥೆಯನ್ನು ಇಟ್ಟುಕೊಂಡು ಸಮುದಾಯ ಬೆಂಗಳೂರು ತಂಡ ನಾಟಕವನ್ನು ಕಟ್ಟಿದೆ ಎಂದು ಭಾವಿಸಲು ಬಹುಶಃ ಸಾಧ್ಯವಿರಲಿಲ್ಲ. ಅದಕ್ಕೆ ಸಮುದಾಯವು ಎಲ್ಲ ರಂಗ ತಂಡಗಳಿಗಿಂತ ಭಿನ್ನವಾಗಿ ನಿಲ್ಲುವುದು.

ಸಮುದಾಯ ಬೆಂಗಳೂರು ರಂಗ ತಂಡ ಅಭಿನಯಿಸಿದ ಧರ್ಮಪುರಿಯ ದೇವದಾಸಿ ನಾಟಕದ ಮೂಲ ಲೇಖಕ ಜರ್ಮನಿಯ ಹೆಸರಾಂತ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್. ಕನ್ನಡಕ್ಕೆ ಅಳವಡಿಸಿದವರು. ಲಿಂಗದೇವರು ಹಳೇಮನೆ. ನಾಟಕದ ನೆಲೆ ಧರ್ಮಪುರಿ. ಈ ಪ್ರದೇಶಕ್ಕೆ ನೆಲೆಕಾಣಲು ಬಂದು ನಿಲ್ಲಲು ಸೂರು ಮಾಡಿಕೊಂಡಿರುವ ದೇವದಾಸಿ ಕಲ್ಯಾಣಿ ಸುತ್ತ ನಾಟಕ ಹೆಣೆಯಲಾಗಿದೆ. ಉದ್ಯೋಗದಲ್ಲಿ ದೇವದಾಸಿಯೇ ಆಗಿದ್ದರೂ, ಇವಳನ್ನು ವೃತ್ತಿಯ ಜಾಡು ಹಿಡಿದು ಹಂಗಿಸುವ ಜನರಲ್ಲೂ, ಮಾನವೀಯತೆಗೆ ನೆಲೆ ಇದೆ ಎಂದು ಭಾವಿಸಿರುವ ಸದ್ಗುಣಿ ಕಲ್ಯಾಣಿ. ಅವಳ ಸದ್ಗುಣಗಳಿಗೆ ಒಲಿದ ದೇವರುಗಳು ಅವಳಿಗೆ ಸಹಾಯವಾಗಲೆಂದು ಒಂದಷ್ಟು ಹಣ ನೀಡುತ್ತಾರೆ. ಈ ಹಣದಿಂದ ಅವಳು ತನ್ನ ವೃತ್ತಿಯನ್ನು ಬದಲಾಯಿಸಲು ಬಯಸಿ ವ್ಯಾಪಾರಕ್ಕೆ ಅಂಗಡಿಯನ್ನು ಬಾಡಿಗೆಗೆ ತೆಗೆದುಕೊಂಡು ವ್ಯಾಪಾರದಲ್ಲಿ ತೊಡಗುತ್ತಾಳೆ.





ಈ ಹಂತದಲ್ಲಿಯೇ ಅವಳಿಗೆ ಮನುಷ್ಯರ ಹಲವು ಮುಖಗಳ ಪರಿಚಯವಾಗುವುದು. ಯಾರಿಂದಲೋ ಬಾಡಿಗೆಗೆ ಪಡೆದ ಅಂಗಡಿಗೆ ನಾನೇ ಮಾಲಕಿ ಎಂದು ಬಂದವಳು, ನಾನೇ ಮಾಡಿದ ಕಪಾಟಿದು ನನಗೆ ಬಾಕಿ ಬರುವವಗೆಗೂ ಅಂಗಡಿ ನಡೆಸಲು ಬಿಡುವುದಿಲ್ಲ ಎನ್ನುವ ಬಡಗಿ, ನಿನಗೆ ಪೂರ್ವಾಶ್ರಮದಲ್ಲಿ ನಾನು ಮಾಡಿದ ಸಹಾಯಕ್ಕೆ ನೀನು ನನ್ನ ಸೋಮಾರಿ ಕುಟುಂಬವನ್ನು ಸಾಕಬೇಕು ಎಂದು ಬರುವ ಕುಟುಂಬ – ಹೀಗೆ ಸಾಲು ಸಾಲು ಸವಾಲುಗಳನ್ನು ಸ್ವೀಕರಿಸುವ ಈ ದೇವದಾಸಿ, ತನ್ನ ಮೂಲವೃತ್ತಿಗೆ ಮರಳ ಬೇಕೆನ್ನುವ ಅಲೋಚನೆಯನ್ನು ಸಂಪೂರ್ಣವಾಗಿ ಮರೆಮಾಚುತ್ತಾಳೆ. ತನ್ನ ಜೀವನಕ್ಕೆ ಶ್ರಮ ಸಂಸ್ಕೃತಿಯೇ ಮೂಲಾಧಾರವೆಂದು ಭಾವಿಸುತ್ತಾಳೆ.

ಅಷ್ಟರಲ್ಲಾಗಲೇ ಅವಳಿಗೆ ನಿರುದ್ಯೋಗಿ ನಂದ ಕುಮಾರ ಮೇಲೆ ಪ್ರೇಮಾಂಕುರವಾಗುತ್ತದೆ. ದೇವದಾಸಿ ಮಹಿಳೆಯೊಬ್ಬಳು ತಾನು ಒಬ್ಬ ಪುರುಷನೊಂದಿಗೆ ಮಾತ್ರವೇ ಬಾಳುವ ಅಭಿಲಾಷೆಯನ್ನು ಇಟ್ಟುಕೊಳ್ಳುವುದು ಸಹಜ. ಅದರೆ ಅದನ್ನು ಸಾಧಿಸುವುದು ಇಂದಿನ ಸಮಾಜದಲ್ಲಿ ಅಷ್ಟು ಸುಲಭವಲ್ಲ. ಕಲ್ಯಾಣಿಯ ಪ್ರೇಮ ನಿವೇದನೆಯನ್ನು ಆರಂಭದಲ್ಲಿ ಒಪ್ಪುವ ನಂದ ಕುಮಾರ ನಂತರದಲ್ಲಿ ಹಲವಾರು ಬೇಡಿಕೆಗಳ ಬಂಧನದಲ್ಲಿ ಸಿಲುಕಿಸುತ್ತಾನೆ. ಅಷ್ಟರಲ್ಲಾಗಲೇ ಸಮಾಜದ ಬಗ್ಗೆ ಆಳವಾದ ತಿಳುವಳಿಕೆ ಹೊಂದಿರುವ ಕಲ್ಯಾಣಿ ತನ್ನ ಜೊತೆಗೆ ಊರಿನ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಇಟಗಿ ಭೀಮವ್ವನ ಅದರ್ಶದಿಂದ ನೂಲು ನೇಯುವ ಚರಕವನ್ನು ಖರೀದಿಸಿ ನೂಲು ನೇಯಲು ಕಲೆಯುತ್ತಾಳೆ. ಸೌಮ್ಯ ಸ್ವರೂಪ ಕಲ್ಯಾಣಿ ಜನರಿಗೆ ಶಿಸ್ತಿನ ಪಾಠ ಕಲಿಸಲು ಸಹೋದರ ಸಂಬಂಧಿ ಬಂಧು–ಮಿತ್ರನಾಗಿ ರೂಪಾಂತರಗೊಳ್ಳುತ್ತಾಳೆ. ಇದಕ್ಕೆ ಸ್ಫೂರ್ತಿ ನೀಡಿದವರು ಇದೇ ಜನರೇ ಆಗಿರುವುದು ಮಾತ್ರ ವಿಪರ್ಯಾಸ. ನಿರುದ್ಯೋಗ ಕಾರಣದಿಂದ ಸೋಮಾರಿಗಳು ಮತ್ತು ಹಸಿದ ಹೊಟ್ಟೆ ತುಂಬಿಸಲು ಕಳ್ಳರಾಗಿರುವ ಒಡನಾಡಿಗಳನ್ನು ಮತ್ತು ಅವರ ಕುಟುಂಬಗಳನ್ನು ಆರ್ಥಿಕ ಶಿಸ್ತಿಗೆ ಒಳಪಡಿಸಲು ಬಂಧು–ಮಿತ್ರನ ರೂಪದ ಸಹಾಯದಿಂದ ಕ್ಷೌರಿಕ ಗುಂತಕನ ಸಹಾಯವನ್ನು ಪಡೆದು ಒಂದು ನೂಲಿನ ಕಾರ್ಖಾನೆಯನ್ನು ಸ್ಥಾಪಿಸಿ ಅದರ ಮೂಲಕ ನಂದ ಕುಮಾರನನ್ನು ಸೇರಿದಂತೆ ಎಲ್ಲರಿಗೂ ಉದ್ಯೋಗ ನೀಡಿ ಶ್ರಮ ಸಂಸ್ಕೃತಿಯನ್ನು ಬೆಳೆಸುತ್ತಾಳೆ. ಆ ಮೂಲಕ ಊರಿಗೆ ಮಾದರಿಯಾಗಿ ನಿಲ್ಲುತ್ತಾಳೆ.

ಈ ನಾಟಕವು ಹಲವು ಮುಖಗಳನ್ನು ಮತ್ತು ಮುಖವಾಡಗಳನ್ನು ಬಳಸಿಕೊಂಡು ಕಟ್ಟಿರುವ ನಾಟಕವಾಗಿದ್ದು, ವಿನ್ಯಾಸ ಮತ್ತು ನಿರ್ದೇಶನದ ಹೊಣೆಹೊತ್ತಿರುವ ಶಶಿಧರ್ ಭಾರಿಘಾಟ್‌ರವರು ಅಭಿನಯ ಮತ್ತು ವಿನ್ಯಾಸಗಳಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಕಲಾವಿದರಿಗೆ ನಟನೆಯಲ್ಲಿ ಯಾವುದೇ ತಾರತಮ್ಯವಿಲ್ಲದ ನಟನೆಗೆ ಅವಕಾಶಗಳನ್ನು ನೀಡಲಾಗಿದೆ. ಯಾವೊಂದು ಪಾತ್ರವು ಇಲ್ಲಿ ಏರಿಸಲ್ಪಟ್ಟಿಲ್ಲ ಅಥವಾ ತುಳಿಯಲ್ಪಟ್ಟಿಲ್ಲ. ಎಲ್ಲವೂ ಸಹಜತೆಯನ್ನು ಮತ್ತು ಶುದ್ಧತೆಯನ್ನು ಕಾಪಾಡಿಕೊಂಡಿವೆ. ರಂಗ ಸಜ್ಜಿಕೆ ಮತ್ತು ಬೆಳಕು ಸುಧಾರಿಸಬೇಕಿತ್ತು. ಜನಾರ್ಧನ(ಜನ್ನಿ)ರವರ ಮಾರ್ಗದರ್ಶನದಲ್ಲಿ ಮೂಡಿರುವ ಹಿನ್ನೆಲೆ ಸಂಗೀತ ಹಿತವೆನಿಸುತ್ತದೆ, ಹಾಡುಗಳು ಮತ್ತೆ ಮತ್ತೆ ಕಿವಿಗಳಲ್ಲಿ ಗುನಗುನಿಸುತ್ತವೆ. ಅದರಲ್ಲೂ ನೀರು ಕೊಳ್ಳಿರೇ, ನೀರು ಕೊಳ್ಳಿರೇ ಹಾಡಂತೂ ಸಿನಿಮಾ ಗೀತೆಗಳಿಗಿಂತ ಹೆಚ್ಚು ಮತ್ತೆ ಮತ್ತೇ ಕೇಳಬೇಕೆನ್ನಿಸುತ್ತದೆ. ಒಟ್ಟಾರೆಯಾಗಿ ಧರ್ಮಪುರಿಯ ದೇವದಾಸಿ ನಾಟಕವು ದೇವದಾಸಿಯರ ಹೊಸ ಬದುಕಿಗೆ ಮುನ್ನುಡಿ ಹಾಕಿದರೆ, ಶ್ರಮ ಸಂಸ್ಕೃತಿಯನ್ನೇ ನಂಬಿರುವ ಶ್ರಮಿಕ ದುಡಿಮೆಗಾರರ ಬದುಕನ್ನು ಗೌರವಿಸುತ್ತದೆ.

ಸಿಪಿಐ(ಎಂ)ನಿಂದ ನಿವೇಶನ ರಹಿತರ ಭೇಟಿ



ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ದಳಸನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಕ ಹೂವಳ್ಳಿ ಗ್ರಾಮದಲ್ಲಿನ ನಿವೇಶನ ರಹಿತ ಕಡು ಬಡವರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹಲವಾರು ವರ್ಷಗಳಿಂದ ನಿವೇಶನಕ್ಕಾಗಿ ಹೋರಾಟ ನಡೆಸುತ್ತಿದ್ದರೂ ಇಲ್ಲಿಯ ತನಕ ಜನತೆಗೆ ನಿವೇಶನವನ್ನು ಹಂಚಿಕೆ ಮಾಡಿಲ್ಲ.

ನವೆಂಬರ್ 23ರಂದು ಗ್ರಾಮಕ್ಕೆ ಭೇಟಿ ನೀಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ "ಗ್ರಾಮದ ಸಮೀಪ ಸರ್ಕಾರಿ ಜಮೀನು ಇದ್ದರೂ, ಇದರಲ್ಲಿ ನಿವೇಶನಗಳನ್ನು ವಿಂಗಡಿಸಿ ಬಡವರಿಗೆ ಹಂಚಿಕೆ ಮಾಡುವಂತೆ ತಾಲ್ಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಸರ್ಕಾರ ಮತ್ತು ತಾಲ್ಲೂಕು ಆಡಳಿತ ನಿರ್ಲಕ್ಷ್ಯ ಧೋರಣೆಯನ್ನು ವಿರೋಧಿಸಿ ಗ್ರಾಮದ ನಿವೇಶನ ರಹಿತರು ಗುಡಿಸಲುಗಳನ್ನು ಹಾಕಲಾಗಿದೆ" ಎಂದು ತಿಳಿಸಿದರು.

ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಪಿ.ಆರ್. ಸೂರ್ಯನಾರಾಯಣ, ಜಿಲ್ಲಾ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್, ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಪಾತಕೋಟೆ ನವೀನ್ ಸ್ಥಳಕ್ಕೆ ಭೇಟಿ ನೀಡಿ, ನಿವೇಶನ ರಹಿತರ ಸಭೆ ನಡೆಸಿ ಹೋರಾಟಕ್ಕೆ ಬೆಂಬಲ ನೀಡಿದರು. ಬೇಡಿಕೆ ಈಡೇರುವವರೆಗೂ ನಿಮ್ಮ ಜೊತೆ ನಾವು ಇದ್ದೇವೆ ಎಂದು ಮುಖಂಡರು ತಿಳಿಸಿದರು.

ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗಾಗಿ ಪ್ರತಿಭಟನೆ



ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆ ನಡೆಸಿದ ಎಸ್ಎಫ್ಐ ಕಾರ್ಯಕರ್ತರು ಜಾಲಹಳ್ಳಿಯ ಜಗದಾರಾಧ್ಯ ಜಯಶಾಂತಲಿಂಗೇಶ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿಗೆ ಮುಂದಾಗಿದ್ದು, ಶಿಕ್ಷಣ ಇಲಾಖೆಯ ತನಿಖಾ ವರದಿಯಿಂದ ಸಾಬೀತಾಗಿದ್ದರೂ ವಿದ್ಯಾರ್ಥಿಗಳಿಂದ ಪಡೆದ ಹೆಚ್ಚುವರಿ ಶುಲ್ಕ ಪಾಲಕರಿಗೆ ನೀಡಲು ಹಿಂದೇಟು ಹಾಕುವುದನ್ನು ಖಂಡಿಸಿ ನವೆಂಬರ್ 23ರಂದು ಪ್ರತಿಭಟನೆ ನಡೆಸಿದರು.

ಈಗಾಗಲೇ ಡಿಡಿಪಿಐ ಕಛೇರಿ ಮುಂಭಾಗ ಧರಣಿ ನಡೆಸಲಾಗಿದೆ. ಆಗ ಸ್ಥಳಕ್ಕೆ ಆಗಮಿಸಿದ ಶಿಕ್ಷಣಾಧಿಕಾರಿ ರಾಮಾಂಜನೇಯರವರು ಭೇಟಿ ನೀಡಿ ಈಗಾಗಲೇ ಶಾಲಾ ಮುಖ್ಯೋಪಾಧ್ಯಕರು ಹೆಚ್ಚುವರಿ ಶುಲ್ಕ ಒಂದು ವಾರದ ಒಳಗಾಗಿ ಪಾಲಕರಿಗೆ ತಲುಪಿಸುತ್ತೇವೆಂದು ಬರಹದಲ್ಲಿ ಬರೆದು ಕೊಟ್ಟಿರುತ್ತಾರೆ ಶುಲ್ಕ ಮರುಪಾವತಿಸದಿದ್ದಲ್ಲಿ ನಾವು ಶಿಕ್ಷಣ ಕಾಯ್ದೆಯಡಿಯಲ್ಲಿ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರು.

ಆದರೆ ಕ್ರಮವಹಿಸದಿರುವುದನ್ನು ಖಂಡಿಸಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಮತ್ತೊಮ್ಮೆ ಧರಣಿ ನಡೆಸಲಾಗಿದೆ. ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಜಿಲ್ಲಾಧ್ಯಕ್ಷರಾದ ಶಬ್ಬೀರ್, ಮುಖಂಡರಾದ ಶಿವುಕುಮಾರ ಮ್ಯಾಗಳಮನಿ, ಅಂಬು, ತಿಮ್ಮಣ್ಣ, ಗುರುನಾಯಕ, ರಂಗನಾಥ ನಾಯಕ, ನಿಂಗಣ್ಣ ಮಕಾಶಿ, ಬಸವರಾಜ್, ಅಂಬರೀಶ್, ಮೌನೇಶ್, ರಾಹುಲ್ ಪೂಜಾರಿ, ಮಂಜು, ಮಹಾಲಿಂಗ ಇತರರು ಭಾಗವಹಿಸಿದ್ದರು.

ವಕ್ಫ ಸಮಿತಿ ಸದಸ್ಯನ ಮೇಲೆ ವಂಚನೆ ಪ್ರಕರಣ

ವಿಜಯಪುರ ಜಿಲ್ಲೆಯ ಅಬ್ದುಲ ಅಜೀಜ್ ಅಬ್ಬಾಸಾಬ ಸಿಂದಗೀಕರ ಅವರ ಮೇಲೆ ವಂಚನೆ ಪ್ರಕರಣ ದಾಖಲಾಗಿದೆ. ಇವರು ನಗರದ ಜುಲ್ಮೆ ಗಲ್ಲಿಯ ಮೈಹಿಬೂಬ್‌ಸುಬಾನಿ ಪಂಚಕಟ್ಟಾ, ಅಶೂರ್‌ಖಾನಾ ಮತ್ತು ಮಸೀದೆ ಬಿಲಾಲ್ ಈ. 2001 ರಿಂದ 2004 ಅವಧಿಯಲ್ಲಿ ಜಮಾತ್‌ನ ಅಧ್ಯಕ್ಷರಾಗಿದ್ದು ಸದರಿಯವರು ಬಿಲಾಲ್ ಮಸೂತಿ ಆವರಣದಲ್ಲಿ ಯುಬಿಎಸ್ ನಂ.11 ಶಾಲೆಯು ನಡೆಯುತ್ತಿದ್ದು, ಶಾಲೆಯ ಕಟ್ಟಡದ ಬಾಡಿಗೆಯು 2001 ರಿಂದ 2014ರವರೆಗೆ 4 ಲಕ್ಷ 68 ಸಾವಿರ 240 ರೂಪಾಯಿ ಇರುತ್ತವೆ.

ಆದರೆ ಸದರಿಯವರು 2012–13 ಮತ್ತು 2013–14 ರಲ್ಲಿ ಶಾಲೆಯ ಬಾಡಿಗೆಯು 4,400 ರೂಪಾಯಿ ತೋರಿಸಿ ಜಿಲ್ಲಾ ವಕ್ಫ ಬೋರ್ಡಿಗೆ ಅಡಿಟ್ ವರದಿ ಸಲ್ಲಿಸಿದ್ದಾರೆ. ಕಾರಣ ಇವರನ್ನು ಕರ್ನಾಟಕ ರಾಜ್ಯ ವಕ್ಫ ಬೋರ್ಡ್‌ನಿಂದ ದಿನಾಂಕ: 20–10–2016 ರಂದು ಜಿಲ್ಲಾ ಸಲಹಾ ಸಮಿತಿ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿದೆ ಮತ್ತು ಇವರ ಮೇಲೆ ಗೋಲ್‌ಗುಮ್ಮಟ ಪೊಲೀಸ್ ಠಾಣೆಯಲ್ಲಿ ವಂಚನೆ, ಮೋಸ ಪ್ರಕರಣ ದಾಖಲಿಸಿದರು ಆರೋಪಿಯು ನಗರದಲ್ಲಿ ರಾಜಾರೋಷವಾಗಿ ತಿರುಗಾಡುತ್ತಿದ್ದಾನೆ ಎಂದು ಪ್ರಕಟಣೆಯಲ್ಲಿ ಸೈಯ್ಯದ ಮೊಹಮ್ಮದ ಹುಸೇನ್ ಇನಾಂದಾರ ಸಮಾಜ ಸೇವಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಮೋದಿ ಸರಕಾರಕ್ಕೆ ಕಿಸಾನ್ ಸಂಘರ್ಷ ರ್‍ಯಾಲಿಯ ಎಚ್ಚರಿಕೆ

ಮೋದಿ ಸರಕಾರದ ರೈತ–ವಿರೋಧಿ ನೀತಿಗಳ ವಿರುದ್ದ ದೇಶದ ಮೂಲೆ ಮೂಲೆಗಳಿಂದ ಬಂದ ಸಾವಿರಾರು ರೈತರು ದೆಹಲಿಯಲ್ಲಿ ನವೆಂಬರ್ 24ರಂದು ನಡೆದ ಕಿಸಾನ್ ಸಂಘರ್ಷ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಆ ಮೇಲೆ ಪಾರ್ಲಿಮೆಂಟಿಗೆ ಮೆರವಣಿಗೆಯಲ್ಲಿ ಹೋಗಿ ರೈತ–ವಿರೋಧಿ ನೀತಿಗಳ ವಿರುದ್ದ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು. ಬಿಜೆಪಿ ಸರಕಾರದ ರೈತ–ವಿರೋಧಿ ನೀತಿಗಳನ್ನು ವಿರೋಧಿಸುವ, ಕೃಷಿ ಬಿಕ್ಕಟ್ಟು ಪರಿಹರಿಸುವ ಕ್ರಮಗಳಿಇಗಾಗಿ ಒತ್ತಾಯಿಸುವ ಘೋಷಣೆಗಳನ್ನು ಕೂಗಿದರು. ನೋಟು ನಿಷೇಧದಿಂದ ರೈತರು ಇನ್ನಷ್ಟು ಸಂಕಷ್ಟಗಳಿಗೆ ಸಿಕ್ಕಿದ್ದರೂ, ಅದನ್ನು ಲೆಕ್ಕಿಸದೆ ದಕ್ಷಿಣದ ಕೇರಳ, ತಮಿಳುನಾಡುಗಳಿಂದ ಈಶಾನ್ಯದ ಆಸ್ಸಾಂ ಮಣಿಪುರ ತ್ರಿಪುರಗಳಿಂದ ಉತ್ತರದ ಜಮ್ಮು–ಕಾಶ್ಮೀರದಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದರು. ದೆಹಲಿಯ ನಡುಗಿಸುವ ಚಳಿಯಲ್ಲಿ ಮವೆಂಬರ್ 23ರಂದೇ ರಾಮಲೀಲಾ ಮೈದಾನಿನಲ್ಲಿ ಸೇರಲಾರಂಬಿಸಿದ್ದರು.

ಕಳೆದ 22 ದಿನಗಳಿಂದ ವಿರುದುನಗರ, ಕನ್ಯಾಕುಮಾರಿ, ಜಮ್ಮು ಮತ್ತು ಕಲ್ಕತ್ತಾಗಳಿಂದ ಹೊರಟ 4 ಜಾಥಾಗಳಲ್ಲಿ 20 ಸಾವಿರ ಕಿ.ಮಿ. ಕ್ರಮಿಸಿ ರೈತರು ಹಾಗೂ ಗ್ರಾಮೀಣ ಬಡವರು ಬಂದಿದ್ದರು. "ಕೃಷಿ ಉಳಿಸಿ, ರೈತರನ್ನು ಉಳಿಸಿ, ದೇಶ ಉಳಿಸಿ" ಮತ್ತು "ಆತ್ಮಹತ್ಯೆ ಬೇಡ, ನವ–ಉದಾರವಾದಿ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಐಕ್ಯ ಹೋರಾಟ" ಜಾಥಾದ ಘೋಷಣೆಗಳಾಗಿದ್ದವು. ಕೃಷಿಯ ಕಾರ್ಪೊರೆಟೀಕರಣಕ್ಕೆ ಪ್ರತಿರೋಧ ಒಡ್ಡುವ ಮತ್ತು ಕೃಷಿ ಸಹಕಾರಿಗಳನ್ನು ಬಲಗೊಳಿಸುವ ಬದಲಿ ಕೃಷಿ ನೀತಿಗಳಿಗೆ ಕಿಸಾನ್ ಸಂಘರ್ಷ ರ್‍ಯಾಲಿ ಒತ್ತಾಯಿಸಿತು.

ರ್‍ಯಾಲಿಯ ಅಧ್ಯಕ್ಷತೆಯನ್ನು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಆತ್ಮಾರಾಂ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷ ಎನ್.ಕೆ.ಶುಕ್ಲಾ ನೆರೆದಿದ್ದವರನ್ನು ಸ್ವಾಗತಿಸಿದರು. ನಾಲ್ಕು ಜಾಥಾಗಳ ನಾಯಕತ್ವ ವಹಿಸಿದ್ದ ಕಿಸಾನ್ ಸಭಾದ ನಾಯಕರುಗಳಾದ ಆತ್ಮಾರಾಂ (ಅಧ್ಯಕ್ಷ), ಹನ್ನನ್ ಮೊಲ್ಲಾ (ಪ್ರಧಾನ ಕಾರ್ಯದರ್ಶಿ), ವಿಜು ಕೃಷ್ಣನ್ (ಜಂಟಿ ಕಾರ್ಯದರ್ಶಿ), ಅಶೋಕ ಧವಲೆ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಾ ರೈತರಿಗೆ ದ್ರೋಹ ಬಗೆಯುತ್ತಿರುವ ಬಿಜೆಪಿ ಸರಕಾರವನ್ನು ಕಟುವಾಗಿ ಟೀಕಿಸಿದರು. ಭೂಮಿ, ನೀರು ಮತ್ತು ಗಣಿ ಸಂಪನ್ಮೂಲಗಳ ಕಾರ್ಪೊರೆಟ್ ಲೂಟಿಗೆ ಕುಮ್ಮಕ್ಕು ಕೊಡುವ ಸರಕಾರದ ನೀತಿಗಳ ವಿರುದ್ಧ ರೈತ–ಗ್ರಾಮೀಣ ಬಡವರ ಐಕ್ಯ ಪ್ರತಿ–ರೋ ಧ ಒಡ್ಡಲಾಗುವುದು ಎಂದು ಎಚ್ಚರಿಕೆ ಕೊಟ್ಟರು. ಕಿಸಾನ್ ಸಭಾ ರೈತ–ಪರ ಬದಲಿಗಾಗಿ ಐಕ್ಯ ಹೋರಾಟಗಳನ್ನು ಸಂಘಟಿಸುವುದಾಗಿಯೂ ಹೇಳಿದರು. ಜಾತಿ ದಬ್ಬಾಳಿಕೆ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುತ್ತಾ, ವಿಚ್ಛಿದ್ರಕಾರಿ ಶಕ್ತಿಗಳನ್ನು ಸೋಲಿಸಬೇಕೆಂದು ರ್‍ಯಾಲಿ ಕರೆ ನೀಡಿತು.

ಈ ಸರಕಾರ ಅಧಿಕಾರಕ್ಕೆ ಬಂದ ನಂತರ ರೈತರ ಹಾಗೂ ಗ್ರಾಮೀಣ ಬಡವರ ಹೆಚ್ಚುತ್ತಿರುವ ಸಂಕಷ್ಟಗಳ ಕಡೆಗೆ ಪಾರ್ಲಿಮೆಂಟ್ ಸದಸ್ಯ ಹಾಗೂ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ತಮ್ಮ ಭಾಷಣದಲ್ಲಿ ಗಮನ ಸೆಳೆದರು. ಕಾರ್ಪೊರೆಟ್ ಕಂಪನಿಗಳಿಗೆ ನೀಡಿರುವ ಭಾರಿ ರಿಯಾಯಿತಿಗಳು ಹಾಗೂ ನೋಟು ನಿಷೇಧದಿಂದ ಜನತೆ ಎದುರಿಸುತ್ತಿರುವ ಸಂಕಷ್ಟಗಳ ವಿರುದ್ಧ ನವೆಂಬರ್28ರಂದು ಐಕ್ಯ ಪ್ರತಿಭಟನೆಯಲ್ಲಿ ಪಾಲುಗೊಳ್ಳಬೇಕೆಂದು ಯೆಚುರಿ ಕರೆ ಕೊಟ್ಟರು.

ಸಿಐಟಿಯು ಅಧ್ಯಕ್ಷ ಎ.ಕೆ.ಪದ್ಮನಾಭನ್, ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ, ಡಿ.ವೈ.ಎಫ್.ಐ. ಅಧ್ಯಕ್ಷ ಎಂ.ಬಿ.ರಾಜೇಶ್, ಎಸ್.ಎಫ್.ಐ. ಕಾರ್ಯದರ್ಶಿ ವಿಕ್ರಮ ಸಿಂಗ್, ಹಿಮಾಚಲ ಸೇಬು ಬೆಳೆಗಾರರ ಸಂಘದ ರಾಕೇಶ್ ಸಿಂಗ ಮತ್ತಿತರರು ರ್‍ಯಾಲಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದರು. ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚದ ಸಂಚಾಲಕ ಜೀತೇಂದ್ರ ಚೌಧರಿ, ಕಿಸಾನ್ ಸಭಾ(ಅಜೋಯ್ ಭವನ)ದ ಪ್ರಧಾನ ಕಾರ್ಯದರ್ಶಿ ಅತುಲ್ ಅಂಜನ್, ಭೂಮಿ ಅಧಿಕಾರ ಆಂದೋಲನದ ಸುನಿಲಂ, ಜನ ಚಳುವಳಿಗಳ ರಾಷ್ಟ್ರೀಯ ಮೈತ್ರಿಕೂಟ(ಎನ್.ಎ.ಪಿ.ಎಂ)ಸ ಮೇಧಾ ಪಾಟ್ಕರ್ ನವ–ಉದಾರವಾದದ ಹಾಗೂ ಭೂಮಿಯ ಕಾರ್ಪೊರೆಟ್ ಲೂಟಿಯ ವಿರುದ್ಧ ಐಕ್ಯ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು.

ರಾಜ್ಯಗಳಲ್ಲೂ ನವ–ಉದಾರವಾದದ ವಿರುದ್ಧ ಹಾಗೂ ಆತ್ಮಹತ್ಯೆಗಳಿಗೆ ಈಡಾಗಿರುವ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಸಮರಶೀಲ ಐಕ್ಯ ಹೋರಾಟಗಳನ್ನು ಸಂಘಟಿಸಲು ರ್‍ಯಾಲಿ ಕರೆ ನೀಡಿತು. ನೋಟು ನಿಷೇಧದಿಂದ ಜನತೆ ಎದುರಿಸುತ್ತಿರುವ ಸಂಕಷ್ಟಗಳ ವಿರುದ್ಧ ನವೆಂಬರ್28ರಂದು ಐಕ್ಯ ಪ್ರತಿಭಟನೆಯಲ್ಲಿ ಪಾಲುಗೊಳ್ಳಬೇಕೆಂದು ರೈತರು ಹಾಗೂ ಗ್ರಾಮೀಣ ಬಡವರಿಗೆ ರ್‍ಯಾಲಿ ಕರೆ ನೀಡಿತು.







ಜನಶಕ್ತಿ ಗ್ರಾಫಿಕ್ಸ್

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086 Editor : G.V.SRIRAMA REDDY